# ಲಂಕೇಶ್

ಇಟಲಿಯಲ್ಲಿ ಮುಳುಗಿದ ಹಡಗಿನ ಕತೆ

ಫೆಬ್ರವರಿ 8, 2012 ಪುಟ 20 ರೂ. 14/-



ಮಾರಸಂದ್ರ ಮುನಿಯಪ್ಪ

## ದಲಿತರಿಗೆ ಮಾರಿ



ಅಣ್ಣಾ ಬಾಂಡ್

## 25 ಕೋಟಿ ಡೀಲ್!



## ಎನ್‌ಸಿಪಿ ಎಂಬ ಮಾಯಾಜಿಂಕೆ

ಗಣಿ ಕಳ್ಳರ ಕೈಗೆ

## ಪಶ್ಚಿಮಘಟ್ಟ



ಕೊಳ್ಳೇಗಾಲ

## ಈ ಸಾವು ನ್ಯಾಯವೇ?



ಸಿಂಧಗಿ

## ಮಠದಲ್ಲಿ ಸ್ವಾಮಿ ಮರ್ಡರ್!

## ದಲಿತ ರಾಜಕಾರಣದ 75 ವರ್ಷಗಳು

# ಪ್ರಶ್ನೆಗಳಾದ ಉತ್ತರಗಳು !

ಭಾರತದ ಸಂವಿಧಾನಕ್ಕೆ 63 ವರ್ಷಗಳು ತುಂಬುತ್ತಿರುವ ಈ ಸಮಯದಲ್ಲೇ ಅಂಬೇಡ್ಕರ್ ಪ್ರಾರಂಭಿಸಿದ ದಲಿತ ವಿಮೋಚನೆಯ ಹಾಗೂ ಆಧುನಿಕ ವಿಮೋಚನಾವಾದಿ ಪ್ರಜಾತಾಂತ್ರಿಕ ರಾಜಕಾರಣಕ್ಕೆ 75 ವರ್ಷಗಳು ತುಂಬುತ್ತಿದೆ. ಆದರೆ ಈ 75 ವರ್ಷಗಳಲ್ಲಿ ಅಂಬೇಡ್ಕರ್ ಎತ್ತಿದ ಪ್ರಶ್ನೆಗಳಿಗೆ ನಮ್ಮ ಸಂಸದೀಯ ರಾಜಕೀಯ ವ್ಯವಸ್ಥೆ ಜಾತಿಗ್ರಸ್ತ ಸಮಾಜ ಯಾವ ಉತ್ತರ ನೀಡಿದೆ. ಕಳೆದ 75 ವರ್ಷಗಳ ದಲಿತ ರಾಜಕಾರಣ ದಲಿತರನ್ನು ಎಷ್ಟರಮಟ್ಟಿಗೆ ವಿಮೋಚನೆಯೆಡೆಗೆ ನಡೆಸಿದೆ.

ದೇಶದ ಸ್ವಾತಂತ್ರ್ಯ ಮತ್ತು ಸಂವಿಧಾನ ರಚನೆಯಲ್ಲಿ ದಲಿತ ಪರವಾದ ಹಕ್ಕುಗಳನ್ನು ದಕ್ಕಿಸಿಕೊಳ್ಳಲು ಅಂಬೇಡ್ಕರ್ ಏಕಾಂಗಿಯಾಗಿ ಹೋರಾಡಿದ್ದರು. ನಂತರದಲ್ಲಿ ಅಂಬೇಡ್ಕರೋತ್ತರ ದಲಿತ ರಾಜಕಾರಣ ದಲಿತರ ವಿಮೋಚನೆಯೆಡೆಗೆ ಯಾವುದಾದರೂ ಮಹತ್ತರ ಮೈಲಿಗಲ್ಲುಗಳನ್ನು ಕ್ರಮಿಸಿದೆಯೇ? ಜಾಗತೀಕರಣ ಮತ್ತು ಹಿಂದೂತ್ವ ಎಂಬ ಎರಡು ದಲಿತ ವಿರೋಧಿ ಮಾನವ ವಿರೋಧಿ ಶಕ್ತಿಗಳು ಸಂಸದೀಯ ರಾಜಕಾರಣದ ಚೌಕಟ್ಟಿನಲ್ಲಿ ದಲಿತ ಸಮುದಾಯ ಪಡೆದಿದ್ದ ಸೌಲಭ್ಯಗಳನ್ನೂ ನುಂಗಿಹಾಕುತ್ತಿರುವಾಗ, ಸಂವಿಧಾನ ಬದ್ಧವಾಗಿಯೇ ಅಂಬೇಡ್ಕರ್ ಆಶಯಕ್ಕೆ ವಿರುದ್ಧವಾದ ಶಾಸನಗಳು ಜಾರಿಯಾಗಿ ಸಂಸದೀಯ ಸಂಸ್ಥೆಗಳು ವ್ಯವಸ್ಥಿತವಾಗಿ ಉಳ್ಳವರ ಇಸ್ಪೀಟ್ ಕ್ಲಬ್ ಆಗುತ್ತಿರುವಾಗ ದಲಿತ ವಿಮೋಚನಾವಾದಿ ರಾಜಕಾರಣದ ಮುಂದಿರುವ ಸವಾಲುಗಳೇನು?

ದಲಿತ ರಾಜಕಾರಣಕ್ಕೆ 75 ವರ್ಷಗಳು ತುಂಬುತ್ತಿರುವ ಈ ಹೊತ್ತಿನಲ್ಲಿ ದಲಿತ ವಿಮೋಚನೆಗೆ ಮತ್ತು ಸಮಾನತೆಗೆ ಬದ್ಧರಾದ ಎಲ್ಲರೂ ಈ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾದ ಸಂದರ್ಭ ಎದುರಾಗಿದೆ.



ಶಿವಸುಂದರ್

## ಚಾರ್ವಾಕ

ಈ ದೇಶದ ಮತ್ತು ದಲಿತ ಸಮುದಾಯದ ಪ್ರಧಾನ ಶತ್ರುಗಳು ಬ್ರಾಹ್ಮಣವಾದ ಮತ್ತು ಬಂಡವಾಳವಾದ ಎಂದು ಅಂಬೇಡ್ಕರ್ ಅತ್ಯಂತ ಸ್ಪಷ್ಟವಾಗಿ ಗುರುತಿಸಿದ್ದರು.

ಯಾವುದಾದರೂ ಒಂದು ದೇಶದಲ್ಲಿ ಪ್ರಜಾತಂತ್ರ ಸಫಲವಾಗಬೇಕೆಂದರೆ ಆ ದೇಶದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪ್ರಜಾತಂತ್ರವಿರಬೇಕು ಎಂಬುದು ಅಂಬೇಡ್ಕರ್‌ರ ಸ್ಪಷ್ಟ ತಿಳಿವಳಿಕೆಯಾಗಿತ್ತು. ಕಾನೂನುಬದ್ಧವಾಗಿ ಜನರಿಗೆ ಹಕ್ಕುಗಳನ್ನು ನೀಡಿದರೂ ಆ ಹಕ್ಕುಗಳು ರಕ್ಷಿಸಲ್ಪಡುವುದು ಕಾನೂನಿಗಿಂತ ಹೆಚ್ಚಾಗಿ ಆ ಸಮಾಜದ ಸಾಮಾಜಿಕ ಮತ್ತು ನೈತಿಕ ಅಂತಸ್ಸಾಕ್ಷಿಯಿಂದ ಎಂಬುದು ಅಂಬೇಡ್ಕರ್ ಅವರ ವಿಮೋಚನಾವಾದಿ ರಾಜಕಾರಣದ ಸಾರಾಂಶ.

ಅಂಬೇಡ್ಕರ್‌ರವರು ದೇಶವಿಭಜನೆಯ ಕಾರಣದಿಂದ ಮತ್ತು ಕಾಂಗ್ರೆಸ್ ಕುತಂತ್ರದಿಂದ ಸಂವಿಧಾನ ರಚನಾ ಸಭೆಯ ಸದಸ್ಯತ್ವವನ್ನು ಕಳೆದುಕೊಂಡಾಗ ಈ ದೇಶದ ಭವಿಷ್ಯದ ಸಂವಿಧಾನ ಹೇಗಿರಬೇಕೆಂಬ ಬಗ್ಗೆ 1947ರ ಮಾರ್ಚ್‌ನಲ್ಲಿ ಸಂವಿಧಾನ ರಚನಾ ಸಭೆಯನ್ನು ಉದ್ದೇಶಿಸಿ– **'States and Minorities: What are Their Rights and How to Secure them in the Constitution of Free India'** - "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು: ಅವರ ಹಕ್ಕುಗಳೇನು ಮತ್ತು ಅದನ್ನು ಸ್ವತಂತ್ರ ಭಾರತದ ಸಂವಿಧಾನದ ಮೂಲಕ ಪಡೆದುಕೊಳ್ಳುವ ಬಗೆ ಹೇಗೆ"ಎಂಬ ಮನವಿಯೊಂದನ್ನು ಸಿದ್ಧಪಡಿಸಿದರು. ಇದನ್ನು ಅಂಬೇಡ್ಕರವರ ಕನಸಿದ **'Constitution of the United States of India'** ಎಂದೂ ಬಣ್ಣಿಸಲಾಗುತ್ತದೆ. ಹೀಗಾಗಿ ಇಲ್ಲಿ ಪ್ರಸ್ತಾಪಿತವಾಗಿರುವ ಸ್ವತಂತ್ರ ಭಾರತದ ರೂಪುರೇಷೆ ಮತ್ತು ಅದನ್ನು ಆಗುಮಾಡುವ ಶಾಸನಬದ್ಧ ಪರಿಗಳನ್ನು 1950ರ ಜನವರಿ 26ರಂದು ದೇಶಕ್ಕೆ ಕೊಡಮಾಡಲಾದ ಸಂವಿಧಾನವನ್ನೂ ಹೋಲಿಸಿ ನೋಡಿದಲ್ಲಿ ಅಂಬೇಡ್ಕರ್ ಅವರ ಸಂವಿಧಾನಕ್ಕೂ ಈ ದೇಶದ ಸಂವಿಧಾನಕ್ಕೂ ಇರುವ ಮೂಲಭೂತ ವ್ಯತ್ಯಾಸಗಳೂ ಗೊತ್ತಾಗುತ್ತದೆ.

"ಸ್ಟೇಟ್ಸ್ ಅಂಡ್ ಮೈನಾರಿಟೀಸ್"ನಲ್ಲಿ ಅಂಬೇಡ್ಕರ್‌ರವರು ಇಂದು ಐರೋಪ್ಯ ಮಾದರಿಯ ಪಾರ್ಲಿಮೆಂಟರಿ ಪ್ರಜಾತಂತ್ರ ಯೂರೋಪಿನಲ್ಲೂ ಅಲ್ಲಿನ ಜನರನ್ನು ಬಿಡುಗಡೆ ಮಾಡಿಲ್ಲ. ಭಾರತದಂತ ದೇಶದಲ್ಲಂತೂ ಕೇವಲ ಪಾರ್ಲಿಮೆಂಟರಿ ಪ್ರಜಾತಂತ್ರದಿಂದ ಈ ದೇಶದ ಜನರ ವಿಮೋಚನೆ ಸಾಧ್ಯವೇ ಇಲ್ಲವೆಂದು ಅಭಿಪ್ರಾಯಪಡುತ್ತಾರೆ. ಒಂದು ಪಾಲಿಮೆಂಟರಿ ಪ್ರಜಾತಂತ್ರಕ್ಕೆ ಸ್ವಾತಂತ್ರ್ಯ-ಲಿಬರ್ಟಿ ಮಾತ್ರ ಹೆಚ್ಚು ಪ್ರಿಯ ಮತ್ತು ಆದ್ಯತೆಯದ್ದು. ಆ ನಂತರವೇ ಸಮಾನತೆ ಅಥವಾ ಭ್ರಾತೃತ್ವ. ಆದರೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪರಂಪರಾನುಗತ ಅಸಮಾನತೆಯುಳ್ಳ ದೇಶವೊಂದರಲ್ಲಿ ಕೇವಲ ಸ್ವಾತಂತ್ರ್ಯ ಅಥವಾ ಕೇವಲ ಶಾಸನಬದ್ಧ ರಾಜಕೀಯ ಸಮಾನತೆಯು ಶೋಷಕ ವರ್ಗಗಳಿಗೆ ಮಾತ್ರ ಇನ್ನೂ ಹೆಚ್ಚು ಸ್ವಾತಂತ್ರ್ಯವನ್ನು ಕೊಡುತ್ತದೆ.

ಆದರೆ ಪ್ರಪಂಚದೆಲ್ಲೆಡೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಗಳು ರಾಜಕೀಯ ಸಮಾನತೆಯನ್ನು ಮಾತ್ರ ಸಂವಿಧಾನಾತ್ಮಕ ಶಾಸನಗೊಳಿಸಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಶಾಸನ ಸಭೆಗಳ ಮರ್ಜಿಗೆ ಬಿಟ್ಟಿವೆ. ಆದರೆ ಚುನಾವಣಾ ಪದ್ಧತಿಯಲ್ಲಿ ಪ್ರಬಲರೇ ಆರಿಸಿ ಬರುತ್ತಿರುವುದು ಎಲ್ಲಾ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಗಳ ಕಥೆಯೇ ಆಗಿರುವುದರಿಂದ ಯಾವ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಗಳಲ್ಲೂ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಳು ಜಾರಿಗೆ ಬಂದಿಲ್ಲ ಎಂದು ಅಂಬೇಡ್ಕರ್ ಎಚ್ಚರಿಸುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯಿಲ್ಲದ ದೇಶಗಳಲ್ಲಿ "ಒಬ್ಬ ಮನುಷ್ಯನಿಗೆ ಒಂದು ಓಟು" ಎಂಬ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೂಲಭೂತ ರಾಜಕೀಯ ಆಶಯವು "ಒಂದು ಓಟು ಒಂದು ಮೌಲ್ಯವಾಗಿ ಪರಿವರ್ತನೆಯಾಗುವುದೇ ಇಲ್ಲ ಎಂದು "ಸ್ಟೇಟ್ಸ್ ಅಂಡ್ ಮೈನಾರಿಟೀಸ್"ನ ನಾಲ್ಕನೇ ಅಂಶಕ್ಕೆ ನೀಡಿರುವ ವಿವರಣಾ ಟಿಪ್ಪಣಿಯಲ್ಲಿ ಸ್ಪಷ್ಟಪಡಿಸುತ್ತಾರೆ. ಮತ್ತು ಅದಕ್ಕೆ ಕಾರಣ ಐರೋಪ್ಯ ದೇಶಗಳ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಒಬ್ಬರಿಗೆ ಒಂದು ಓಟು ಮತ್ತು ಸಾರ್ವತ್ರಿಕ ಮತದಾನವೆಂಬ



ರಾಜಕೀಯ ಮೌಲ್ಯಗಳನ್ನು ದಾಟಿ ಮುಂದಕ್ಕೆ ಹೋಗದೇ ಇರುವುದೇ ಕಾರಣವೆಂದು ವಿವರಿಸುತ್ತಾರೆ.

ಹಾಗಾದರೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ರಾಜಕೀಯ ಸಮಾನತೆಯ ಜೊತೆಗೆ ಈಡೇರಿಸಿಕೊಳ್ಳುವ ಬಗೆ ಹೇಗೆ ಎಂಬ ಪ್ರಶ್ನೆ ಉಳಿಯುತ್ತದೆ. ಅಂಬೇಡ್ಕರ್ "ಅದಕ್ಕೆ ಇರುವ ಒಂದೇ ಉತ್ತರ ಡಿಕ್ಟೇಟರ್‌ಶಿಪ್–ನಿರಂಕುಶತ್ವ ಅಥವಾ ಪ್ರಭುತ್ವ ಸಮಾಜವಾದ– ಸ್ಟೇಟ್ ಸೋಷಿಯಲಿಸಂ– ಮೂಲಕ ಮಾತ್ರ ರಾಜಕೀಯ ಸಮಾನತೆಯನ್ನು ತರಲು ಸಾಧ್ಯ" ಎಂದು ಉತ್ತರಿಸುತ್ತಾರೆ. "ಆದರೆ ಯಾವ ಸ್ವಾತಂತ್ರ್ಯ ಪ್ರೇಮಿಯೂ ನಿರಂಕುಶತ್ವವನ್ನೂ ಒಪ್ಪಲಾರ. ಅದೇರೀತಿ ಸಮಾಜವಾದದ ಬಗೆಗೆ ಒಲವಿರುವ ಯಾವ ಪಾರ್ಲಿಮೆಂಟರಿ ಪ್ರಜಾತಂತ್ರವಾದಿಯೂ ನಿರಂಕುಶತ್ವಕ್ಕೆ ಒಪ್ಪಲಾರ" ಎಂತಲೂ ಅಂಬೇಡ್ಕರ್ ಹೇಳುತ್ತಾರೆ. ಮುಂದುವರೆದು "ಹಾಗಿದ್ದಲ್ಲಿ ಏಕಕಾಲದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವೂ, ಸ್ವಾತಂತ್ರ್ಯವೂ ಉಳಿದುಕೊಂಡು ಪ್ರಭುತ್ವ ಸಮಾಜವಾದ ಜಾರಿಗೆ ಬರಬೇಕೆಂದರೆ ಮೂಲಭೂತ ಹಕ್ಕುಗಳ ಭಾಗವಾಗಿಯೇ ಸಂವಿಧಾನಾತ್ಮಕ ಶಾಸನವಾಗಿ



ಸಾಮಾಜಿಕ-ಆರ್ಥಿಕ ಸಮಾನತೆಯೂ ಜಾರಿಗೆ ಬರುವಂತ ಸಂವಿಧಾನ ರಚನೆಯಾಗಬೇಕು" ಎಂದೂ ಆಗ್ರಹಿಸುತ್ತಾರೆ. ಅಂದರೆ ಓಟು ಹಾಕುವ ಹಕ್ಕಿನಂತೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯ ಹಕ್ಕೂ ಸಹ ಮೂಲಭೂತ ಹಕ್ಕಾಗುವುದು ಇದರ ಹಿಂದಿನ ಆಶಯ.

ಹೀಗಾಗಿ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಾಗಿ:

1. ಎಲ್ಲಾ ಕೀಲಕ ಕೈಗಾರಿಕೆಗಳ ಮತ್ತು ವಿಮೆ ಉದ್ಯ... ಸಂಪೂರ್ಣ ಒಡೆತನ ಪ್ರಭುತ್ವದ್ದೇ ಆಗಿರಬೇಕು ಹಾ... ಎಲ್ಲಾ ಶ್ರಮಜೀವಿಗಳಿಗೂ ಕಡ್ಡಾಯವಾಗಿ ಸರ್ಕಾರ ... ಮಾಡಿಸಬೇಕು
2. ಕೃಷಿಯು ರಾಷ್ಟ್ರೀಕರಣವಾಗಿ ಅದನ್ನು ಸರ್ಕಾರ... ಸಂಪೂರ್ಣವಾಗಿ ವಹಿಸಿಕೊಳ್ಳಬೇಕು.
3. ಖಾಸಗಿ ವ್ಯಕ್ತಿಗಳ ಬಳಿ ಇರುವ ಎಲ್ಲಾ ಜಮೀನ... ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಅ... ಅವರಿಗೆ ಕೊಡುವ ಪರಿಹಾರವನ್ನು ಸರ್ಕಾರದ ಹ... ರೂಪದಲ್ಲಲ್ಲದೇ ಡಿಬೆಂಚರ್ ರೂಪದಲ್ಲಿ ಕೊಡಬೇ... ಆ ಡಿಬೆಂಚರ್ (ಅಂದರೆ ಮುಂದೆ ಒಂದು ನಿಗ... ಮೊತ್ತದ ಹಣ ಪಾವತಿ ಮಾಡುವುದಾಗಿ ನೀಡ... ಪ್ರಮಾಣ ಪತ್ರ) ಅನ್ನು ಯಾವಾಗ ನಗದ... ಕೊಡಬೇಕೆಂಬ ತೀರ್ಮಾನ ಸರ್ಕಾರವೇ ಮಾಡಬೇ...
4. ಎಲ್ಲಾ ಕೃಷಿ ಜಮೀನನ್ನು ಸರ್ಕಾರವೇ ವಶಪಡಿಸಿಕೊಂ... ಅದನ್ನು ಹಳ್ಳಿಯ ರೈತರಿಗೆ ಉಳುಮೆ ಮಾಡಲು ಗೇ... ಬಿಟ್ಟುಕೊಡುತ್ತದೆ.
5. ಕೃಷಿ ಭೂಮಿ ಹಂಚಿಕೆ ಮಾಡುವಾಗ ಜಾತಿ-ಮತ... ಭೇದವಿಲ್ಲದೆ ಮತ್ತು ಭೂಮಾಲೀಕ, ಭೂಹಿ... ಕಾರ್ಮಿಕವೆನ್ನುವ ವರ್ಗಗಳು ಹುಟ್ಟದ ರೀತಿ ಹಂ... ಯಾಗಬೇಕು
6. ಕೃಷಿಗೆ ಬೇಕಾದ ಸಲಕರಣೆಗಳು ಇತ್ಯಾದಿ ಸಹಾಯ... ಸರ್ಕಾರವೇ ಮಾಡಬೇಕು.
7. ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಈ ಎಲ್ಲಾ ಯೋ... ಗಳನ್ನು ಸಂವಿಧಾನ ಜಾರಿಗೆ ಬಂದನಂತರ ತ್ವರಿತವ... ಮತ್ತು ಹೆಚ್ಚೆಂದರೆ ಹತ್ತು ವರ್ಷದೊಳಗೆ ಜಾ... ತರಲೇಬೇಕು.

ಇದು ಅಂಬೇಡ್ಕರ್ ಕಂಡಿದ್ದ ಕನಸಿನ ಸಂವಿಧಾನ..ಇ... ನಿಜಕ್ಕೂ ಸಾಕಾರಗೊಂಡಿದ್ದರೆ...ರೆ!!!???

ಆದರೆ ಸಂವಿಧಾನ ರಚನಾಸಭೆಯಲ್ಲಿದ್ದ ಊಳಿಗಮ... ಶಕ್ತಿಗಳು ಅಂಬೇಡ್ಕರರನ್ನು ಮತ್ತೆ ಸಂವಿಧಾನ ರಚನಾಸಭೆಯ... ಸೇರಿಸಿಕೊಂಡರೂ ಅವರ ಆಶಯಗಳನ್ನು ಸಂವಿಧಾನಾ... ಶಾಸನ ಮಾಡದ ಸಂಚು ರೂಪಿಸಿದರು. ಮೇಲಿನ ಎ... ಆಶಯಗಳನ್ನು ಪ್ರತಿಫಲಿಸುವ ಅಂಶಗಳು ನಮ್ಮ ಸಂವಿಧಾ... ನಾಲ್ಕನೇ ಪರಿಚ್ಛೇಧದಲ್ಲಿದೆ. ಆದರೆ ಅದಕ್ಕೆ ಶಾಸನಾ... ಅಧಿಕಾರವಿಲ್ಲದ ಪ್ರಭುತ್ವದ ನಿರ್ದೇಶನಾ ತತ್ವಗಳಾಗಿ ಮ... ಉಳಿದುಕೊಂಡಿದೆ.

ಆದ್ದರಿಂದಲೇ ಇಂದು ದಲಿತ ಸಮುದಾಯವ... ಒಳಗೊಂಡಂತೆ ಈ ದೇಶದ ಶೇ.80ರಷ್ಟು ಜನ ಸ್ವಾತ... ಪೂರ್ವಕ್ಕಿಂತಲೂ ಕಡಿಮೆ ಆಹಾರ ಸೇವಿಸುತ್ತಿದ್ದಾರೆ. ಶೇ.... ರಷ್ಟು ಬಾಲ ಕಾರ್ಮಿಕರಾಗಿದ್ದಾರೆ. ಶೇ.70 ರಷ್ಟು ದ... ಮಕ್ಕಳು, ಶೇ.90ರಷ್ಟು ಮುಸ್ಲಿಂ ಸಮುದಾಯ... ಮಕ್ಕಳು ಹೈಸ್ಕೂಲ್ ಮೆಟ್ಟಿಲನ್ನು ದಾಟುವುದಿ... 2.5 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ... ಉಳಿದ ರೈತಾಪಿ ಸಮೂಹ ಸಾವಿಗೆ ಸಮಾ... ಬದುಕನ್ನು ಬದುಕುತ್ತಿದ್ದಾರೆ. ದಲಿತರ ಮೇ... ದೌರ್ಜನ್ಯ ಅಲ್ಪಸಂಖ್ಯಾತರ ನರಹತ್ಯೆ ಹೆಚ್ಚುತ... ಇದೆ. ಪ್ರಜಾತಂತ್ರವನ್ನು ಬಹಿರಂಗವಾಗಿ... ವಿರೋಧಿಸುವ ಸಂವಿಧಾನ ವಿರೋಧಿ ಆಶ... ಗಳುಳ್ಳ ಸಂಘಪರಿವಾರ ಸಂವಿಧಾನಬದ್ಧವಾಗಿ... ಫ್ಯಾಸಿಸ್ಟ್ ಹಿಂದೂತ್ವವನ್ನು ಶಾಸನ ಮಾಡುತ್ತಿ...

ರಾಜಕೀಯ ಸ್ವಾತಂತ್ರ್ಯ ಮಾತ್ರ ಯಾವು... ರೀತಿಯಲ್ಲಿ ದಲಿತರ ವಿಮೋಚನೆ ಮಾಡು... ದರಲ್ಲಿ ವಿಫಲವಾಗಿದೆ. ಬದಲಿಗೆ ಅದರಲ್ಲಿ ಒಂ... ಫಲಾನುಭವಿ ಮಧ್ಯಮವರ್ಗವನ್ನು ಮಾತ್ರ ಸೃಷ್ಟಿಸು... ಯಶಸ್ವಿಯಾಗಿದೆ ಮತ್ತು ಅವರನ್ನು ಸಮುದಾಯ... ಶತ್ರುಗಳಾದ ಆಧುನಿಕ ಬಂಡವಾಳವಾದ ಮತ್ತು ಬ್ರಾಹ... ವಾದವೇ ಆಗಿರುವ ಜಾಗತೀಕರಣ ಮತ್ತು ಹಿಂದೂ... ವಕ್ತಾರರನ್ನಾಗಿ ಮಾಡಿಕೊಂಡಿದೆ.

▶

## ನೋ ಕಾಮೆಂಟ್ಸ್

"ವಿವೇಕಾನಂದರಂಥ ಪ್ರಖರ ವೈಚಾರಿಕ ವ್ಯಕ್ತಿತ್ವವನ್ನು ನಮ್ಮ ಚಲನಚಿತ್ರಗಳ ಸರ್ವಗುಣ ಸಂಪನ್ನ ಚಾಕಲೇಟ್ ನಾಯಕನಂತೆ ಕಲ್ಪಿಸಿಕೊಂಡಿದ್ದವರಿಗೆ ವಾಸ್ತವ ಸಂಗತಿಗಳ ಎದುರು ದಿಕ್ಕೆಟ್ಟಂಥಾಗಿರುವುದು ಅರ್ಥವಾಗುವಂಥದ್ದೇ... ವಿವೇಕಾನಂದರು ಮೀನನ್ನು ತಿನ್ನುವುದಿರಲಿ, ಅನೇಕ ಪೌರಾಣಿಕ ದೇವತೆಗಳು, ಋಷಿ ಮುನಿಗಳು ಗೋಮಾಂಸವನ್ನೂ ತಿನ್ನುತ್ತಿದ್ದರು. ಜೈನ, ವೀರಶೈವ ಧರ್ಮಗಳ ಅಹಿಂಸೆ, ಸಸ್ಯಾಹಾರಗಳೊಂದಿಗೆ ಸ್ಪರ್ಧಿಸುವುದಕ್ಕಾಗಿ ಪುರೋಹಿತಶಾಹಿ ಮೀನು ಮತ್ತು ಗೋಮಾಂಸವನ್ನು ಕಳೆದುಕೊಂಡಿತಲ್ಲವೇ?"

*ಡಾ. ಪಂಡಿತಾರಾಧ್ಯ*

"ಜೈಪುರ ಸಾಹಿತ್ಯ ಉತ್ಸವದಿಂದ ನನ್ನನ್ನು ದೂರ ಇಡುವ ದುರುದ್ದೇಶದಿಂದಲೇ ರಾಜಸ್ಥಾನ ಪೊಲೀಸರು ಭಯೋತ್ಪಾದಕರು ದಾಳಿ ಮಾಡುತ್ತಾರೆಂಬ ಪೊಳ್ಳು ಕಥೆ ಕಟ್ಟಿದ್ದಾರೆ."

*- ಸಲ್ಮಾನ್ ರಷ್ದಿ*

"ಅಲ್ಲಿ ಒಳಚರಂಡಿಗಳಲ್ಲಿ ಕೂಲಿಕಾರ್ಮಿಕರು ಬಿದ್ದು ಸಾಯುತ್ತಿರುವಾಗ ಇಲ್ಲಿ ರಾಜಕಾರಣಿಗಳನ್ನು ಹಿಡಿಯುವವರು ಯಾರೂ ಇಲ್ಲವಾಗಿದೆ. ಒಳಚರಂಡಿಗಳನ್ನು ಶುದ್ಧಿಗೊಳಿಸುವ ಸ್ಥಳಗಳಿಗೆ ಜಲಮಂಡಳಿಯ ಆಯುಕ್ತರು ಅಥವಾ ಯಾವುದೇ ಅಧಿಕಾರಿಗಳು ಜೀವಮಾನದಲ್ಲಿ ಒಮ್ಮೆಯಾದರೂ ಭೇಟಿ ನೀಡಿದ್ದೀರಾ?"

*- ಹೈಕೋರ್ಟ್ ವಿಭಾಗೀಯ ಪೀಠ*

"ನ್ಯಾಯಮೂರ್ತಿ ಬಸ್ನೂರ್‌ಮಠ್ ಮೇಲೆ ನನಗೆ ಯಾವುದೇ ವೈಯಕ್ತಿಕ ದ್ವೇಷವಿಲ್ಲ. ಅವರನ್ನೇ ನೇಮಕ ಮಾಡಬೇಕೆಂದು ಪದೇಪದೇ ಒತ್ತಡ ತರುವ ಹಿಂದಿನ ಘಟನಾವಳಿಗಳು ಸೂಕ್ತವಲ್ಲ. ಅದರ ಹಿಂದೆ ಪ್ರಭಾವಿ ಕ್ರಿಮಿನಲ್ ಶಕ್ತಿಗಳ ಕೈವಾಡವಿದೆ."

*- ರಾಜ್ಯಪಾಲ ಭಾರದ್ವಾಜ್*

"ತಾವು ನೀಡಿದ ಬೆಂಬಲವನ್ನು ವಾಪಸ್ ಪಡೆದಾಕ್ಷಣ ಪಕ್ಷಾಂತರ ನಿಷೇಧ ಕಾಯಿದೆಯ ಅಸ್ತ್ರ ಬಳಸಿ ಅವರನ್ನು ಶಾಸನಸಭೆಯ ಸದಸ್ಯತ್ವದಿಂದ ಅನರ್ಹಗೊಳಿಸುವುದು ಕಾನೂನುಬಾಹಿರ. ಈ ನಿಟ್ಟಿನಲ್ಲಿ ಕರ್ನಾಟಕದ ವಿಧಾನಸಭಾ ಸ್ಪೀಕರ್ ತೆಗೆದುಕೊಂಡ ಕ್ರಮ ಪಕ್ಷಪಾತದಿಂದ ಕೂಡಿದೆ."

*- ಸುಪ್ರೀಂ ಕೋರ್ಟ್*

### ನಂಬಿದರೆ ನಂಬಿ ಬಿಟ್ರೆಬಿಡಿ

"ಆರೆಸ್ಸೆಸ್ಸಿಗೂ ಶ್ರೀರಾಮಸೇನೆಗೂ ಯಾವುದೇ ಸಂಬಂಧವಿಲ್ಲ. ಸಿಂಧಗಿಯಲ್ಲಿ ಪಾಕಿಸ್ತಾನ ಧ್ವಜಾರೋಹಣಕ್ಕೆ ಸಂಬಂಧಪಟ್ಟಂತೆ ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು."

*- ಅಶೋಕ್*

"ನಾನು ಎಂದಿಗೂ ಅಧಿಕಾರಕ್ಕಾಗಿ ಕುರ್ಚಿಗೆ ಅಂಟಿಕೊಂಡಿರಲಿಲ್ಲ. ವಾಜಪೇಯಿ ಅವರೇ ಕರೆದು ಕೇಂದ್ರದಲ್ಲಿ ಮಂತ್ರಿಯಾಗಿ ಅಂತ ಕೇಳಿದಾಗಲೂ ಎಂ. ರಾಜಶೇಖರಮೂರ್ತಿಯವರನ್ನು ರಾಜ್ಯಸಭೆಗೆ ಕಳಿಸಿದೆ. ಆದರೆ, ಸಮ್ಮಿ... ಸರ್ಕಾರದಲ್ಲಿ ಜೆಡಿಎಸ್ 20 ತಿಂಗಳು ಅಧಿಕಾರ ಅನುಭವಿಸಿದ ನಂತರ ನನ... ಷರತ್ತಿನ ಮೇಲೆ ಸಿ.ಎಂ ಸ್ಥಾನ ನೀಡಿತು. ಬಹುಶಃ ಆ ಷರತ್ತುಗಳನ್ನೆಲ್ಲಾ ಒಪ್ಪಿದ್ದ... ರಾಜ್ಯವನ್ನೇ ಒತ್ತೆ ಇಡಬೇಕಾಗುತ್ತದೆ ಎಂದು ಭಾವಿಸಿ ಏಳೇ ದಿನದಲ್ಲಿ ರಾಜೀನಾ... ನೀಡಿ ಹೊರಬಂದೆ."

*- ಯಡಿಯೂರ...*

### ಅಪರೂಪಕ್ಕೊಂದು ಸರಿಯಾದ ಮಾತು

"ಅಂತಿಮ ಟೆಸ್ಟ್‌ನಲ್ಲಿ ಭಾರತ ಗೆಲುವು ಸಾಧಿಸಬೇಕು. ಅದರ ಜೊತೆ... ಸಚಿನ್ ಶತಕ ಗಳಿಸಬೇಕು. ದೇಶಕ್ಕಾಗಿ ಆಡುವ ಸಂದರ್ಭದಲ್ಲಿ ತಂಡದ ಜಂ... ಮುಖ್ಯವಾದುದೇ ಹೊರತು ಆಟಗಾರರ ವೈಯಕ್ತಿಕ ಸಾಧನೆ ಅಲ್ಲ. ಈಗ 0-3 ಹಿನ್ನಡೆಯಲ್ಲಿದ್ದೇವೆ. ಇದು ಸಚಿನ್ ನೂರನೇ ಶತಕ ಗಳಿಸಿಲ್ಲ ಎನ್ನುವುದಕ್ಕಿಂತ ಹೆಚ್ಚಿನ ನಿರಾಸೆ ಉಂಟುಮಾಡಿರುವ ವಿಚಾರ. ಅಂತಿಮ ಟೆಸ್ಟ್‌ನಲ್ಲಿ ಸಚಿನ್ ಶತಕ ಗಳಿಸದಿದ್ದರೂ ಭಾರತ ಗೆಲ್ಲಬೇಕು. ಅದರ ಬದಲು ಸಚಿನ್ ಶತಕ ಗಳಿಸಿ ತಂಡ ಸೋಲು ಅನುಭವಿಸಿದರೆ ಯಾವುದೇ ಅರ್ಥವಿಲ್ಲ."



*- ಗೌತಮ್ ಗಂಭೀರ್*

# ಎಲ್ಲ ಮೂಲಭೂತವಾದ ಖಂಡನೀಯ



## ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com

ಮೊನ್ನೆ ಸಲ್ಮಾನ್ ರಶ್ದಿ ಜೈಪುರದಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಬರಬೇಕಾಗಿದ್ದದ್ದು, ಅದರ ವಿರುದ್ಧ ದಿಯೋಬಂದ್‌ನ ಕೆಲವು ಮುಸ್ಲಿಮ್ ಮೂಲಭೂತವಾದಿಗಳು ತಕರಾರೆತ್ತಿದ್ದದ್ದು, ಅದಕ್ಕೆ ಪ್ರತಿಕ್ರಿಯೆಯಾಗಿ ತಾನು ಬಂದೇ ಬರುತ್ತೇನೆ ಎಂದು ರಶ್ದಿ ಪಟ್ಟುಹಿಡಿದದ್ದು, ಅವರನ್ನು ಕೊಲ್ಲಲು ಸುಪಾರಿ ಕೊಲೆಗಡುಕರು ಹೊರಟಿದ್ದಾರೆಂದು ಹಲವರು ಹೇಳಿದ್ದು, ಕೊನೆಗೆ ರಶ್ದಿ ಸಮ್ಮೇಳನದಿಂದ ದೂರ ಉಳಿದದ್ದು....

ಇದೆಲ್ಲ ಕೇವಲ ಓರ್ವ ಸಾಹಿತಿಯ ಸಾಮಾಜಿಕ ಜವಾಬ್ದಾರಿ, ಅಭಿವ್ಯಕ್ತ ಸ್ವಾತಂತ್ರ್ಯದ ಪ್ರಶ್ನೆ ... ಇಷ್ಟಕ್ಕೇ ಸೀಮಿತವಾಗಿಲ್ಲ. ಇದೆಲ್ಲದರ ಹಿನ್ನೆಲೆಯಲ್ಲಿ ಹಲವಾರು ವಿಷಯಗಳು ಅಡಕವಾಗಿದ್ದು ಅವುಗಳತ್ತ ನಮ್ಮ ಗಮನಹರಿಸುವುದು ಅಗತ್ಯವಾಗಿದೆ.

ಸಲ್ಮಾನ್ ರಶ್ದಿ ಓರ್ವ ಉತ್ತಮ ಸಾಹಿತಿಯೂ ಹೌದು, ವಿವಾದಗಳಲ್ಲಿ ಸಂತೋಷ ಪಡುವ ವ್ಯಕ್ತಿಯೂ ಹೌದು. ಅವರು ಮೂವತ್ತು ವರ್ಷಗಳ ಹಿಂದೆ ಬರೆದ 'ಸಟಾನಿಕ್ ವರ್ಸಸ್' ಎಂಬ ಪುಸ್ತಕವನ್ನೇ ಮೂಲವಾಗಿಟ್ಟುಕೊಂಡು, ಅವರು ಒಂದು ಸಮುದಾಯವನ್ನು ಅವಹೇಳನ ಮಾಡಿದ್ದಾರೆ ಎಂಬ ಕಾರಣಕ್ಕೆ ಅವರ ತಲೆ ಹಾರಿಸುವಂತೆ ಫತ್ವಾ ಹೊರಡಿಸುವುದು, ಸರ್ಕಾರ ಅವರ ಕೃತಿಯ ಮೇಲೆ ನಿಷೇಧ ಹೇರುವುದು ಎರಡೂ ಸರಿಯಾದ ಕ್ರಮಗಳಲ್ಲ.


ಓರ್ವ ವ್ಯಕ್ತಿ, ಆತ ಯಾರೇ ಆಗಿರಲಿ, ತಮ್ಮ ಸಮುದಾಯಕ್ಕೆ ಅವಮಾನ ಮಾಡಿದ ಎಂಬ ಕಾರಣಕ್ಕೆ ಆತನನ್ನು ಕೊಲ್ಲಿ ಎಂದು ಯಾವ ಧರ್ಮವೂ ಹೇಳುವುದಿಲ್ಲ.



ಬದಲಾಗಿ ಎಲ್ಲ ಧರ್ಮಗಳು ಅಂತಹ ವ್ಯಕ್ತಿಯಲ್ಲಿ ಬದಲಾವಣೆಯನ್ನು ತರಲು ಯತ್ನಿಸಿ ಎನ್ನುತ್ತವೆ. ಹೀಗಿದ್ದರೂ ಕೆಲವು ಧಾರ್ಮಿಕ ನಾಯಕರು ತಲೆ ಹಾರಿಸುವಂತಹ ಆದೇಶ ಹೊರಡಿಸುತ್ತಾರೆಂದರೆ ಅದು ಧರ್ಮದ ಹೆಸರಿನಲ್ಲಿ ಅವರು ಮಾಡುತ್ತಿರುವ ಅಪರಾಧ ಎಂದೇ ಹೇಳಬೇಕಾಗುತ್ತದೆ.

ತಮ್ಮ ಧರ್ಮಕ್ಕೆ ಅವಮಾನ ಮಾಡಿದ್ದಾನೆಂದು ಆರೋಪಿಸಿ ರಶ್ದಿ ವಿರುದ್ಧ ಹಲವು ಮುಲ್ಲಾಗಳು ಕಿಡಿಕಾರುವುದಕ್ಕೂ, ಆರೆಸ್ಸೆಸಿನ ಕಲ್ಲಡ್ಕ ಭಟ್ಟ ಹಿಂದೂ ಹುಡುಗಿಯರನ್ನು ಮುಸಲ್ಮಾನ ಹುಡುಗರು ಚುಡಾಯಿಸುತ್ತಾರೆಂದು ಆರೋಪಿಸಿ ಅಂತಹ ಹುಡುಗರನ್ನು ಕೊಂದು ಹಾಕಿ ಎಂದು ಹೇಳುವುದಕ್ಕೂ ವ್ಯತ್ಯಾಸ ಏನು? ಒಂದು ಖಂಡನಾರ್ಹವಾದರೆ, ಇನ್ನೊಂದೂ ಖಂಡನೆ ಸೂಕ್ತವಲ್ಲವೇ? (ಈ ಕಲ್ಲಡ್ಕ ಭಟ್ಟನ ಬಗ್ಗೆ ಇದೇ ಸಂಚಿಕೆಯಲ್ಲಿ ಒಂದು ಸುದೀರ್ಘ ವರದಿ ಇದೆ.)

ಹಾಗೆಯೇ ಸರ್ಕಾರವು ಒಂದು ಸಾಹಿತ್ಯ ಕೃತಿಯ ಮೇಲೆ ನಿಷೇಧ ಹೇರುವುದೂ ಸರಿಯಲ್ಲ. ತಲತಲಾಂತರದಿಂದ ಹೊಸಹೊಸ ವಿಚಾರಗಳು ಸಾಹಿತ್ಯದ ಮೂಲಕ ವ್ಯಕ್ತವಾಗುತ್ತ ಸಮಾಜದ ಸುಧಾರಣೆಗೆ ನೆರವಾಗಿವೆ. ಹಾಗೆಯೇ ಹಲವೊಮ್ಮೆ ಹಲವು ಸಾಹಿತ್ಯ ಕೃತಿಗಳು ಸಮಾಜದಲ್ಲಿ ವಿಕೃತ ಚಿಂತನೆಗಳಿಗೂ ಮೂಲವಾಗಿವೆ. ಆದರೆ ಎಲ್ಲ



ಆರೋಗ್ಯಕರ ಸಮಾಜಗಳು ತನಗೆ ಬೇಕಾದ್ದನ್ನು ಆರಿಸಿಕೊಂಡು ತನಗೆ ಅಹಿತಕರವಾದದ್ದನ್ನು ತಿರಸ್ಕರಿಸುತ್ತಾ ಬಂದಿವೆ.

ಇವತ್ತು ಹಲವರಿಗೆ ರಶ್ದಿಯವರ 'ಸಟಾನಿಕ್ ವರ್ಸಸ್' ಪುಸ್ತಕವೋ, ಎಸ್.ಎಲ್. ಭೈರಪ್ಪನವರ 'ಆವರಣ' ಎಂಬ ಕಾದಂಬರಿಯೋ ಅಹಿತಕರವಾಗಿ ಕಾಣಿಸಬಹುದು. ಅಂದ ಮಾತ್ರಕ್ಕೆ ಅವುಗಳ ಮೇಲೆ ನಿಷೇಧ ಹಾಕುವುದು ಸೂಕ್ತವಲ್ಲ. ಬದಲಾಗಿ ಅಂತಹಕೃತಿಗಳ ಬಗ್ಗೆ ಮುಕ್ತ ಚರ್ಚೆ ನಡೆಯಲಿ. ಆರೋಗ್ಯಕರವಾಗಿ ವಿಚಾರ ವಿನಿಮಯವಾಗಲಿ. ಆಗ ಒಂದು ಸಮಾಜದ ಕಣ್ಣು ತೆರೆಯುತ್ತದೆ. ನಿಷೇಧ ಮಾಡಿದರೆ ಸಮಾಜವು ಕುರುಡುತನದಲ್ಲೇ ಇರುತ್ತದೆ. ಯಾವುದೋ ಒಂದು ಕೃತಿ ಸಮಾಜದ ಕೆಲವರಿಗೆ ಇಷ್ಟವಾಗಲಿಲ್ಲ ಎಂಬ ಕಾರಣಕ್ಕೇ ಅದನ್ನು ಬ್ಯಾನ್ ಮಾಡುವುದಾದರೆ ಇವತ್ತು ಸಾಹಿತ್ಯ, ಪುಸ್ತಕ ಎಂಬುದೆಲ್ಲ ಇರುತ್ತಿರಲಿಲ್ಲ.



ಉದಾಹರಣೆಗೆ, 12ನೇ ಶತಮಾನದಲ್ಲಿ ವಚನಕಾರರು ಹೇಳುತ್ತಿದ್ದದ್ದು ಖಂಡಿತವಾಗಿಯೂ ಕೆಲವರಿಗೆ ಅಪಾಯಕಾರಿಯಾಗಿ ಕೇಳಿಸಿರಬಹುದು. ಅಂದಮಾತ್ರಕ್ಕೆ ವಚನಕಾರರನ್ನು ಕೊಂದು ಹಾಕಿರಿ, ಅವರ ವಚನಗಳ ಮೇಲೆ ನಿಷೇಧ ಹೇರಿರಿ ಎಂದರೆ ಏನಾಗುತ್ತಿತ್ತು? ಹಾಗೆಯೇ ಚಾರ್ವಾಕ, ಪೆರಿಯಾರ್, ಅಂಬೇಡ್ಕರ್, ತರಹದ ಹಲವಾರು ವ್ಯಕ್ತಿಗಳ ವಿಚಾರಗಳನ್ನು, ಚಿಂತನೆಯನ್ನು, ಕೃತಿಗಳನ್ನು ಬ್ಯಾನ್ ಮಾಡಿದ್ದರೆ ಏನಾಗುತ್ತಿತ್ತು?

ಎಲ್ಲ ಕಾಲದಲ್ಲೂ, ಎಲ್ಲ ಸಮಾಜದಲ್ಲೂ ವಿವಿಧ ವಿಚಾರಧಾರೆಗಳು ಹರಿದು ಬಂದಿವೆ. ಆದರಿಂದಾಗಿ ಕೆಲವೊಮ್ಮೆ ಸಾಮಾಜಿಕ ಮತ್ತು ಧಾರ್ಮಿಕ ವಲಯಗಳಲ್ಲಿ ಸುಧಾರಣೆಗಳಾಗಿದ್ದರೆ ಕೆಲವೊಮ್ಮೆ ಹೊಸ ಕವಲುಗಳು ಹೊಮ್ಮಿವೆ.

ಉದಾಹರಣೆಗೆ ರೋಮನ್ ಕ್ಯಾಥಲಿಕ್ ಚರ್ಚ್ ವಿರುದ್ಧ ಶತಮಾನಗಳಿಂದ ವಿವಿಧ ಚಿಂತನಾಧಾರೆಗಳು ಪ್ರಾರಂಭವಾಗಿ ಇವತ್ತು ಹತ್ತಾರು ವಿವಿಧ ರೀತಿಯ ಕ್ರಿಶ್ಚಿಯನ್ ಧರ್ಮಗಳು ಇವೆ. ಹಾಗೆಯೇ ಇಸ್ಲಾಮ್ ಕೂಡ ಎಲ್ಲೆಡೆ ಒಂದೇ ರೀತಿಯಲ್ಲಿಲ್ಲ. ಶಿಯಾ ಮತ್ತು ಸುನ್ನಿ ಎಂಬ ಎರಡು ಪ್ರಬಲ ಗುಂಪುಗಳ ಹೊರತಾಗಿ ಭಾರತ ಸೇರಿದಂತೆ ಜಗತ್ತಿನ ಹಲವಾರು ಕಡೆ ಸೂಫಿ ಪಂಥವೂ ಇದೆ. ಜೊತೆಗೆ ಹತ್ತೊಂಬತ್ತನೆ ಶತಮಾನದಲ್ಲಿ ಭಾರತದಲ್ಲಿ ಪ್ರಾರಂಭವಾಗಿ ಇವತ್ತು ಸಹಸ್ರಾರು ಅನುಯಾಯಿಗಳನ್ನು ಹೊಂದಿರುವ ಅಹಮದೀಯ ಪಂಗಡ, ಹದಿತ್ ಅನ್ನೇ ತಿರಸ್ಕರಿಸಿ ಕೇವಲ ಕುರ್‌ಆನ್ ಅನ್ನು ಮಾತ್ರ ನಂಬುವ ಇನ್ನೊಂದು ಪಂಗಡ, ಕಳೆದ ಶತಮಾನ ಕುರ್ದಿಸ್ಥಾನದಲ್ಲಿ ಜನ್ಮತಾಳಿದ 'ಯಜ್‌ದಾನ್' ಎಂಬ ಪಂಗಡಗಳೂ ಇವೆ. ಇವೆಲ್ಲವುಗಳ ಮೂಲ ಇಸ್ಲಾಮ್ ಧರ್ಮವೇ.

ಹಳೆ ಧರ್ಮವಾಗಿರಲಿ, ಹೊಸ ಧರ್ಮವಾಗಿರಲಿ, ಯಾವುದು ಉತ್ತಮ, ಯಾವುದರ ಅನುಯಾಯಿಗಳು ಶ್ರೇಷ್ಠರು ಎಂಬುದು ಮುಖ್ಯವಲ್ಲ. ಒಂದು ಪ್ರಜಾತಂತ್ರ ಸಮಾಜದಲ್ಲಿ ಹೊಸ ವಿಚಾರಗಳು, ವಿಮರ್ಶೆಗಳು ಬಂದೇ ಬರುತ್ತವೆ. ಅಂತಹ ವಿಮರ್ಶೆಯನ್ನು ಟೀಕೆ ಅಥವಾ ಅವಹೇಳನ ಎಂದು ಪರಿಗಣಿಸದೆ ಆತ್ಮವಿಮರ್ಶೆ ಮಾಡಿಕೊಂಡರೆ ಆ ಧರ್ಮಕ್ಕೂ, ಅದರ ಅನುಯಾಯಿಗಳಿಗೂ, ಸಮಾಜಕ್ಕೂ ಒಳ್ಳೆಯದಾಗುತ್ತದೆ. ಅದರ ಬದಲಾಗಿ ತಾವು ಹೇಳಿದ್ದೇ ಸರಿ, ತಮ್ಮ ನಿಲುವೇ ಸೂಕ್ತ ಎಂಬ ಅಭಿಪ್ರಾಯವನ್ನು ತಾಳಿದರೆ ಆ ಧರ್ಮ, ಅದರ ಆರಾಧಕರು, ಆ ಸಮಾಜ ನಿಂತ ನೀರಿನಂತಾಗಿ ಪಾಚಿ ಕಟ್ಟಿ ನಾರಲಾರಂಭಿಸುತ್ತದೆ.

ಇದು ಕೇವಲ ರಶ್ದಿ ಅವರು ಪುಸ್ತಕ ಮತ್ತು ಅದರ ವಿರುದ್ಧ ಖಡ್ಗ ಮಸೆಯುತ್ತಿರುವವರಿಗೆ ಮಾತ್ರ ಅನ್ವಯಿಸುವುದಿಲ್ಲ. ಶಿವಾಜಿ ಅವರ ಬಗ್ಗೆ ಜೇಮ್ಸ್ ಲೈನ್ ಎಂಬುವವರು ಬರೆದ ಪುಸ್ತಕವನ್ನು ವಿರೋಧಿಸಿ ಲೈನ್ ಅವರ ಸಂಶೋಧನೆಗೆ ಸಹಕಾರ ನೀಡಿದ ಐತಿಹಾಸಿಕ ಭಾಂಡಾರ್ಕರ್ ಪುಸ್ತಕಾಲಯವನ್ನೇ ನಾಶ ಮಾಡಿದ ಸಂಭಾಜಿ ಬ್ರಿಗೇಡ್ ಎಂಬ ಗುಂಪಿಗೂ, ಎ.ಕೆ.ರಾಮಾನುಜನ್ ಅವರ 'ಥ್ರೀ ಹಂಡ್ರೆಡ್ ರಾಮಾಯನಾಸ್' ಎಂಬ ಕೃತಿಯನ್ನು ವಿರೋಧಿಸಿ ಅದನ್ನು ದೆಹಲಿ ವಿಶ್ವವಿದ್ಯಾಲಯದ ಪಠ್ಯದಿಂದಲೇ ಕಿತ್ತುಹಾಕಿಸಿದ ಹಿಂದೂತ್ವವಾದಿ ಗುಂಪುಗಳಿಗೂ ಅನ್ವಯಿಸುತ್ತದೆ.

ಎಲ್ಲರೂ ನೆನಪಿಡಬೇಕಾದ ವಿಷಯ ಯಾವುದೆಂದರೆ ರಶ್ದಿ ಅವರ ಕೃತಿಯಿಂದಾಗಿ ಯಾವ ಮುಸಲ್ಮಾನನೂ ತನ್ನ ಧರ್ಮವನ್ನು ತೊರೆಯಲಿಲ್ಲ. ಲೈನ್ ಅವರ ಪುಸ್ತಕದಿಂದಾಗಿ ಯಾರಲ್ಲೂ ಶಿವಾಜಿ ಬಗೆಗಿನ ಹೆಮ್ಮೆ ಕುಸಿಯಲಿಲ್ಲ. ರಾಮಾನುಜನ್ ಅವರ ಲೇಖನ ಜನರನ್ನು ರಾಮಾಯಣದ ಹತ್ತಿರಕ್ಕೆ ಕರೆದುಕೊಂಡು ಹೋಗುತ್ತಿತ್ತೇ ಹೊರತು ದೂರವಲ್ಲ.

ಇದೆಲ್ಲಕ್ಕಿಂತ ಮುಖ್ಯವಾಗಿ ಮೂಲಭೂತವಾದ ಯಾವತ್ತಿಗೂ ಯಾವ ಸಮಾಜಕ್ಕಾಗಲಿ, ಸಮುದಾಯಕ್ಕಾಗಲಿ ಒಳ್ಳೆಯದನ್ನು ಮಾಡಿಲ್ಲ. ಆದ್ದರಿಂದಲೇ ಅದು ಖಂಡನಾರ್ಹ. ಇನ್ನು ಭಾರತದ ಸಂದರ್ಭದಲ್ಲಿ ಹೇಳುವುದಾದರೆ ಅಲ್ಪಸಂಖ್ಯಾತ ಸಮುದಾಯಗಳಲ್ಲಿನ ಮೂಲಭೂತವಾದವು ಒಂದು ರೀತಿಯಲ್ಲಿ ಆ ಸಮುದಾಯಗಳಿಗೇ ಹಲವಾರು ಬಾರಿ ತಿರುಗುಬಾಣವಾಗಿದೆ, ಅಪಾಯಕಾರಿಯಾಗಿದೆ. ಅಷ್ಟೇ ಮುಖ್ಯವಾಗಿ ಅಲ್ಪಸಂಖ್ಯಾತ ಸಮುದಾಯಗಳಲ್ಲಿನ ಮೂಲಭೂತವಾದವು ನೇರವಾಗಿಯೂ, ಪರೋಕ್ಷವಾಗಿಯೂ ಬಹುಸಂಖ್ಯಾತ ಸಮುದಾಯಗಳಲ್ಲಿನ ಮೂಲಭೂತವಾದವನ್ನು ಹೆಚ್ಚಿಸಿದೆ. ಇದು ಅಲ್ಪಸಂಖ್ಯಾತರಿಗೂ, ಬಹುಸಂಖ್ಯಾತರಿಗೂ ಕೆಡುಕನ್ನು ತರುತ್ತದೆ ಹೊರತು ಬೇರೇನಲ್ಲ.

ಈ ಎಲ್ಲ ದೃಷ್ಟಿಯಿಂದಲೇ ಮೊದಲೇ ಹೇಳಿದ್ದು ಇದು ಕೇವಲ ರಶ್ದಿ ಮತ್ತು ಜೈಪುರ ಸಾಹಿತ್ಯ ಸಮ್ಮೇಳಣಕ್ಕೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸೀಮಿತವಾದ ವಿಷಯವಲ್ಲ. ಬದಲಾಗಿ ನಮ್ಮ ಇಡೀ ಸಮಾಜದ ಒಳಿತು, ಕೆಡಕನ್ನು ಹಮ್ಮಿಕೊಂಡಿರುವ ವಿಷಯ ಎಂದು...

# ಪುನೀತ್-ಸೂರಿಯ ಅಣ್ಣಾ ಬಾಂಡ್ 25 ಕೋಟಿ ಡೀಲ್!

ಎಪ್ಪತ್ತೈದು ವರ್ಷಗಳ ಕನ್ನಡ ಸಿನಿಮಾ ಚರಿತ್ರೆಯಲ್ಲಿ ರಿಲೀಸ್‌ಗೆ ಮೊದಲೇ ಇಪ್ಪತ್ತೈದು ಕೋಟಿ ದುಡಿದ ಮೊದಲ ಸಿನಿಮಾ.....!

ಯಾವ ಕನ್ನಡ ಟಿವಿ ಚಾನಲ್‌ಗಳೂ ಇದುವರೆಗೂ ಯಾವ ಸಿನಿಮಾಗೂ ಕೊಡದಷ್ಟು ಹಣ ನೀಡಿರುವ ಸಿನಿಮಾ!!

ಒಂದು ಕೋಟಿ ರೂಪಾಯಿ ಸಂಭಾವನೆ ಪಡೆದ ಮೊದಲ ಕನ್ನಡ ನಿರ್ದೇಶಕ ಸೂರಿಯ ಸಿನಿಮಾ!!!

ಅದು ಅಣ್ಣಾ ಬಾಂಡ್....

ಈ ಸುದ್ದಿಗಿನ್ನು ರೆಕ್ಕೆಪುಕ್ಕಗಳೆಲ್ಲಾ ಸೇರಿ, ಉಪ್ಪುಖಾರದ ಮಸಾಲೆಯನ್ನು ಬೆರೆಸಿ ಗಾಂಧಿನಗರದ ಜನ ಚಪ್ಪರಿಸುತ್ತಿದ್ದಾರೆ. ಅಣ್ಣಾ ಬಾಂಡ್‌ನ ಬ್ಯುಸಿನೆಸ್ ಡೀಟೆಲ್ಸ್‌ಗಳನ್ನು ಕೇಳಿ ಕೆಲವರು ಸ್ಟನ್ ಆಗಿದ್ದಾರೆ. ಕಾಂಜಿಪಿಂಜಿ ನಟ, ನಿರ್ದೇಶಕರಿಗೆಲ್ಲಾ ಅಸಿಡಿಟಿ ಆಗಿದೆ. ಜನಸಾಮಾನ್ಯರು ಜಾಕಿ ತರದ ಇನ್ನೊಂದು ಸೆನ್ಸೇಷನಲ್ ಸಿನಿಮಾಗಾಗಿ ಕಾದಿದ್ದಾರೆ.

ಆದರೆ ಆ ಅವರಿಬ್ಬರಿದ್ದಾರಲ್ಲ ಸೂರಿ ಮತ್ತು ಪುನೀತ್......

ತಮ್ಮ ಪಾಡಿಗೆ ತಾವು ಸಿನಿಮಾ ಕೆಲಸದಲ್ಲಿ ಮುಳುಗಿಹೋಗಿದ್ದಾರೆ. "ಎನ್ಸಾರ್ ಇನ್ನೂ ಶೂಟಿಂಗೇ ಮುಗಿದಿಲ್ಲ, ಅಣ್ಣಾ ಬಾಂಡ್ 25 ಕೋಟಿ ತನಕ ಈಗಾಗಲೇ ಬ್ಯುಸಿನೆಸ್ ಮಾಡಿದೆಯಲ್ಲ!" ಅಂತ ಕೇಳಿದರೆ ಹಾಗೇ ಸುಮ್ಮನೆ ನಕ್ಕು ಬಿಡುತ್ತಾರೆ.

ಇನ್ನು, ಈ ಪ್ರಾಫಿಟ್, ಬಂಪರ್ ಪ್ರಾಫಿಟ್‌ಗಳ ಲೆಕ್ಕಾಚಾರ ಬಲ್ಲದಂತಹ ಏಕೈಕ ವ್ಯಕ್ತಿ ರಾಗೂ ಯಾನೆ ರಾಘವೇಂದ್ರ ರಾಜ್‌ಕುಮಾರ್ ಈಗೇನು ವಿಶೇಷವಾಗಿ ಮಾತನಾಡುತ್ತಿಲ್ಲ, ಜಾಕಿ ಹಿಟ್ ಆದಾಗಲೂ ರಾಘು ಜಾಸ್ತಿ ಮಾತಾಡಿರಲಿಲ್ಲ, ಗೆಲುವು ಆತನಿಗೆ ಹೊಸದೇನೂ ಅಲ್ಲ. ಗೆಲುವು-ಸೋಲು ಯಾವುದೂ ರಾಘುರ **mental balance** ಅನ್ನು ಕದಲಿಸಲ್ಲ ಬಿಡಿ.

ಬಹುಶಃ ಅಣ್ಣಾ ಬಾಂಡ್ ರಿಲೀಸಾಗಲು ಇನ್ನೆರಡು ತಿಂಗಳಾದರೂ ಆದೀತು. ನಿರ್ದೇಶಕ ಸೂರಿ ತಮ್ಮ ಟೀಂ ಅನ್ನು ತೆಗೆದುಕೊಂಡು ಜೋಗ್‌ದಲ್ಲಿದ್ದಾರೆ. ಹಿಂದಿಯ ಜಾಕಿ ಶರಾಫ್ ಇದರಲ್ಲಿ ಪಾತ್ರ ಮಾಡುತ್ತಿರುವುದು ಅಷ್ಟೇನೂ ಸುದ್ದಿಯಾಗಿಲ್ಲ.

### ಡಾನ್ ಕತೆ

ಈ ಅಣ್ಣಾ ಬಾಂಡ್ ಮಾಫಿಯಾ ಡಾನ್‌ನ ಕತೆ.


ಬೆಂಗಳೂರಿನ ಮಾಫಿಯಾ ಡಾನ್‌ಗಳು ನ್ಯಾಯವಾಗಿ ದುಡಿದು ಸಂಪಾದಿಸಿರುವುದಕ್ಕಿಂತ ಹೆಚ್ಚಿನ ದುಡ್ಡನ್ನು ಈಗಾಗಲೇ ಸಂಪಾದಿಸಿರುವ ಅಣ್ಣಾ ಬಾಂಡ್ ಒಂದು ರಿವೇಂಜ್ ಬೇಸ್ಡ್ ಸ್ಟೋರಿ ಎನ್ನಲಾಗುತ್ತಿದೆ. ಜಾಕಿ ಸಿನಿಮಾದಲ್ಲಿ ಸೂರಿ-ಪುನಿತ್ ಕಾಂಬಿನೇಷನ್ ಚೆನ್ನಾಗಿ ವರ್ಕ್‌ಔಟ್ ಆಗಿತ್ತು, ಆಗಲೇ ಅದೇ ಸ್ಪೀಡು, ಖದರ್ ಇರುವ ನಾಲ್ಕೈದು ಕತೆಗಳು ಸೂರಿಯ ಮನಸ್ಸಿನಲ್ಲಿದ್ದವು. ಮತ್ತೊಂದೆಡೆ ಜನ ಹಾಗೂ ಇಂಡಸ್ಟ್ರಿ ಕೂಡ ಇವರಿಬ್ಬರ ಕಾಂಬಿನೇಷನ್‌ನಲ್ಲಿ ಹೊಸ ಸಿನಿಮಾಗೆ ಕಾತರಿಸುತ್ತಿತ್ತು, ಅದರಂತೆ ಅಣ್ಣಾ ಬಾಂಡ್ ಬೊಂಬಾಟಾಗಿ ಹೊರಟಿದೆ. ಹಾಗೆ ನೋಡಿದರೆ ಕನ್ನಡದಲ್ಲಿ ಮಾಫಿಯಾ ಸಿಧಿಮಾಗಳು ಹೊಸದೇನಲ್ಲ, 'ಓಂ'ನಿಂದ ಹೊರಟು ಇತ್ತೀಚಿನ 'ರಾಜಧಾನಿ'ವರೆಗೂ ಮಚ್ಚು ಲಾಂಗ್‌ಗಳು ರಾರಾಜಿಸಿವೆ. ನಡುವೆ 'ಆ ದಿನಗಳು' ತರದ ನೀಟ್ ಮಾಫಿಯಾ ಸಿನಿಮಾಗಳು ಬಂದುಹೋಗಿದೆ. ಆದರೆ ಪುನಿತ್-ಸೂರಿ ಜೊತೆಲಿರೋ ಕಾರಣದಿಂದ ಅಣ್ಣಾ ಬಾಂಡ್ ಬಗ್ಗೆ ನಿರೀಕ್ಷೆ ಜಾಸ್ತಿಯಾಗಿದೆ.

ಹಾಗೆ ನೋಡಿದರೆ ಕೋಟಿ ರೂಪಾಯಿ ಅನ್ನುವುದು ಕನ್ನಡ ಸಿನಿಮಾ ಜನರಿಗೆ ಹೊಸದೇನಲ್ಲ, ರಾಜ್ ಹೀರೋ ಆಗಿದ್ದ 'ಶಂಕರ್ ಗುರು' 1978 ರಲ್ಲೇ ಒಂದು ಕೋಟಿ ರೂಪಾಯಿ ದುಡಿದಿತ್ತು, ಕೋಟಿ ರೂಪಾಯಿ ಕಂಡ ಆ ಮೊದಲ ಸಿನಿಮಾದ ನಿರ್ಮಾಪಕಿ ಪಾರ್ವತಮ್ಮನವರು. ಆದಾದನಂತರ ಸಿನಿಮಾಗಳು ನೂರು ದಿನ ಓಡುವುದು, ಇಪ್ಪತ್ತೈದು ವಾರದ ತನಕ ಓಡಿಸುವುದು ಇವೆಲ್ಲಾ ನಡೆಯುತ್ತಿತ್ತಾದರೂ ಕೋಟಿ ರೂಪಾಯಿ ಬಗ್ಗೆ ಯಾರೂ ಜಾಸ್ತಿ ಮಾತಾಡುತ್ತಿರಲಿಲ್ಲ. ಈಗ ಬಿಡಿ, ಕನ್ನಡ ಟಿವಿ ಚಾನಲ್‌ಗಳ ಸಂಖ್ಯೆ ಜಾಸ್ತಿಯಾದ ಮೇಲೆ ಸಿನಿಮಾಗಳಿಗೂ ಜಾಸ್ತಿ ದುಡ್ಡು ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಸಿನಿಮಾದವರಿಗೆ ಇದೊಂಥರಾ ಮಿನಿಮಂ ಗ್ಯಾರಂಟಿ ದುಡ್ಡು ಅನ್ನುವಂತಾಗಿದೆ. ಈಗಂತೂ ಹತ್ತು ಕೋಟಿ ರೂಪಾಯಿಗಳಿಗೂ ಜಾಸ್ತಿ ಲಾಭ ಮಾಡಿರುವ ಸಿನಿಮಾಗಳ ಸಂಖ್ಯೆ ಲಾಭ ಮಾಡಿರುವ ಸಿನಿಮಾಗಳ ಸಂಖ್ಯೆ ಕನಿಷ್ಠ ಒಂದು ಡಜನ್ ಆದರೂ ಇದೆ. ಇನ್ನು ಒಟ್ಟಾರೆ ಹೂಡಿದ ಬಂಡವಾಳ, ಮಾಡಿದ ವ್ಯವಹಾರಗಳು ಹತ್ತು ಕೋಟಿಯ ತನಕ ಇರುವ ಪಿಚ್ಚರ್‌ಗಳೆಷ್ಟು ಅಂತ ಹುಡುಕಿದರೆ ಅಲ್ಲೂ ಒಂದೆರಡು ಡಜನ್ ಹೆಸರುಗಳಿವೆ. ಯಜಮಾನ, ಮುಂಗಾರು ಮಳೆ, ಆಪ್ತ ಮಿತ್ರ... ಹೀಗೆ ಅಣ್ಣಾ ಬಾಂಡ್ ಇವೆಲ್ಲವನ್ನು ದಾಟಿ ಈಗ ಮುಂದೆ ಹೋಗಿದೆ.

ಈ ಯಶಸ್ಸಿಗೆ ವಾಸ್ತುಶಾಸ್ತ್ರ, ನ್ಯೂಮರಾಲಜಿ, ಅಸ್ಟ್ರಾಲಜಿ ಯಾವುದೂ ಕಾರಣವಲ್ಲ. ಬದಲಾಗಿ ಸಿನಿಮಾ ಮಾಡುವ **passion**, ಜೊತೆಗೆ ತಲ್ಲೀನತೆಯಿಂದ ಕೆಲಸ ಮಾಡುವ ಚಟವೇ ಕಾರಣವಾಗಿದೆ.

ಮಜಾ ಕೊಡುವ ಒಳ್ಳೆ ಸಿನಿಮಾ ಮಾಡಬೇಕೆಂದು ಕನಸು ಕಾಣುವ ಸೂರಿಗೆ ಆ ಚಟವಿದೆ. ಪುನೀತ್‌ಗೆ ಅಂತಹ ಛಲವಿದೆ.

• ಪಾರ್ವತೀಶ



## ಅಣ್ಣಾ ಬಾಂಡ್‌ಗೆ ಯಾರು ಎಷ್ಟು ಕೊಟ್ಟರು?


ಈ ಪ್ರಾಜೆಕ್ಟ್ ಅನೌನ್ಸ್ ಮಾಡಿದಾಗಲೇ ಸುವರ್ಣ ಚಾನೆಲ್‌ನವರು ಟಿವಿ ರೈಟ್ಸ್ ಕೇಳಿದ್ದರು. ಈಗಲೂ ಅದಿನ್ನೂ ಪೂರ್ತಿಯಾಗಿಲ್ಲ, ಬೇರೆ ಬೇರೆ ಚಾನೆಲ್‌ನವರೆಲ್ಲ ರೇಸಿಗೆ ಬಿದ್ದ ಕಾರಣ ಈ ತಕ್ಷಣದ ಮಾಹಿತಿ ಏನೆಂದರೆ ಸುವರ್ಣ ಚಾನೆಲ್‌ನವರೇ ಒಂದು ಕೊನೆ ಮಾತೆಂದು ಎಷ್ಟಕ್ಕೆ ಕೇಳಿದ್ದಾರೆ ಗೊತ್ತೇ?

ಆರು ಕೋಟಿ ರೂಪಾಯಿಗೆ!

ಅದೇರೀತಿ ಚಿತ್ರ ವಿತರಣೆಯಲ್ಲಿ ಈಗಾಗಲೇ ಬಾಂಡ್ 19 ಕೋಟಿ ರೂ. ವ್ಯವಹಾರ ಕುದುರಿಸಿದೆ. ವೃತ್ತಿಯಲ್ಲಿ ವಕೀಲರಾಗಿರುವ ಈ ಹಿಂದೆ ಚಿಂಗಾರಿ ಸಿನಿಮಾ ವಿತರಿಸಿದ್ದ ಪ್ರಸಾದ್ ಇದನ್ನು ಖರೀದಿಸಿದ್ದಾರಂತೆ. ಇದು ಸಹ ಯಾವ ಯಾವ ಏರಿಯಾಗಳಿಗೆಂಬುದು, ಪರ್ಸೆಂಟೇಜ್ ಲೆಕ್ಕವೂ ಇದೆಯಾ ಎಂಬುದು ಗೊತ್ತಾಗಿಲ್ಲ ❖

# ಸೂರಿ: ಬೋರ್ಡ್ ಬರೆಯುತ್ತಿದ್ದ ಬಾಲಕ

ಈ ದುನಿಯಾ ಸೂರಿಯ ಕತೆಯೇ ಒಂದು ಸಿನಿಮಾ ಕತೆಯಂತಿದೆ. ಈಗ ಒಂದು ಕೋಟಿ ರೂಪಾಯಿ ಸಂಭಾವನೆ ಪಡೆದಿದ್ದಾರೆ ಎಂಬ ರೂಮರ್ ಇರುವ ಸೂರಿ ಒಂದು ಕಾಲದಲ್ಲಿ ಬೋರ್ಡ್ ಬರೆಯುತ್ತಿದ್ದ ಆರ್ಟಿಸ್ಟ್. 'ಚಂದ್ರು ಮೆಡಿಕಲ್ಸ್', 'ವಿನುತಾ ಟೆಕ್ಸ್‌ಟೈಲ್ಸ್' ತರದ ಬೋರ್ಡ್ ಬರೆದುಕೊಂಡು ಬೆಂಗಳೂರಿನ ಸುಮಾರು 20-30 ಅಂಗಡಿಗಳಲ್ಲಿ ಸೂರಿ ಕಾಲಾಯಾಪನೆ ಮಾಡಿದ್ದೂ ಉಂಟು.



ಸೂರಿಯ ಬಾಲ್ಯ ಬೆಂಗಳೂರಿನ ಬನಶಂಕರಿಯ ಕಾವೇರಿ ನಗರದಲ್ಲಿ ಕಳೆದಿದೆ. ತಂದೆ ರಾಮಸ್ವಾಮಿ ತಳ್ಳು ಗಾಡಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದರು. ತಾಯಿ ಪ್ರಮೀಳಮ್ಮ ವಿದ್ಯಾಪೀಠ ಸರ್ಕಲ್ ಹತ್ತಿರದ ಶಾಲೆಯಲ್ಲಿ ಆಯಾ ಆಗಿದ್ದರು. ಸೂರಿ ಕೀರ್ತಿವಂತನಾದ ನಂತರವೂ ಆಕೆ ಆಯಾ ಆಗಿಯೇ ಇದ್ದರೆಂದು ಹೇಳುತ್ತಾರೆ. ಆದರೆ ಸೂರಿ ಈಗ ಆಕೆಗೆ ನೆಮ್ಮದಿಯ ವಿಶ್ರಾಂತ ಜೀವನ ಕಲ್ಪಿಸಿದ್ದಾರೆ. 'ನೀವು ಏನೇನನ್ನು ಯಾವಾಗ್ಯಾವಾಗ ಕಲಿತಿರಿ?' ಅಂತಾ ಕೇಳಿದರೆ ಸೂರಿ ಸಿಕ್ಕಾಪಟ್ಟೆ ನಗುತ್ತಾರೆ.

"ಸಾರ್, ನಾನು ನಾಲ್ಕನೇ ಕ್ಲಾಸಿನಲ್ಲಿದ್ದಾಗಲೇ ನಮ್ಮಪ್ಪ ಹೋಗ್ಬಿಟ್ರು. ನಾನು ಆಗಿನಿಂದ್ಲೆ ಕೆಲಸ ಮಾಡ್ತಿದ್ದೆ. ಚಿಕ್ಕುಡುಗ ಆಗಿದ್ರೂ ದೊಡ್ಡವರ ಸಾವಾಸ ಜಾಸ್ತಿ ಇತ್ತು, ಹಾಗಾಗಿ ಆವಾಗ್ಲೆ ಸುಮಾರು ವಿಷಯ ಗೊತ್ತಾಗ್ತಿತ್ತು" ಅಂತಾರೆ. ಆಮೇಲೆ ಚಿತ್ರಕಲೆಯಲ್ಲಿ ಐದು ವರ್ಷದ ಡಿಪ್ಲಮೋ ಓದಿದ ಸೂರಿ ಕೆಲಕಾಲ ಚೆನ್ನೈನಲ್ಲಿದ್ದು **portrait**ಗಳನ್ನು ಮಾಡುತ್ತಿದ್ದರು.

"ನಾನು ಸಿನಿಮಾಗೆ ಬಂದಿದ್ದೇ ಆಕಸ್ಮಿಕವಾಗಿ" ಅನ್ನುವ ಸೂರಿ 'ದುನಿಯಾ' ಮಾಡುವ ಮೊದಲು ಇಂಡಸ್ಟ್ರಿಯಲ್ಲೇ ಇದ್ದವರು. ರಾಜೇಂದ್ರ ಸಿಂಗ್ ಬಾಬುಗೆ ಒಳ್ಳೆ ಹೆಸರು ತಂದು ಕೊಟ್ಟ 'ಭೂಮಿ ತಾಯಿ ಚೊಚ್ಚಲ ಮಗ' ಸಿನಮಾಗೆ ಸ್ಕ್ರೀನ್ ಪ್ಲೇ ಮತ್ತು ಡೈಲಾಗ್ ಬರೆದದ್ದು ಸೂರಿ. ಆಮೇಲೆ 'ರಂಗ ಎಸ್‌ಎಸ್‌ಎಲ್‌ಸಿ', 'ಶಪೋರಿ' ಚಿತ್ರಗಳಲ್ಲೂ ಕೆಲಸ ಮಾಡಿದರು. 'ಮಣಿ' ಸಿನಿಮಾಗೆ ಅವಾರ್ಡ್ ಬಂತಾದರೂ ಅದರ ಕ್ರೆಡಿಟ್ ಕರಿಸುಬ್ಬರಿಗೆ ಹೋಯಿತು. ಈ ದೃಷ್ಟಿಯಿಂದ ಸೂರಿಗೆ ಮೊದಲ **break through** ಸಿಕ್ಕಿದ್ದೇ 'ದುನಿಯಾ'ದಲ್ಲಿ, ಅದರ ಸಕ್ಸೆಸ್‌ನಿಂದ 'ಜಂಗ್ಲಿ' ಹಾಗೂ 'ಜಾಕಿ'ಗೆ ಬುಕ್ ಆದ ಸೂರಿ ಅವುಗಳ ಡೈರೆಕ್ಷನ್ ಫೀಸ್ ಪಡೆದು ಸ್ವಂತದ 'ಇಂತಿ ನಿನ್ನ ಪ್ರೀತಿಯ' ಮಾಡಿದರು. ಆದರೆ ಅದರ ಇತಿಶ್ರೀ ಆಯಿತು. ಎಂತಹ ಗಟ್ಟಿ ಪಾತ್ರ, ಡೈಲಾಗ್ ಇದ್ದರೂ ಅವನ್ನು ಸೊರಗಿಸುವ ಶಕ್ತಿ ಶ್ರೀನಗರ ಕಿಟ್ಟಿಗಿದೆ. ಅಂದರೆ ಆತನ **expressions** ಇನ್ನೂ ದುರ್ಬಲವಾಗಿವೆ. ಇದು ಮತ್ತು ಕುಡಿತದ ಅತಿರೇಕಗಳ ಕತೆಯ ಕಾರಣ ಜನ 'ಇಂತಿ ನಿನ್ನ' ನೋಡಲಿಲ್ಲ, ಇದರಿಂದ ಸಿಟ್ಟಿಗೆದ್ದಂತೆ ಕಂಡ ಸೂರಿ 'ಜಂಗ್ಲಿ' ಮಾಡಿ ತೋರಿಸಿದರು. ಹಳೆ ಪಾತ್ರ, ಹಳೆ ಕಬ್ಬ ಅಂತ ಓಪನ್ನಾಗಿ ಹೇಳಿದರೂ ಸಿನಿಮಾದ ಡೈಲಾಗ್, ಹಾಡು ಕತೆ ಒಂಥರಾ ಇಂಟೆನ್ಸ್ ಆಗಿತ್ತು, ಪ್ರಧಾನವಾಗಿ ಪಡ್ಡೆ ಹುಡುಗರಿಗೆ 'ಜಂಗ್ಲಿ' ಇಷ್ಟ ಆಯಿತು.

ಆಮೇಲೆ ಬಂದದ್ದೇ 'ಜಾಕಿ' ನಾಲ್ಕು ಸಿನಿಮಾಗಳಿಗಾಗುವಷ್ಟು ಕತೆಗಳು 'ಜಾಕಿ' ಒಂದರಲ್ಲೇ ಇವೆ. ಜಾಕಿ ತರದ ಪ್ರಕ್ಷುಬ್ಧ, ಅರಾಜಕ, ಒಳ್ಳೆಯ ಹುಡುಗರು ನಮ್ಮ ಸುತ್ತಮುತ್ತ ಲಕ್ಷಾಂತರ ಇದ್ದಾರೆ. ಅಂತವರ ಬದುಕಿನ ಒಂದೊಂದು ಫೋಟೋ ತೆಗೆದಿರಿಸಿದಂತೆ 'ಜಾಕಿ' ಜನ್ಮ ತಳೆದಿದೆ.

ಸೂರಿ ಹೊರತುಪಡಿಸಿ ನಾವು ಹೊಸದನ್ನು ನಿರೀಕ್ಷಿಸಬಲ್ಲ ನಿರ್ದೇಶಕರಲ್ಲಿ ನಾಗಶೇಖರ್, ಶಶಾಂಕ್, ಗುರುಪ್ರಸಾದ್, ಜಯತೀರ್ಥ ಕಾಣಿಸುತ್ತಿದ್ದಾರೆ. ಏನೋ ಹೊಸದನ್ನು ಹೇಳಬೇಕೆಂಬ ತವಕ ಇವರಲ್ಲಿ ಕಾಣುತ್ತಿವೆ.

ಸೂರಿಯ ಸಿನಿಮಾ ಟ್ರ್ಯಾಕ್ ರೆಕಾರ್ಡ್ ಗಮನಿಸಿದರೆ ಅವರ ಹತ್ತಿರ ನಿಜ ಬದುಕಿನ, ಪ್ರಕ್ಷುಬ್ಧ ಪ್ರಸಂಗಗಳ ದೊಡ್ಡ ಅನುಭವದ ನಿಕ್ಷೇಪವೇ ಇದ್ದಂತಿದೆ. ಅವರ ಯಾವುದೇ ಸಿನಿಮಾಗಳಲ್ಲಿ ಬರುವ ರಂಗಾಯಣ ರಘುವಿನ ಪಾತ್ರ ಒಂದರ್ಥದಲ್ಲಿ ಸೂರಿಯೇ ಆಗಿರಬಹುದು. ಅಂದರೆ ಸೂರಿ ಕಂಡದ್ದು, ಕೇಳಿದ್ದು ಸ್ವತಃ ಅನುಭವಿಸಿದ್ದು..... ಹೀಗೆ.

ಸೂರಿ ಜೊತೆಗೆ ಪ್ರತಿಭೆ ಹಾಗೂ ಜಾಣತನವಿರುವ ಜೊತೆಗಾರರಿದ್ದಾರೆ. ಅಸೋಸಿಯೇಟ್ ಆಗಿದ್ದ ವಿಜಿ ಈಗ 'ಜಯಕ್ಕನ ಮಗ' ಸಿನಿಮಾ ನಿರ್ದೇಶಿಸುತ್ತಿದ್ದಾರೆ. ಕನಕಪುರದ ಪ್ರಶಾಂತ್ ಕಾಳೇಗೌಡ ಇದ್ದಾರೆ. ಜೊತೆಗಿದ್ದ ಕನಸುಗಾರ ತುಷಾರ್ ರಂಗನಾಥ್ ಇತ್ತೀಚೆಗೆ ಆಕಸ್ಮಾತ್ತಾಗಿ ತೀರಿಕೊಂಡರು. ಸೂರಿಯ ಎಲ್ಲಾ ಸಿನಿಮಾದಲ್ಲಿ ಜೊತೆಗಿರುವ ಕ್ಯಾಮರಾಮೆನ್ ಸತ್ಯ ಹೆಗಡೆ ಒಂದರ್ಥದಲ್ಲಿ ಸೂರಿಯ ಕಣ್ಣುಗಳಿದ್ದಂತೆ. ಈ ಸತ್ಯ ಹೆಗಡೆ ತನ್ನ ಕೆಲಸದಲ್ಲಿ ಪರಿಪೂರ್ಣತೆ ತಂದುಕೊಳ್ಳಲು ಬಿಟಿಎಸ್ ಬಸ್‌ಗಳಲ್ಲಿ ಓಡಾಡುತ್ತಾ-ಟೆಂಟ್ ಸಿನಿಮಾಗಳಲ್ಲಿ ಜನರನ್ನು ಗಮನಿಸುತ್ತಾ ಫುಟ್‌ಪಾತ್‌ಗಳಲ್ಲಿ ಅಲೆಯುತ್ತಾ ಇರುತ್ತಾರೆ

ಸೂರಿಯ ಜೀವನಾನುಭವ ಹಾಗೂ ಕಲ್ಪನೆಗಳು ಸತ್ಯ ಹೆಗಡೆಯ ಕ್ಯಾಮರಾ ಮೂಲಕ ಜೀವಂತವಾಗಲು ಇದೇ ಕಾರಣ.

ಸೂರಿ ಬಗ್ಗೆ ಗಾಂಧಿನಗರದಲ್ಲಿ ತರಹೇವಾರಿ ಮಾತಾಡುತ್ತಾರೆ.

ಕೆಲವರು 'ಮೂಡಿ' ಅಂತಲೂ ಹಲವರು 'ಅಂಕಾರ ಕಂಠ್ರಿ' ಎನ್ನುತ್ತಿರುತ್ತಾರೆ. ಇವೆಲ್ಲಾ ಒಂದನೇ ಕ್ಲಾಸಿನವರ ಮಾತುಗಳು ಬಿಡಿ.

ಸೂರಿಯ **paintings** ಗಳನ್ನು ಗಮನಿಸಿದರೆ ಒಂದಂಶ ಗೊತ್ತಾಗುತ್ತದೆ. ಪ್ರಕ್ಷುಬ್ಧತೆ ಅವುಗಳಲ್ಲಿ ಎದ್ದು ಕಾಣುವ ಅಂಶ ಅದನ್ನ **disturbance** ಅಂದುಕೊಳ್ಳೋಣ.

ಸೂರಿಯ ವ್ಯಕ್ತಿತ್ವ ಹಾಗೂ ಅವರು ತೆಗೆದುಕೊಡುತ್ತಿರುವ ಸಿನಿಮಾಗಳಲ್ಲೂ ಆ 'ಡಿಸ್ಟರ್ಬ್' ಮಾಡುವ ಅಂಶಗಳಿವೆ.

ಇರಲಿ ಬಿಡಿ.


ಅದೂ ಸಹ ವಾಸ್ತವ ಬದುಕಿನ ಕಲೆಗಾರಿಕೆಯೇ ತಾನೆ ❖

## ಹೆಚ್ಚಿದ ಬಿರುಕು ಬಗೆದಷ್ಟೂ ಹುಳುಕು

# ಎನ್‌ಸಿಪಿ ಎಂಬ ಮಾಯಾಜಿಂಕೆ

ತನ್ನ ಕನಸಿನ ಸಾಮ್ರಾಜ್ಯ ಸಾಕಾರಗೊಳ್ಳಬೇಕೆಂದರೆ ಅದು ಬಿಜೆಪಿ ಮತ್ತು ಕಾಂಗ್ರೆಸ್ಸಿನ ಸಮಾಧಿಯ ಮೇಲೆ ತಾನೆ? ಅದಕ್ಕೆಂದು ಸಿಕ್ಕಿರುವ ಮಾಯಾಜಿಂಕೆಯೇ ಎನ್‌ಸಿಪಿ. ಅಡ್ವಾಣಿ, ಅನಂತ್, ಆರೆಸ್ಸೆಸ್ ಯಾರ ಹಂಗೂ ಇಲ್ಲ. ಸರ್ಕಾರ ಉರುಳಿಸಿದರೆ ರಾಜ್ಯಪಾಲ ಭಾರದ್ವಾಜರ ಭಯವಿಲ್ಲ. ಸಿಬಿಐ ಕಾಟವಿಲ್ಲ. ಕೇಂದ್ರದ ಕಾಂಗ್ರೆಸ್ಸಿನ ಮರ್ಜಿಗೆ ಕಾಯಬೇಕಿಲ್ಲ, ಶರದ್ ಪವಾರ್ ಎಂಬ ಗುರಾಣಿಯ ರಕ್ಷೆಯಲ್ಲಿ ಏನೆಲ್ಲಾ ಸಾಧಿಸಬಹುದಲ್ಲವೆ? ಮಾಯಾಜಿಂಕೆಯ ಬೆನ್ನೇರಿ ಹೊರಟ ಕ್ರುದ್ಧ ವೃದ್ಧನ ದುರಾಶೆ ಸದ್ಯಕ್ಕೆ ತಣಿಯುವುದಿಲ್ಲ.

• ರಾ. ಸೋಮನಾಥ್


ಯಡಿಯೂರಪ್ಪ

ಅತ್ತ ಬಾಳಾಠಾಕ್ರೆ ಮತ್ತು ಬೆಳಗಾವಿಯ ಎಂಇಎಸ್ ಪುಂಡರು ಸೇರಿ ಕನ್ನಡಿಗರು ಮತ್ತು ಮರಾಠಿಗರ ಮಧ್ಯೆ ಏನೇ ಕಂದಕ, ದ್ವೇಷದ ಬಲೆ ನೇಯುತ್ತಿದ್ದರೂ ಪರಿಸ್ಥಿತಿ ಮಾತ್ರ ಇದಕ್ಕೆ ವ್ಯತಿರಿಕ್ತವಾಗಿ ಚಲಿಸತೊಡಗಿದೆ.


ಕರ್ನಾಟಕದ ಕಾಂಗ್ರೆಸ್ಸಿನ ಒಂದು ಡಜನ್ ಅಸಂತುಷ್ಟ ಶಾಸಕರಿಗೆ, ಎಲ್ಲೂ ಸಲ್ಲದೆ ಅಂತರಪಿಶಾಚಿಗಳಂತಾಗಿರುವ ಕೆಲ ಜೆಡಿಎಸ್ ನಾಯಕರಿಗೆ ಮತ್ತು ಸದ್ಯ ಇಡೀ ಬಿಜೆಪಿಯನ್ನೇ ಥರಗುಡಿಸುತ್ತಿರುವ ಕ್ರುದ್ಧ ಯಡಿಯೂರಪ್ಪನವರ ಪಾಲಿಗೆ ಆಕರ್ಷಕವಾಗಿ ಕಾಣಿಸುತ್ತಿರುವ ಏಕೈಕ ಆಶ್ರಯತಾಣವೆಂದರೆ ಅದು ಶರದ್ ಪವಾರ್ ಆಧಿಪತ್ಯದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ ಅರ್ಥಾತ್ ಎನ್‌ಸಿಪಿ!

ಯಾವುದೇ ಕಾರಣಕ್ಕೂ ತಾನು ಎನ್‌ಸಿಪಿ ಸೇರಲ್ಲ, ಬಿಜೆಪಿ ಬಿಡುವ ಪ್ರಶ್ನೆಯೇ ಇಲ್ಲ. ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯನವರ ಜೊತೆ ಸೇರಿ ತಾನು ಹೊಸ ಪಕ್ಷ ಕಟ್ಟುವುದಿಲ್ಲ, ನಾನು ಮತ್ತೆ ಮುಖ್ಯಮಂತ್ರಿಯಾಗಬೇಕೆಂಬುದೇ ಜನರ ಆಸೆ, ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಂಡೇ ಮತ್ತೆ ನನ್ನನ್ನು ಮುಖ್ಯಮಂತ್ರಿ ಮಾಡುತ್ತದೆ, ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ ನೂರೈವತ್ತು ಸ್ಥಾನ ಕೊಡಿಸುವುದೇ ನನ್ನ ಏಕೈಕ ಉದ್ದೇಶ; ಇತ್ಯಾದಿಯಾಗಿ ಪದೇಪದೇ ಯಡ್ಡಿ ಹೇಳಿದ್ದನ್ನೇ ಏಕೆ ಹೇಳುತ್ತಿದ್ದಾರೆ?


ಇದರರ್ಥ ಯಡ್ಡಿ ಈಗಾಗಲೇ ಬಿಜೆಪಿಯಿಂದಾಚೆಗೆ ಒಂದು ಕಾಲು ಇಟ್ಟಾಗಿದೆ. ತಾನು ಯಾವುದೇ ಕಾರಣಕ್ಕೂ ಎನ್‌ಸಿಪಿ ಸೇರಲ್ಲ, ಬಿಜೆಪಿಯನ್ನು ಬಿಡುವ ಪ್ರಶ್ನೆಯೇ ಇಲ್ಲ ಎಂದು ಪದೇಪದೇ ಯಡ್ಡಿ ಹೇಳುತ್ತಿದ್ದಾರೆಂದರೆ ಆದರರ್ಥ ಬಿಜೆಪಿಯನ್ನು ತೊರೆಯಲು ಮಾನಸಿಕವಾಗಿ ಯಡ್ಡಿ ಸಿದ್ಧರಾಗಿದ್ದಾರೆಂದೇ ಲೆಕ್ಕ. ಆತ್ಮಹತ್ಯೆಗೆ ಅಣಿಯಾದವನಷ್ಟೇ ತಾನು ಸಾಯಲ್ಲ, ಸಾಯಲ್ಲ ಎಂದು ಮತ್ತೆಮತ್ತೆ ಹೇಳುವುದು?


### ಬೇತಾಳನ ಕತೆ

ಇದೇ ಮನಸ್ಥಿತಿಗೆ ಬಿದ್ದೇ ಯಡ್ಡಿ ಮತ್ತೆಮತ್ತೆ ತಾನು ಬಿಜೆಪಿ ಬಿಡಲ್ಲ, ಎನ್‌ಸಿಪಿ ಸೇರಲ್ಲ, ಸಿದ್ದು ಜೊತೆ ಸೇರಿ ಹೊಸ ಪಕ್ಷ ಕಟ್ಟಲ್ಲ ಎಂದೆಲ್ಲ ಆಣೆ ಪ್ರಮಾಣಕ್ಕಿಳಿಯುವುದು ಹೈಕಮಾಂಡ್ ಮತ್ತೆ ತನ್ನನ್ನು ಮುಖ್ಯಮಂತ್ರಿ ಮಾಡೇ ತೀರುತ್ತದೆಯೆಂಬ ಆಶಾವಾದದ ತಳಹದಿಯ ಮೇಲೆ. ಹಾಗೊಮ್ಮೆ ಹೈಕಮಾಂಡ್ ಮತ್ತೆ ಮುಖ್ಯಮಂತ್ರಿ ಮಾಡದೇ ಹೋದರೆ? ಕೈತಪ್ಪಿದ ಸಿಎಂಗಾದಿ ಮತ್ತೆಂದಿಗೂ ದಕ್ಕಲಾರದೆಂದು ಮನದಟ್ಟಾಯಿತೆಂದರೆ?



ಧರಂಸಿಂಗ್

ಆಗ ಯಡ್ಡಿಯ ಮುಂದೆ ಒಂದೊಂದಾಗಿ ತೆರೆದುಕೊಳ್ಳುವ ಬಾಗಿಲುಗಳೆಂದರೆ... ಬಿಜೆಪಿ ಬಿಡುವುದು, ಎನ್‌ಸಿಪಿ ಸೇರುವುದು, ಸರ್ಕಾರ ಉರುಳಿಸುವುದು, ಹೊಸ ಪಕ್ಷ ಕಟ್ಟುವುದು, ಸಿದ್ಧರಾಮಯ್ಯನವರ ಜೊತೆ ಕೈಜೋಡಿಸುವುದು ಈ ಎಲ್ಲವೂ ಅನಿವಾರ್ಯವಾಗುತ್ತದೆ. ಇದೊಂಥರದ ಬೇತಾಳನ ಕತೆ. ಕೈತಪ್ಪಿದ ಮುಖ್ಯಮಂತ್ರಿಗಾದಿಗಾಗಿ, ಮತ್ತೆಮತ್ತೆ ರಾಗ ಹಾಡುವ ಯಡಿಯೂರಪ್ಪ ಬೇತಾಳನನ್ನು ಹೊತ್ತ ತ್ರಿವಿಕ್ರಮನಂತೆ ಜನ ನನ್ನನ್ನು ಸಿಎಂ ಆಗಬೇಕೆಂದು ಬಯಸುತ್ತಿದ್ದಾರೆ, ಹೈಕಮಾಂಡ್ ಆಶೀರ್ವಾದದೊಂದಿಗೆ ನಾನು ಮುಖ್ಯಮಂತ್ರಿ ಆಗೇ ಆಗ್ತೀನಿ.....! ಎಂದೆಲ್ಲ ಕಂಡಕಂಡಲ್ಲಿ ಬೊಬ್ಬೆ ಹೊಡೆದಷ್ಟೂ ಸದಾನಂದಗೌಡರ ಕುರ್ಚಿ ಭದ್ರವಾಗುತ್ತಿದೆ.


ಖರ್ಗೆ


ಸಿದ್ಧರಾಮಯ್ಯ

ಅತ್ತ ರಾಜ್ಯ ಪ್ರವಾಸಕ್ಕೆ ಬಿದ್ದು ಗುಲ್ಬರ್ಗ, ಬಾಗಲಕೋಟೆಯಲ್ಲಿ ತನ್ನ ಮುಖ್ಯಮಂತ್ರಿ ಪದವಿಯ ಹಂಬಲವನ್ನು ಯಡ್ಡಿ ಪ್ರತಿಪಾದಿಸಿದ ಬೆನ್ನಲ್ಲೇ ಬೆಂಗಳೂರಿನಲ್ಲಿ ಅನಂತ್‌ಕುಮಾರ್ ಸದಾನಂದ ಗೌಡರನ್ನು ಬೆಂಬಲಿಸಿ ಬಹಿರಂಗ ಹೇಳಿಕೆ ನೀಡುತ್ತಾರೆ. ಶಿಷ್ಯ ರೇಣುಕಾಚಾರ್ಯ ಯಡ್ಡಿ ಪಕ್ಕದಲ್ಲೇ ನಿಂತು ಇವತ್ತಲ್ಲ ನಾಳೆ ಹೈಕಮಾಂಡ್ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡೇ ತೀರುತ್ತದೆಯೆಂದು ಪುಂಗಿ ಊದಿದ್ದೇ ತಡ, ರಾಷ್ಟ್ರಾಧ್ಯಕ್ಷ ಗಡ್ಕರಿ ತನ್ನ ಬೆಂಗಳೂರು ಯಾತ್ರೆಗೇ ಚಕ್ಕರ್ ಹೊಡೆಯುತ್ತಾರೆ. ಯಡ್ಡಿಯನ್ನು ಪಕ್ಷದಿಂದ ಹೊರಹಾಕುವಂತೆ ಮತ್ತೆಮತ್ತೆ ಕಿರುಚಾಡುವ ವೃದ್ಧ ನಾಯಕ ಶಿವಪ್ಪ ಯಡ್ಡಿಯ ರಾಜ್ಯ ಯಾತ್ರೆಗೆ ವ್ಯತಿರಿಕ್ತವಾಗಿ ಪಕ್ಷದ್ದೇ ಪ್ರತ್ಯೇಕ ಕಾರ್ಯಕ್ರಮವನ್ನು ರೂಪಿಸುತ್ತೇನೆನ್ನುವ ಈಶ್ವರಪ್ಪ, ವಿನಾಕಾರಣ ಸದಾನಂದ ಗೌಡರನ್ನು ಹಾಡಿ ಹೊಗಳುವ ಅನಂತ್‌ಕುಮಾರ್, ಯಡ್ಡಿ ಜೊತೆ ಪ್ರವಾಸದಲ್ಲಿ ಕೈಜೋಡಿಸಿದ ಮಂತ್ರಿ ಸಮೂಹ ಮತ್ತು ಸಾಲುಸಾಲು ಸಭೆ-ಸಮಾವೇಶಗಳ ನಿಷ್ಕಾರಣ ಅಭಿಯಾನ ಎಲ್ಲವೂ ಏನನ್ನು ಸೂಚಿಸುತ್ತದೆ?


ಶರದ್ ಪವಾರ್

### ಆಚೆಗೊಂದು ಕಾಲು

ಡಾಲರ್ಸ್ ಕಾಲನಿಯ ಲೆಹರ್‌ಸಿಂಗ್ ಮನೆಯಲ್ಲಿ ಯಡ್ಡಿ, ಈಶು, ಗೌಡರನ್ನು ಸೇರಿಸಿ ಆರೆಸ್ಸೆಸ್ ಚಡ್ಡಿಗಳೆಲ್ಲ ಏನೇ ತೇಪೆ ಹಾಕಿದರೂ ಅದು ತಾತ್ಕಾಲಿಕ ಮಾತ್ರ ಎಂಬುದು ಒಂದೇ ವಾರಕ್ಕೆ ಸಾಬೀತಾಗಿದೆ. ಅಲ್ಲಿಗೆ ಯಡ್ಡಿ ತನ್ನ ಮುಖ್ಯಮಂತ್ರಿಗಿರಿಯ ಹಠ ಬಿಟ್ಟಿಲ್ಲ. ಹೈಕಮಾಂಡ್ ಮೇಲೆ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿದ್ದಾರೆಯೇ ಹೊರತು ಅದು ಕುಂದುವ ಸೂಚನೆಗಳಿಲ್ಲ. ಶಿವಮೊಗ್ಗ, ಗುಲ್ಬರ್ಗ, ಬಾಗಲಕೋಟೆ, ಬೀಳಗಿ, ತುಮಕೂರು ಎಲ್ಲೇ ಯಡ್ಡಿ ಕಾಲಿಟ್ಟರೂ ಸಿಎಂ ಗಾದಿಯದೇ ಜಪಮಂತ್ರ. ಜೊತೆಗೆ ರೇಣುಕಾಚಾರ್ಯನ ಪಕ್ಕವಾದ್ಯ.


ತನಗೆ ಹೈಕಮಾಂಡ್ ಬೆಂಬಲವಿಲ್ಲ, ಅದರಲ್ಲೂ ರಾಷ್ಟ್ರನಾಯಕ ಅಡ್ವಾಣಿಗೆ ತನ್ನ ಹೆಸರೆಂದರೇನೇ ಅಲರ್ಜಿ, ಏನೇ ರಾಣಾರಂಪ ಮಾಡಿದರೂ ಮತ್ತೆ ತಾನು ಮುಖ್ಯಮಂತ್ರಿಯಾಗುವುದು ದುಸ್ಸಾಧ್ಯ, ಸದ್ಯ ಸಿಎಂ ಸದಾನಂದ ಗೌಡರೇ ತನಗಿಂತ ಬಲಾಢ್ಯ, ಹೆಚ್ಚೆಂದರೆ 30 ಮಂದಿ ಶಾಸಕರನ್ನು ಬಿಟ್ಟರೆ ಅದಕ್ಕಿಂತ ಅಧಿಕ ಸಂಖ್ಯೆಯ ಶಾಸಕರು ತನ್ನ ಬೆನ್ನಿಗೆ ನಿಲ್ಲೋಲ್ಲ ಎಂಬುದು ಗೊತ್ತಿದ್ದೂ ಯಡ್ಡಿ ಪದೇಪದೇ ಮತ್ತೆ ಮುಖ್ಯಮಂತ್ರಿಯಾಗ್ತೇನೆ ಹೈಕಮಾಂಡ್ ಆಶೀರ್ವಾದ ಪಡಿತ್ತೀವಿ, ಆರೆಸ್ಸೆಸ್ ಕೃಪೆ ಗಿಟ್ಟಿಸ್ತೀನಿ ಎಂದೆಲ್ಲ ಏಕೆ ವ್ಯರ್ಥ ಸುತ್ತು ಹಾಕುತ್ತಿದ್ದಾರೆಂದರೆ ಅದರ ಮರ್ಮವೇ ಬೇರೆ.

ಯಡ್ಡಿ ಈಗಾಗಲೇ ಪಕ್ಷದಿಂದಾಚೆಗೆ ಒಂದು ಕಾಲು ಇಟ್ಟಾಗಿದೆ.


ಏನೇ ಬೊಬ್ಬೆಯಿಟ್ಟು, ಬ್ಲಾಕ್‌ಮೇಲ್ ಮಾಡಿದಾಗ್ಯೂ ಈ ಅವಧಿಗೆ ಸಿಎಂಗಿರಿ ಸಾಧ್ಯವೇ ಇಲ್ಲ, ಮುಂದೆ ಯಾವತ್ತಾದರೂ ಇಂಥ ಅವಕಾಶ ಸಿಗುತ್ತೋ ಗೊತ್ತಿಲ್ಲ, ಒಂದೋ ಮುಖ್ಯಮಂತ್ರಿ ಗಾದಿ ಅದಾಗದೆ ಹೋದರೆ ಸರ್ಕಾರದ ಪತನ ಎರಡರಲ್ಲೊಂದು ಮಾಡಿದರಷ್ಟೇ ರಾಜಕೀಯವಾಗಿ ತನ್ನ ಅಸ್ತಿತ್ವ ಸಾಧ್ಯವೆಂಬುದು ಯಡ್ಡಿಯ ಮೊಂಡು ಹಠ. ಇಂಥದೊಂದು ಮನಸ್ಥಿತಿಗೆ ಯಡ್ಡಿ ಬಂದು ಯಾವುದೋ ಕಾಲವಾಗಿದೆ. ರೇಣುಕಾಚಾರ್ಯನ ವರಸೆ, ಬಂಟ ಸುರೇಶ್ ಗೌಡ ವೀರಾವೇಶ, ಬೇಳೂರು, ಹರೀಶ್ ಥರದವರ ಹದ್ದು ಮೀರಿದ ಬಂಡುತನ ಮತ್ತು ನಿರಾಣಿ, ಕತ್ತಿ, ಸೋಮಣ್ಣನ ವರ್ತನೆಗಳೆಲ್ಲವೂ ಇದಕ್ಕೆ ಪೂರಕವಾಗೇ ಇದೆ.

### ಸಿದ್ದು ಭಜನೆಯ ಹಿಂದೆ

ಲೆಹರ್‌ಸಿಂಗ್ ಮನೆಯ ರಾಜಿ ಪಂಚಾಯ್ತಿ ನಡೆದ ಮೂರನೇ ದಿನಕ್ಕೇ ಶಿವಮೊಗ್ಗದಿಂದ ತಮ್ಮ ರಾಜ್ಯ ಪ್ರವಾಸ ಆರಂಭಿಸಿದ ಯಡ್ಡಿಯ ಮಾತುಗಳೇ ಅವರ ನಿರ್ಧಾರಕ ನಡೆಯ ಮುನ್ಸೂಚನೆಯಂತಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ನಿರ್ನಾಮವೇ ನನ್ನ ಪರಮ ಗುರಿ. ನಾನು ಬಿಜೆಪಿಯ ಸಂಘಟನೆಗಾಗಿ ರಾಜ್ಯ ಪ್ರವಾಸ ಮಾಡುತ್ತಿದ್ದೇನೆಯೇ ಹೊರತು ಪಕ್ಷ ಬಿಡುವ ಪ್ರಶ್ನೆಯೇ ಇಲ್ಲ!


ನಾಗಮಾರಪಲ್ಲಿ

-ಹೀಗೆ ತನ್ನ ಸಂಕ್ರಾಂತಿ ಪಟಾಕಿ ಬಗ್ಗೆ ಬಡಾಯಿ ಕೊಚ್ಚುತ್ತಲೇ ಯಡ್ಡಿ ಇದ್ದಕ್ಕಿದ್ದಂತೆ ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯನವರ ಕುರಿತು ಅನುಕಂಪ ತೋರುತ್ತಾರೆ. ಪಾಪ, ಸಿದ್ದು ಟೈಮೇ ಸರಿ ಇಲ್ಲ. ಅವರು ಅಹಿಂದ ಬಿಟ್ಟು ಬಂದಿದ್ದೇ ಮಾಡಿದ ಮೊದಲ ತಪ್ಪು. ಅಲ್ಲೇ ಇದ್ದಿದ್ದರೆ ಈ ಹೊತ್ತಿಗವರು ದೊಡ್ಡ ನಾಯಕರಾಗುತ್ತಿದ್ದರು. ಕಾಂಗ್ರೆಸ್‌ನಲ್ಲಿ ಅವರ ವ್ಯಕ್ತಿತ್ವಕ್ಕೆ ಯಾವುದೇ ಬೆಲೆಯಿಲ್ಲ....!


ಎಂ.ಬಿ.ಪಾಟೀಲ್


ಎಲ್ಲಾ ಬಿಟ್ಟು ಏಕಾಏಕಿ ಯಡ್ಡಿ ಏಕೆ ಸಿದ್ಧರಾಮಯ್ಯನವರ ಹಿತೈಷಿಯಂತೆ ಮಾತಾಡುತ್ತಾರೆ?


ಬಸವರಾಜ ಪಾಟೀಲ್

▶7


## ಯಡ್ಡಿಗಾಗಿ ಕಾದು ಕೂತ ಜೆಡಿಎಸ್ ಅತೃಪ್ತರ ಹಿಂಡು

ಯಡ್ಡಿಯ ಎನ್‌ಸಿಪಿ ಪ್ರವೇಶಕ್ಕಾಗಿ ಚಾತಕಪಕ್ಷಿಗಳಂತೆ ಹೊಂಚಿ ಕೂತ ಸಮಯಸಾಧಕರ ಹಿಂಡೊಂದು ಜೆಡಿಎಸ್‌ನ ಗೋಡೆಯೇರಿ ಕೂತಿದೆ. ಇವರ್‍ಯಾರಿಗೂ ಕಾಂಗ್ರೆಸ್ ಬೇಕಿಲ್ಲ ಅಥವಾ ಅಲ್ಲಿವರು ಸಲ್ಲುವುದಿಲ್ಲ, ಹಾಗೇ ಬಿಜೆಪಿ ಸಹವಾಸ ಇವರಿಗೆ ಬೇಕಿಲ್ಲ, ಇಂಥಾದ್ದೊಂದು ಜೆಡಿಎಸ್ ಅತೃಪ್ತರ ಮುಂಚೂಣಿಯಲ್ಲಿರುವುದು ಮಾಜಿ ಮಂತ್ರಿ ಇಕ್ಬಾಲ್ ಅನ್ಸಾರಿ!


ಇಕ್ಬಾಲ್ ಅನ್ಸಾರಿ

ಜೆಡಿಎಸ್‌ನಿಂದ ಗಂಗಾವತಿಯಲ್ಲಿ ಗೆದ್ದು ಕುಮಾರಸ್ವಾಮಿಯ ದೋಸ್ತಿ ಮಾತ್ರದಿಂದಲೇ ಮಂತ್ರಿಯಾದ ಅನ್ಸಾರಿಗೂ, ಜಮೀರ್‌ಗೂ ಅದೇನು ವೈಮನಸ್ಸಾಯಿತೋ? ಕುಮಾರಸ್ವಾಮಿಯ ಕಿವಿಕಚ್ಚಿದ ಜಮೀರ್ ಜೆಡಿಎಸ್ ಗರ್ಭಗುಡಿಯಿಂದ ಅನ್ಸಾರಿಯನ್ನು ಹೊರದಬ್ಬುವಲ್ಲಿ ಯಶಸ್ವಿಯಾದ. ಅನ್ಸಾರಿ ಕೂಡಾ ಜಮೀರ್‌ನ ಹಾಗೇ ಶೋಕಿಲಾಲ ಮತ್ತು ಮಹತ್ವಾಕಾಂಕ್ಷಿ. ಕುಮಾರಣ್ಣನ ದೋಸ್ತಿಯೇ ಇಲ್ಲವೆಂದ ಮೇಲೆ ಇನ್ನು ಜೆಡಿಎಸ್‌ನ ಹಂಗೇನೆಂದು ಇಲ್ಲಿಗೆ ಆರು ತಿಂಗಳ ಹಿಂದೆಯೇ ಅನ್ಸಾರಿ ಜೆಡಿಎಸ್ ತೊರೆದುಬಿಟ್ಟರು. ಬಿಜೆಪಿಗೆ ಹೋದರೆ ಮುಸ್ಲಿಂ ಓಟುಗಳು ಗ್ಯಾರಂಟಿಯಿಲ್ಲ, ಕಾಂಗ್ರೆಸ್ ಹೊಕ್ಕರೆ ಟಿಕೆಟ್ ಸಿಗುವುದೇ ಅನುಮಾನ. ಉಳಿದಿರುವುದು ಎನ್‌ಸಿಪಿ ಎಂಬ ಮರೀಚಿಕೆ ಮಾತ್ರ.

ಇದೇ ದಾರಿಯಲ್ಲಿರುವ ಮತ್ತೊಬ್ಬ ಜೆಡಿಎಸ್ ನಾಯಕನೆಂದರೆ ಅದು ಮಂಡ್ಯದ ಹಾಲೀ ಜೆಡಿಎಸ್ ಶಾಸಕ ಎಂ.ಶ್ರೀನಿವಾಸ್. ಇವತ್ತೋ ನಾಳೆಯೋ ಒಕ್ಕಲಿಗರ ಸಂಘದ ಅಧ್ಯಕ್ಷನಾಗಲಿರುವ ಶ್ರೀನಿವಾಸ್‌ಗೆ ಈ ಬಾರಿ ಜೆಡಿಎಸ್ ಟಿಕೆಟ್ ಕಷ್ಟ. ಏಕೆಂದರೆ ಕುಮಾರ್-ಜಮೀರ್ ಜೋಡಿಗೆ ಮಂಡ್ಯದಿಂದ ಜಫ್ರುಲ್ಲಾಖಾನ್ ಎಂಬ ದುಬೈ ಗಿರಾಕಿಯನ್ನು ಎಮ್ಮೆಲ್ಲೆ ಮಾಡಬೇಕಿದೆ. ಕಳೆದ ಬಾರಿ ಟಿಕೆಟ್ ಕೊಡುವಾಗಲೇ ಮುಂದಿನ ಸಾರಿ ಜಫ್ರುಲ್ಲಾಗೆ ಬಿಟ್ಟುಕೊಡಬೇಕೆಂಬ ಷರತ್ತು ಹಾಕಿಯೇ ಶ್ರೀನಿವಾಸ್‌ಗೆ ಟಿಕೆಟ್ ಕೊಡಲಾಗಿತ್ತು. ಜೊತೆಗೆ ಮಂಡ್ಯದ ಸಂಸದ ಚಲುವರಾಯಸ್ವಾಮಿಗೂ ಶ್ರೀನಿವಾಸ್‌ಗೂ ಸಂಬಂಧ ಹಳಸಿ ಯಾವುದೋ ಕಾಲವಾಗಿದೆ. ಕಾಂಗ್ರೆಸ್ ಟಿಕೆಟ್ ಕನಸಿನ ಮಾತು. ಶ್ರೀನಿವಾಸ್‌ಗೆ ಉಳಿದಿರುವುದು ಅನ್ಸಾರಿಯ ದಾರಿಯೊಂದೇ.


ಶ್ರೀನಿವಾಸ್ (ಮಂಡ್ಯ)

ಚಿಕ್ಕಬಳ್ಳಾಪುರದ ಹಾಲಿ ಜೆಡಿಎಸ್ ಶಾಸಕ ಕೆ.ಪಿ.ಬಚ್ಚೇಗೌಡರದ್ದೂ ಇದೇ ಅತಂತ್ರ ಸ್ಥಿತಿ. ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ಗ್ಯಾರಂಟಿಯಲ್ಲಿರುವುದು ಮಾಜಿ ವಿದ್ಯಾರ್ಥಿ ನಾಯಕ ಮತ್ತು ಒಕ್ಕಲಿಗರ ಸಂಘದ ನಾಯಕ ಎಂ.ಆಂಜನೇಯಗೆ. ಏನೇ ಅತ್ತು ಕರೆದರೂ ತನಗೆ ಕುಮಾರಣ್ಣ ಟಿಕೆಟ್ ಕೊಡುವುದಿಲ್ಲ ಎಂಬುದು ಬಚ್ಚೇಗೌಡರಿಗೆ ಖಾತರಿಯಾಗಿದೆ. ಬಿಜೆಪಿ, ಕಾಂಗ್ರೆಸ್ಸಿಗೆ ಹೋದರೆ ಟಿಕೆಟ್ ಗ್ಯಾರಂಟಿಯಿಲ್ಲ, ಜೆಡಿಎಸ್‌ನಲ್ಲಿದ್ದು ಉಳಿಗಾಲವಿಲ್ಲ. ಇಂಥ ದುರ್ಗತಿಯಲ್ಲಿ ಬಚ್ಚೇಗೌಡರ ಪಾಲಿಗೆ ಭರವಸೆಯಂತಿರುವುದು ಯಡ್ಡಿಯ ಹೊಸ ಪಕ್ಷ ಅಥವಾ ಎನ್‌ಸಿಪಿ ಮಾತ್ರ.

ಜೆಡಿಎಸ್ ಪಾಳೆಯದ ಇಂಥ ಅಂತರ್‌ಪಿಶಾಚಿಗಳಂತಾದ ಅತೃಪ್ತರ ಸಂಖ್ಯೆಯೇನೂ ಕಮ್ಮಿಯಿಲ್ಲ. ಯಡ್ಡಿಯೇನಾದರೂ ಎನ್‌ಸಿಪಿ ಹಾದಿಗೆ ನಿಂತರೆಂದರೆ ಮುಗ್ಗನ ಮಕ್ಕಳ ಬುಡಕ್ಕೂ ಬಿಸಿತಟ್ಟುವುದು ಖಚಿತ. ❖

# ಕರಾವಳಿ: ಚೆಡ್ಡಿ ರೌಡಿ ಕಲ್ಲಡ್ಕ ಭಟ್ಟನ ತಾಲಿಬಾನ್ ತರಲೆ!



## ಕ್ರಿಮಿನಲ್ ಕಲ್ಲಡ್ಕನ ಗಡಿಪಾರು ಯಾವಾಗ?

ಸಂಘಪರಿವಾರದ ಕೋಮು ಕ್ರೌರ್ಯದಿಂದ ರೌರವ ನರಕದಂತಾಗಿರುವ ಕರಾವಳಿಯಲ್ಲಿ ನೆಮ್ಮದಿ-ಸಹಬಾಳ್ವೆ-ಧರ್ಮ ಸಹಿಷ್ಣುತೆ ಮೂಡಬೇಕೆಂದಿದ್ದರೆ ಇರುವುದೊಂದೇ ಮದ್ದು! ಅದೇನೆಂದರೆ ಅವಿಭಜಿತ ದಕ್ಷಿಣ ಕನ್ನಡಕ್ಕೆ ಶನಿಯಂತೆ ಗಂಟುಬಿದ್ದು ಪ್ರತ್ಯಕ್ಷ-ಪರೋಕ್ಷವಾಗಿ ಅಮಾನುಷ ಕಾರ್ಯಾಚರಣೆ ಮಾಡುತ್ತಿರುವ ನರರಾಕ್ಷಸ ಕಲ್ಲಡ್ಕ ಭಟ್ಟ ಎಂಬ ಆರೆಸ್ಸೆಸ್ ಕ್ರಿಮಿನಲ್ ಕ್ರಿಮಿಯನ್ನು ಗಡಿಪಾರು ಮಾಡುವುದು!! ಈ ಭಟ್ಟ ಕರಾವಳಿಯಲ್ಲಿ ದಿನಕ್ಕೊಂದು ನಮೂನೆಯ ಕೋಮು ದ್ವೇಷದ ಸನ್ನಿವೇಶ ನಿರ್ಮಾಣ ಆಗುವಂಥ ತರಲೆ-ತಂತ್ರ ಮಾಡುತ್ತಿರುತ್ತಾನೆ. ಹೀಗಾಗಿ ಇಡೀ ಉಡುಪಿ-ದಕ್ಷಿಣ ಕನ್ನಡ ಜಿಲ್ಲೆಗಳೆರಡರಲ್ಲೂ ಕೋಮು ಪ್ರಚೋದಕ ಸನ್ನಿವೇಶ ಉಲ್ಬಣಿಸಿಬಿಟ್ಟಿದೆ!

ಕರಾವಳಿಯಲ್ಲಿ ಆಗಿರುವ ಬಹುತೇಕ ಕೋಮು ದಂಗೆ-ರಕ್ತಪಾತದ ಹಿಂದೆ ಈ ಭಂಡ ಭಟ್ಟನ ಕೈವಾಡ ಇದೆ. ಅದರೆ ಆತ ಎಲ್ಲೂ ಸಿಕ್ಕಿಬಿದ್ದಿಲ್ಲ; ಅಷ್ಟು ನಾಜೂಕಾಗಿ ಈತ ಮತಾಂಧ ಮಸಲತ್ತು ಮಾಡುತ್ತಾನೆಂಬುದು ಜಿಲ್ಲೆಯ ಪೊಲೀಸರಿಗಷ್ಟೇ ಅಲ್ಲ, ಸಕಲ ಆಳುವವರಿಗೂ ಗೊತ್ತು. ಭಟ್ಟನ ಕೋಮು ಕಿತಾಪತಿಯ ತೆವಲಿನಿಂದ ಅನೇಕ ಬಾರಿ ಅಮಾಯಕರ ಆಸ್ತಿ-ಪಾಸ್ತಿ ನಾಶವಾಗಿದೆ; ನಿಷ್ಪಾಪಿಗಳು ಜೀವ ತೆತ್ತಿದ್ದಾರೆ. ಅದ್ಯಾರದೋ ಮನೆಯ ಮುಗ್ಧ ಹುಡುಗಿಯ ಮಾನ-ಪ್ರಾಣಕ್ಕೆ ಸಂಚಕಾರ ಬಂದಿದ್ದಿದೆ. ತನ್ನದೇ ಮನೆಯ ಸಾಕು ದನ ಹೊಡೆದುಕೊಂಡು ಹೋಗುವಾಗ ದನಗಳ್ಳನೆಂದು ಭಜರಂಗಿಗಳಿಂದ ಹೊಡೆಸಿಕೊಂಡು ಸತ್ತು ಹೋದವರೂ ಇದ್ದಾರೆ. ಜಾನುವಾರು ವ್ಯಾಪಾರಿಗಳ ಬೆತ್ತಲೆ ಮಾಡಿದ ಪ್ರಕರಣಕ್ಕೂ ಭಟ್ಟನೇ ಮೂಲಪ್ರೇರಣೆ. ಆತ ಅಷ್ಟು ವ್ಯವಸ್ಥಿತವಾಗಿ ಕರಾವಳಿಯಲ್ಲಿ ಮತಾಂಧ ಭಾವನೆ ಹಬ್ಬಿಸಿದ್ದಾನೆ.

ಇಷ್ಟಾದರೂ ಕಲ್ಲಡ್ಕ ಭಟ್ಟನಿಗೆ ತೃಪ್ತಿಯಾದಂತಿಲ್ಲ. ಇತ್ತೀಚಿನ ದಿನಗಳಲ್ಲಿ ಕಾನೂನು-ಕಟ್ಟಳೆಗಳನ್ನು ಬುದ್ಧಿಪೂರ್ವಕವಾಗೇ ಧಿಕ್ಕರಿಸಿ ಪ್ರಚೋದನಕಾರಿ ಭಾಷಣಾ ಮಾಡೋದನ್ನು ಹಿರಿ-ಕಿರಿ ಹಿಂದೂತ್ವವಾದಿಗಳು ರೂಢಿಸಿಕೊಂಡಿದ್ದಾರೆ. ಇದನ್ನು ಪೊಲೀಸರು ಕೇಳಿಕೊಂಡು ಎಂಜಾಯ್ ಮಾಡುತ್ತಾರೆಯೇ ವಿನಃ ಅಪರಾಧಿಗಳನ್ನು ಕಂಬಿ ಹಿಂದೆ ತಳ್ಳುವ ಡ್ಯೂಟಿ ಮಾಡುವುದಿಲ್ಲ. ಇದೆಲ್ಲ ಆರೆಸ್ಸೆಸ್-ಬಿಜೆಪಿ ಕಿಂಗ್‌ಪಿನ್ ಕಲ್ಲಡ್ಕ ಭಟ್ಟನ ಬಳುವಳಿ. ಹೀಗಾಗಿ ಕೋಮು ಪ್ರಚೋದನಾಕಾರಿ ಭಾಷಣ ಮಾಡುವುದು ರೆಗ್ಯುಲರ್ ಪ್ರಾಕ್ಟೀಸ್‌ನಂತಾಗಿ ಹೋಗಿದೆ. ಕರಾವಳಿಯಲ್ಲಿ ಖುದ್ದು ಕಲ್ಲಡ್ಕ ಭಟ್ಟನಿಗಂತೂ ಇಂಥ ಗಂಡಾಂತರಕಾರಿ ಗೌಜಿ ಭಾಷಣ ಮಾಡೋದೇ ನಿತ್ಯಕರ್ಮದಂತಾಗಿ ಹೋಗಿದೆ.


ಸುಳ್ಯದಲ್ಲಿ ಪೊಲೀಸರ ವಿರುದ್ಧ ಸಂಘಪರಿವಾರ ನಡೆಸಿದ ಪ್ರತಿಭಟನಾ ಸಭೆಯಲ್ಲಿ ಕಲ್ಲಡ್ಕ ಭಟ್ಟ ಮತ್ತಾತನ ಚೆಡ್ಡಿ ಸಹಚರರು ಕೋಮುವಾದಿ ಭಾಷಣ ಹೊಡೆದಿದ್ದರು. ಮೊನ್ನೆ ಉಪ್ಪಿನಂಗಡಿಯಲ್ಲಿ, ಅದಕ್ಕೂ ಹಿಂದೆ ಮಂಗಳೂರಿನಲ್ಲಿ ಇದೇ ಭಾನ್ಗಡಿ ಭಟ್ಟ ಕೋಮು ಕದನಕ್ಕೆ ಪ್ರಚೋದಿಸುವ ಭಾಷಣ ಮಾಡಿದ್ದ. ದುರಂತವೆಂದರೆ ಇದ್ಯಾವುದೂ ಪೊಲೀಸರಿಗೆ ತಪ್ಪೇ ಅನ್ನಿಸುವುದಿಲ್ಲ; ಸ್ವತಃ ಅವರಿಗೇ ನಿಕೃಷ್ಟವಾಗಿ ಬೈದರೂ ಮಾನಮರ್ಯಾದೆ ಇಲ್ಲದವರಂತೆ ತಲೆತಗ್ಗಿಸಿ ನಿಂತಿರುತ್ತಾರೆ. ಆ ಮಟ್ಟಿಗೆ ಕಲ್ಲಡ್ಕ ಭಟ್ಟನ ಬಳಗ ಕರಾವಳಿ ಪೊಲೀಸರನ್ನು 'ಕೇಸರಿಬಾನೀಕರಣ' ಮಾಡಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಭಿಷೇಕ್ ಗೋಯಲ್, ಜಿಲ್ಲಾಧಿಕಾರಿ ಚೆನ್ನಪ್ಪ ಗೌಡರಂಥವರೇ ಕಲ್ಲಡ್ಕ ಭಟ್ಟನ ಪಾದದಡಿ ಕಾಲ್ಮುರಿದುಕೊಂಡು ಬಿದ್ದಿರುತ್ತಾರೆ. ಈ ಡಿಸಿ-ಎಸ್ಪಿಗಳೂ 'ಕೇಸರಿಬಾನಿ'ಗಳಾಗಿರುವುದು ನಾಚಿಕೆಗೇಡು.

ಮೊನ್ನೆ ಉಪ್ಪಿನಂಗಡಿಯಲ್ಲಿ ಕೋಮು ಸಂಘರ್ಷ, ರಕ್ತಪಾತ, ದೊಂಬಿ-ಗಲಾಟೆ ಎಲ್ಲಾ ಆದರೂ ಡಿಸಿ ಚೆನ್ನಪ್ಪಗೌಡ "ಅಲ್ಲಿ ಬರೀ ಮಾತಿನ ಚಕಮಕಿ ಆಗಿದೆಯೇ ಹೊರತು ಇನ್ನೇನಾಗಿಲ್ಲ..." ಎಂದು ತಿಪ್ಪೆ ಸಾರಿಸಿ ಸಂಘಪರಿವಾರದ ಕುತಂತ್ರಿಗಳಿಗೆ ಕುಮ್ಮಕ್ಕು ಕೊಟ್ಟಿದ್ದಾರೆ. ಇದೇ ಡಿಸಿ ಮತ್ತು ಡಿಸಿಪಿ ಕೆಲವು ದಿನಗಳ ಹಿಂದೆ ಕಲ್ಲಡ್ಕ ಭಟ್ಟ ತನ್ನೂರಲ್ಲಿ ನಡೆಸುವ ಸ್ಕೂಲಿನ ಖಾಸಗಿ ಕಾರ್ಯಕ್ರಮದಲ್ಲಿ ಕೇಸರೀ ಶಾಲು ಹಾಕಿಕೊಂಡು ಹಿಂದೂತ್ವ ಪ್ರದರ್ಶಿಸಿದ್ದು ದೊಡ್ಡ ವಿವಾದವಾಗಿತ್ತು, ಒಟ್ಟಿನಲ್ಲಿ ಜಿಲ್ಲಾಡಳಿತವನ್ನೇ ದಾರಿ ತಪ್ಪಿಸಿ ಹಿಂದೂತ್ವದ ಹರಾಮಿತನವನ್ನು ನಿರಾತಂಕವಾಗಿ ಮಾಡುತ್ತಿರುವ ಕಲ್ಲಡ್ಕ ಭಟ್ಟ ಇಡೀ ಕರಾವಳಿಯನ್ನೇ 'ಕೇಸರಿ ರಿಪಬ್ಲಿಕ್' ಮಾಡಿಬಿಟ್ಟಿದ್ದಾನೆ. ಇಂಥ ಅನಾಹುತಕಾರಿಗೆ ಗಡಿಪಾರು ಮಾಡಿದರಷ್ಟೇ ಕರಾವಳಿ ಬಚಾವಾದೀತು.

ಸಿಂಧಗಿಯಲ್ಲಿ ಪಾಕ್ ಧ್ವಜ ಹಾರಿಸಿದ ಶ್ರೀರಾಮಸೇನೆಯವರಿಗೆ ಮತ್ತು ಉಪ್ಪಿನಂಗಡಿಯಲ್ಲಿ ಕೋಮು ಕಿತಾಪತಿ ಮಾಡಿದ ಸಂಘಪರಿವಾರಿಗಳಿಗೆ ಬುದ್ಧಿ ಕಲಿಸುವ ಮಾತಾಡುತ್ತಿರುವ ಗೃಹಮಂತ್ರಿ ಅಶೋಕ್‌ಗೆ ತಮ್ಮ ಸಿಎಂಗಳು 'ಗುರು ವಂದನೆ' ಅರ್ಪಿಸುವ ಕಲ್ಲಡ್ಕನಿಗೆ ಕರಿ ನೀರಿನ ಶಿಕ್ಷೆ ಕೊಡುವ ಧೈರ್ಯ ಇದೆಯಾ?

ಕರಾವಳಿಯಲ್ಲೀಗ ಅಕ್ಷರಶಃ ಅರಾಜಕತೆ! ಚೆಡ್ಡಿ-ಕಾವಿ ಪುರೋಹಿತರು ಹಿಂದೂ ತಾಲಿಬಾನೀಕರಣದಲ್ಲಿ ನಿರಂತರ-ನಿರಾತಂಕವಾಗಿ ತೊಡಗಿಸಿಕೊಂಡು ಹಾವಳಿ ಎಬ್ಬಿಸುತ್ತಿದ್ದಾರೆ! ಆರೆಸ್ಸೆಸ್ಸಿನ ತೋಲಾಂಡ ನಾಯಕ ಕಲ್ಲಡ್ಕ ಪ್ರಭಾಕರ್ ಭಟ್ಟನ ಬಹಿರಂಗ ಭಯೋತ್ಪಾದನೆ-ಊರೂರಿಗೆ ಬೆಂಕಿ ಇಕ್ಕಿ ಮೈ ಕಾಯಿಸಿಕೊಳ್ಳುವ ಖಯಾಲಿಯಂತೂ ಮಿತಿಮೀರಿ ಹೋಗಿದೆ. ದಕ್ಷಿಣ ಕನ್ನಡವನ್ನು ಮೊದಲು ಗುಜರಾತ್ ಮಾಡಿ ಆಮೇಲೆ ರಾಜ್ಯಮಟ್ಟದ ಹಿಂದೂ 'ಡಾನ್' ಆಗುವ ಭಟ್ಟನ ಹಿಡನ್ ಹಿಕಮತ್ತಿಗೆ ತಡೆಹಾಕುವ ತಾಕತ್ತಂತೂ ಪೊಲೀಸರಿಗಾಗಲಿ, ಆಳುವ ಪಾಲಿಟಿಕಲ್ ಕ್ಲಾಸ್‌ಗಾಗಲಿ ಇಲ್ಲವೇ ಇಲ್ಲ! ಹೀಗಾಗಿ ಇಡೀ ಕರಾವಳಿ ಜೀವ ಭಯದಲ್ಲಿ ತತ್ತರಿಸುತ್ತಿದೆ!!

ಭಟ್ಟನ ಬೇವರ್ಸಿ ಬುದ್ಧಿಯಿಂದ ಯಾವ ಕ್ಷಣದಲ್ಲಿ ಅದೆಂಥ ಅನಾಹುತ ಆಗುವುದೋ ಎಂಬ ಆತಂಕ ಕರಾವಳಿಯ ಅಲ್ಪಸಂಖ್ಯಾತರನ್ನಷ್ಟೇ ಅಲ್ಲ, ಬಹುಸಂಖ್ಯಾತರನ್ನೂ ಕಂಗಾಲಾಗಿಸಿಬಿಟ್ಟಿದೆ. ಈ ಮತೋನ್ಮತ್ತ ಭಟ್ಟನಿಗೆ ಧರ್ಮಕಾರಣ ದಂಧೆ ಬಿಟ್ಟರೆ ಬೇರ್‍ಯಾವ ಕೆಲಸವೇ ಇಲ್ಲ, ವೃತ್ತಿಯಿಂದೀತ ಡಾಕ್ಟರನಂತೆ; ಪ್ರವೃತ್ತಿಯಿಂದಂತೂ ಪಕ್ಕಾ ಡಾಕೂ! ಈ ಶೂದ್ರ ವಿರೋಧಿ ವಿಪ್ರಾಗ್ರೇಸ ತಾನು ನಡೆಸುವ ಹಿಂದೂತ್ವದ ಶಾಲೆ-ಹೈಸ್ಕೂಲ್‌ಗೆ ಕಾಸು ಕೂಡಿಸಲು ಹಾಡುಹಗಲೇ ದರೋಡೆ ಮಾಡುತ್ತಿದ್ದ ತರತರದ ಕತೆಗಳಿವೆ. ತಾನೊಬ್ಬ ಶ್ರೀರಾಮಚಂದ್ರನ ಅಪರಾವತಾರ ಎಂಬಂತೆ ಪೋಸು ಕೊಡುವ ಈ ಭಟ್ಟನ ಕಾರು ನಿಂತಲ್ಲೇ 'ಶೇಕ್' ಆಗಿದ್ದು ಸೆನ್ಸೇಷನಲ್ ಸುದ್ದಿಯಾಗಿತ್ತು, ಆಗ ಈ ಮರ್ಯಾದಾ ಪುರುಷೋತ್ತಮ ತನ್ನ 'ಲೀಲೆ' ಕಂಡ ಮುಸ್ಲಿಂ ಬಾಲಕರಿಬ್ಬರ ಮೇಲೆ ಸುಳ್ಳು ಕೇಸ್ ಜಡಿಸಿ ಕಡೆಗೆ ರಾಜಿ ಮಾಡಿಕೊಂಡಿದ್ದ.



ತುಂಬಾ ನಾಜೂಕಾಗಿ ಭಟ್ಟ ನಡೆಸುತ್ತಿರುವ ಹಿಂದೂ ಸಮಾಜೋತ್ಸವ-ಬ್ರಹ್ಮಕಲಶೋತ್ಸವಗಳೇ ಆತನ ಮತಾಂಧ ಷಡ್ಯಂತ್ರ-ಜೀವನೋಪಾಯಕ್ಕೆ, ಆರ್ಥಿಕ ಮೂಲ. ಈ ಉಪದ್ರವಕಾರಿ ಉತ್ಸವಗಳನ್ನು ಅಮಾಯಕ ಶೂದ್ರರ ದಾರಿ ತಪ್ಪಿಸಿ ಸಾಬರ-ಕ್ರೈಸ್ತರ ಮೇಲೆ ಛೂ ಬಿಡಲು ಭಟ್ಟ 'ಅಸ್ತ್ರ' ಮಾಡಿಕೊಂಡಿದ್ದಾನೆ. ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು ಈ 'ಧರ್ಮಕಾರ್ಯ'ಗಳೇ ಭಟ್ಟನ ಪರಿವಾರದ ಹೊಟ್ಟೆ ಹೊರೆಯುತ್ತಿದ್ದವು. ಕಳೆದ ಎರಡು ದಶಕದಿಂದ ಕಲ್ಲಡ್ಕ ಭಟ್ಟ ಕರಾವಳಿಯನ್ನು ನೆಮ್ಮದಿಯಿಂದ ಇರಲು ಒಂದು ದಿನವೂ ಬಿಟ್ಟಿಲ್ಲ. ಒಂದಲ್ಲ ಒಂದು ಕೋಮು ಕಿತಾಪತಿ ಮಾಡಿ ಅದರ ಲಾಭ ಸ್ವಜಾತಿ ಹವ್ಯಕರಿಗಷ್ಟೇ ಸಿಗುವಂತೆ ನೋಡಿಕೊಂಡಿದ್ದಾನೆ. ಇಡೀ ದಕ್ಷಿಣ ಕನ್ನಡದ ಅಬ್ರಾಹ್ಮಣ ಸಮುದಾಯದ ನಡುವೆ ಕೋಮು ವಿಷಬಿತ್ತಿ ಎಂಪಿ-ಎಮ್ಮೆಲ್ಲೆ-ಎಮ್ಮೆಲ್ಸಿ ಬೆಳೆ ತೆಗೆಯುತ್ತಿರುವ ಭಟ್ಟ ಬಿಜೆಪಿಯಲ್ಲೀಗ ಪ್ರಶ್ನಾತೀತ ರಿಂಗ್ ಮಾಸ್ಟರ್‌ನಂತಾಗಿ ಹೋಗಿದ್ದಾನೆ!!

ಇಷ್ಟು ದಿನ ಈ ಮನುವಾದಿ ಮಸಲತ್ತುಗಾರ ಅಡಗಿಕೊಂಡು ಕೋಮು ಕ್ರೌರ್ಯ ಪ್ರಚೋದಕ ಸನ್ನಿವೇಶ ನಿರ್ಮಾಣಕ್ಕೆ ಹವಣಿಸುತ್ತಿದ್ದ; ಅಡ್ಡೆಯಲ್ಲೇ ಕುಳಿತು ದಂಗೆಕೋರ ಭಜರಂಗಿ-ಚೆಡ್ಡಿ ಪಡೆ ತಯಾರು ಮಾಡುತ್ತಿದ್ದ; ಹಿಂದೂತ್ವದ ದುರ್ಬೋಧೆ ಮಾಡಿ ನಿಷ್ಪಾಪಿ ಅಲ್ಪಸಂಖ್ಯಾತರ ಮೇಲೆ ದಾಳಿಗೆ ಕಳಿಸಿ ಚಂದ ನೋಡುತ್ತಿದ್ದ ರಕ್ತ ಪಿಪಾಸು ಭಟ್ಟ. ಈಗೀಗ ಈ ಮೊಂಡು ವರಸೆಗಳೆಲ್ಲ ಭಟ್ಟನಿಗೆ ನಿರೀಕ್ಷಿತ 'ಇನ್‌ಪುಟ್' ಕೊಡುತ್ತಿಲ್ಲ. ಹಾಗಾಗಿ ಈಗ ಭಟ್ಟ ತಾನೇ ಖುದ್ದು ಹಿಂದೂ ಸಮಾಜೋತ್ಸವ ಮುಂತಾದ ಜನ ಭಾವನಾತ್ಮಕವಾಗಿ ಸೇರುವ ಸಭೆ-ಸಮಾರಂಭಗಳಲ್ಲಿ ವೇದಿಕೆ ಏರಿ ಮುಸ್ಲಿಂ-ಕ್ರಿಶ್ಚಿಯನ್ನರನ್ನು ಬಾಯಿಗೆ ಬಂದಂತೆ ಬಯ್ಯುವ, ಮೂದಲಿಸುವ-ಕೆರಳಿಸುವ-ಹಿಂದೂಗಳು ಹುಚ್ಚೇಳುವ ಬುರ್ನಾಸ್ ಭಾಷಣ ಬಿಗಿಯಲಾರಂಭಿಸಿದ್ದಾನೆ! ಆಳುವ ಬಿಜೆಪಿ ಸರ್ಕಾರದ ಸೂತ್ರಧಾರ (ಬಿಜೆಪಿ ಕೋರ್ ಕಮಿಟಿ ಸದಸ್ಯ ಈ ಭಟ್ಟ) ಆಗಿರುವ ಈತ ತನ್ನ 'ಕೋಡು' ಹಿಡಿಯುವ ಧೈರ್ಯ ಯಾರಿಗಿದೆ ಎಂಬ 'ಮೃಗತ್ವ' ಮದದಿಂದ ಕರಾವಳಿಯ ಉದ್ದಗಲಕ್ಕೆ ಕೋಮು ವಿದ್ವೇಷದ ಪ್ರವಚನ ಕೊಡುತ್ತ ಅಂಡಲೆಯುತ್ತಿದ್ದಾನೆ.

ಯಾವಾಗ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂತೋ ಅಂದೇ ಭಟ್ಟನ ಹಿಂದೂತ್ವದ ತಾಲಿಬಾನೀಕರಣ ಕಸರತ್ತು ವ್ಯವಸ್ಥಿತವಾಗಿ ಹೋಯ್ತು! ಸರ್ಕಾರಿ ಯಂತ್ರದ ಬಲದಿಂದಲೇ ಭಟ್ಟನ ಭಜರಂಗಿ ಬಳಗ ಕ್ರಿಶ್ಚಿಯನ್-ಮುಸ್ಲಿಮರ ಮೇಲೆ ಸುಖಾಸುಮ್ಮನೇ ಎರಗಿ ಅಟ್ಟಹಾಸಗೈಯತೊಡಗಿತು; ಹಿಂದೂ ಹೆಣ್ಣಿನ ಮಾನ, ಜಾನುವಾರು ಪ್ರಾಣ ಮತ್ತು ಅನೈತಿಕ ಪೊಲೀಸ್‌ಗಿರಿ ಎಂಬ ತ್ರಿವಿಧ ಧಾರ್ಮಿಕ ಬಿಜಿನೆಸ್ ಸೂತ್ರ ಇಟ್ಟುಕೊಂಡು ಧರ್ಮಾಂಧ ದಗಲ್ಬಾಜಿ ಶುರುವಿಟ್ಟುಕೊಂಡಿತು! ಭಟ್ಟನ ಕೋಮು ದಂಧೆ ಪ್ರಚೋದಿಸುವ ಮಾತುಗಾರಿಕೆಯಿಂದ ಕರಾವಳಿಯಲ್ಲಿ ರಕ್ತದ ಕೋಡಿಯೇ ಹರಿದಿದೆ; ಕೊಲೆ-ಸುಲಿಗೆ-ದರೋಡೆಗಳಾಗಿವೆ; ಅಪಾರ ಆಸ್ತಿ-ಪಾಸ್ತಿ ಹಾನಿಯಾಗಿದೆ. ದುರಂತವೆಂದರೆ ಇಂಥ ಪರಮ ಪಾಪಿ ಭಟ್ಟನನ್ನು ಮಾತ್ರ ಕಾನೂನು ಈವರೆಗೆ ಮುಟ್ಟಿಲ್ಲ; ಭಟ್ಟನ ಭೂತ ನರ್ತನ ನಿಂತಿಲ್ಲ!!

ಈ ಸ್ವಯಂ ಘೋಷಿತ ಸಜ್ಜನ-ದೇಶಭಕ್ತ ಸಂಘಪರಿವಾರದ ಸರದಾರ ಬಾಯಿಬಿಟ್ಟರೆ ಕೊಳಕು ಮಾತೇ ಪುಂಖಾನುಪುಂಖವಾಗಿ ಉದುರುತ್ತವೆ. ಈತನ ಉನ್ಮಾದಕ್ಕೆ ಯಾವ ಧಾರ್ಮಿಕ ತರ್ಕವೂ ಇರುವುದಿಲ್ಲ, ಸಹನೆ-ಸಹಿಷ್ಣುತೆ ಇಲ್ಲದ ಈತ ಬಾಯಿಗೆ ಬಂದಂತೆ ಪರಧರ್ಮೀಯರನ್ನು ಬಯ್ಯುವುದು ತೀರಾ ಅಶ್ಲೀಲವಾಗಿರುತ್ತದೆ. ಹೆಣ್ಣನ್ನು 'ಮಾತೆ-ಮಾತೆ' ಎಂದು ನಾಟಕ ಮಾಡುವ ಭಟ್ಟ ಅಲ್ಪಸಂಖ್ಯಾತರ ಹೆಣ್ಣನ್ನು ಅಪಾಪೋಲಿಗಿಂತಲೂ ಕೀಳಾಗಿ ವೇದಿಕೆಯ ಮೇಲೆಯೇ ಚುಡಾಯಿಸುವ ಶೈಲಿಯ ಭಾಷಣ ಬಿಗಿಯುತ್ತಾನೆ. ತಾಯಿಯ ಹಾಲುಕುಡಿದ

## ಕಲ್ಲಡ್ಕ ಭಟ್ಟನ ಭಂಡ ಭಾಷಣ!!

ಕರಾವಳಿಯ ಆರೆಸ್ಸೆಸ್-ಭಜರಂಗದಳ-ಬಿಜೆಪಿಯ 'ಬಾಸ್' ಕಲ್ಲಡ್ಕ ಪ್ರಭಾಕರ ಭಟ್ ಮುಸ್ಲಿಮ್-ಕ್ರಿಶ್ಚಿಯನ್ನರನ್ನು ನಿಂದಿಸುವುದರಲ್ಲಿ ನಿಸ್ಸೀಮ. ಮುಗ್ಧ ಶೂದ್ರರನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಗಲೀಜು ಮಾತುಗಾರಿಕೆ ಈತನದು. ತನ್ನ ಮತಾಂಧ ಮಾತಿಂದ ಊರಲ್ಲಿ ಬೆಂಕಿ ಬಿದ್ದರೆ, ರಕ್ತಪಾತವಾದರೆ ಈ ರಾಕ್ಷಸನಿಗೆ ಖುಷಿಯೋ ಖುಷಿ. ಮೊನ್ನೆ ಈತ ಉಪ್ಪಿನಂಗಡಿಯಲ್ಲಿ ಮಾಡಿದ ನರಭಕ್ಷಕ-ಅಶ್ಲೀಲ ಪೋಲಿ ಭಾಷಣದ ತುಣುಕು ಇಲ್ಲಿದೆ:




-ಮುಸ್ಲಿಮರು ಕಳ್ಳರು-ಢೋಂಗಿಗಳು- ದರೋಡೆಕೋರರು-ವಂಚಕರು -ರಾಕ್ಷಸರು. ಶರಿಯತ್ ಕಾನೂನು ತಮ್ಮದೆಂದು ಸಾಬಿಗಳು ಹೇಳ್ತಾರೆ- ಆ ಕಾನೂನಿನಂತೆ ಮುಸ್ಲಿಮರ ಹೂಳುವ ಕೆಲಸ ಮಾಡಿದರೆ ಈ ಭೂಮಿಯೇ ಸಾಲದು!

-ಮೊಬೈಲ್ ರೀಚಾರ್ಜ್‌ಗೆ ಹೋಗುವ ಹಿಂದೂ ಹುಡುಗೀರಿಗೆ ಮಿಸ್‌ಕಾಲ್ ಮಾಡಿ, ಮೆಸೇಜ್ ಕಳಿಸಿ ಮುಸ್ಲಿಂ ಹುಡುಗರು ವಶೀಕರಣ ಮಾಡುತ್ತಾರೆ. ಲವ್ ಜಿಹಾದ್ ಮಾಡಿ ಹಾರಿಸಿಕೊಂಡು ಹೋಗ್ತಾರೆ. ಲವ್ ನೆಪದಲ್ಲಿ ಹಿಂದೂ ಹುಡುಗೀರ ಮತಾಂತರ ಮಾಡಿ ವಿದೇಶಕ್ಕೆ ಮಾರ್‍ತಾರೆ. ಕಾಶ್ಮೀರಿ ಹುಡುಗಿಯರನ್ನು 9 ಲಕ್ಷಕ್ಕೆ, ಪಂಜಾಬಿ ಹುಡುಗಿ 7 ಲಕ್ಷಕ್ಕೆ, ಇತರ ಹುಡುಗಿಯರನ್ನು 5 ಲಕ್ಷಕ್ಕೆ ವಿದೇಶಕ್ಕೆ ಸಾಬಿಗಳು ಮಾರಾಟ ಮಾಡ್ತಾರೆ.

-ಹಿಂದೂ ಹುಡುಗೀರ ಲವ್ ಮಾಡುವ ಬ್ಯಾರಿಗಳೇ ನಿಮ್ಮ ಹೆಣ್ಣುಮಕ್ಕಳ ಬುರ್ಖಾ ಎತ್ತಿ ಅದರೊಳಗೆ ನೋಡಿ. ನಿಮ್ಮ ಮಸೀದಿ ಗುಡ್ಡಕ್ಕೆ ಎತ್ತಿಕೊಂಡು ಹೋಗಿ ಹಾಕಿ.

-ಉಪ್ಪಿನಂಗಡಿ ಮಂದಿ ಷಂಡರು. ಹಾಗಾಗಿ ಬ್ಯಾರಿ ಹುಡುಗರು ಹಿಂದೂ ಹೆಣ್ಮಕ್ಕಳ ಸೆರಗು ಹಿಡಿದೆಳೆಯುತ್ತಿದ್ದಾರೆ. ಚುಡಾಯಿಸುತ್ತಾರೆ. ಹಿಂದೂ ಹುಡುಗರು ಇಂಥವರಿಗೆ ಬಾರಿಸಿದರೆ ತಪ್ಪೇನಿದೆ? ಮುಸ್ಲಿಮ ಹುಡುಗರೊಂದಿಗೆ ಹಿಂದೂ ಹುಡುಗೀರು ಮಾತಾಡಬಾರದು. ಹಿಂದೂ ಹುಡುಗೀರ ತಂಟೆಗೆ ಬಂದರೆ ಗುಂಡು ಹಾಕಿ ಕೊಲ್ತೇವೆ. ಹಿಂದೂ ಹುಡುಗೀರಿಗೆ ಟೈಟ್‌ಫಿಟ್ ಡ್ರೆಸ್ ಹಾಕಿಸಿ ಉಪ್ಪಿನಂಗಡಿ ಪೇಟೆ ಸುತ್ತಿಸುವ ತಾಯಂದಿರಿಗೆ ಮಂಡೆ ಶುದ್ಧವಿರಬೇಕು.

-ನಾವು-ಹಿಂದೂಗಳು-ಪೊಲೀಸರನ್ನು ನಂಬುವುದಿಲ್ಲ. ದನ ಸಾಗಿಸುವವರನ್ನು ಹಿಡಿದು ನಮ್ಮ ಹುಡುಗರು ಪೊಲೀಸರಿಗೆ ಒಪ್ಪಿಸಿದರೆ ಆ ಪೊಲೀಸರು ಬ್ಯಾರಿಗಳಿಂದ 15 ಸಾವಿರ ತಕ್ಕೊಂಡು ಬಿಡ್ತಾರೆ. ಹಾಗಾಗಿ ದನ ಸಾಗಿಸೋರ ನಮ್ಮ ಹುಡುಗರೇ ನೋಡಿಕೊಳ್ತಿದ್ದಾರೆ.

-ನನ್ನ ವಿರುದ್ಧ ಬ್ಯಾರಿಗಳು ಧಿಕ್ಕಾರ ಕೂಗ್ತಾರೆ. ಇಂಥ ಕಚಡಾಗಳಿಗೆ ಹಿಂದೂಗಳು ಹೆದರಬಾರದು. ನೀವು ಸಾಯುವ ಮೊದಲು ಇಂಥ ಮಂದಿಯನ್ನು ಮುಗಿಸಿಯೇ ಸಾಯಿರಿ. ನನ್ನ ವಿರುದ್ಧ ಘೋಷಣೆ ಹಾಕಿದವರಿಗೆ ತಾಕತ್ತಿದ್ದರೆ ಮುಂದೆ ಬನ್ನಿ ನೋಡೋಣ!

-ಕ್ರಿಶ್ಚಿಯನ್ನರು ಶಾಲೆ-ಆಸ್ಪತ್ರೆ-ಆಶ್ರಮ ನಿರ್ಮಿಸೋದೇ ಹಿಂದೂಗಳ ಮತಾಂತರ ಮಾಡೋದಕ್ಕೆ. ಹಿಂದೂಗಳು ಮಕ್ಕಳನ್ನು ಕ್ರಿಶ್ಚಿಯನ್ನರ ಶಾಲೆಗೆ ಕಳಿಸಬಾರದು. ಅಲ್ಲಿನ ಪಾದ್ರಿ ನಿಮ್ಮ ಮಕ್ಕಳ ಫಾದರ್ ಆಗೋದು ಬೇಡ. ಪರಲೋಕದಲ್ಲಿ ಇರುವ ತಂದೆಯನ್ನು ನಮ್ಮ ಮಕ್ಕಳು ಏಕೆ ಪ್ರಾರ್ಥಿಸಬೇಕು? ಹಿಂದೂ ಶಾಲೆಗೆ ಮಕ್ಕಳನ್ನು ಕಳಿಸಿ.

ಇದು ಚೆಡ್ಡಿ ಭಟ್ಟನ ಕ್ರಿಮಿನಲ್ ಆಲಾಪ. ಇದಿಷ್ಟೇ ಸಾಕಲ್ಲವೇ ಈ ಮನುಷ್ಯ ವಿರೋಧಿ-ಕಾನೂನು ವಿರೋಧಿ-ಸಂವಿಧಾನ ಶತ್ರುವನ್ನು ಶ್ರೀಕೃಷ್ಣನ ಜನ್ಮಸ್ಥಾನಕ್ಕೆ ಕಳಿಸಲು; ಗೃಹಮಂತ್ರಿ ಅಶೋಕ್ ಮತ್ತು ಪೊಲೀಸ್ ಮಹಾನಿರ್ದೇಶಕ ಶಂಕರ ಬಿದರಿಗೆ ಬೇಕಿದ್ದರೆ 'ಪತ್ರಿಕೆ' ಭಟ್ಟನ ಕೆಟ್ಟ ಭಾಷಣದ ಸಿಡಿ ಕೊಡಲು ರೆಡಿ. ಭಟ್ಟನ ಒಳಗೆ ಹಾಕಿ ಕರಾವಳಿಗೆ ನೆಮ್ಮದಿ ನೀಡುವ ಇಚ್ಛಾಶಕ್ತಿ ಮಾತ್ರ ಅಶೋಕ್-ಬಿದರಿಗ ಬೇಕಷ್ಟೇ. ಇಂಥ ಕಾನೂನುಬಾಹಿರ-ಕ್ರೂರ ಮಾತು ಬಹಿರಂಗವಾಗಿ ಆಡಿಯೂ ಕಲ್ಲಡ್ಕ ಭಟ್ಟ ನಿರಾತಂಕವಾಗಿ ಇರುತ್ತಾನೆಂದರೆ ಏನರ್ಥ? ಕರಾವಳಿ 'ಕೇಸರೀಬಾನ್' ಆಸ್ತೀತೆ

ಹೆಣ್ಣಾಗಲಿ-ಗಂಡಾಗಲಿ ಈತನ ಮುಖ-ಮೂತಿ ತಿವಿಯದೇ ಬಿಡುವುದಿಲ್ಲ; ಅಷ್ಟು ಹೊಲಸಾಗಿರುತ್ತದೆ. ಭಟ್ಟನ ಧರ್ಮಾಂಧ ಭಾಷೆ. ವಿಚಿತ್ರವೆಂದರೆ, ಭಟ್ಟನ ಈ ನೀಚತನ-ಕಾನೂನುಬಾಹಿರ ಅನಾಗರಿಕ ವರ್ತನೆ ಈತನಕ ಲಾ ಅಂಡ್ ಆರ್ಡರ್ ವ್ಯವಸ್ಥೆ ಸ್ಥಾಪಿಸುವ ಪೊಲೀಸರಿಗೆ -ಜಿಲ್ಲಾಡಳಿತಕ್ಕೆ ಮಾತ್ರ ಕಾಣಿಸಿಲ್ಲ-ಕೇಳಿಸಿಲ್ಲ.

ಕಲ್ಲಡ್ಕ ಭಟ್ಟನ ಕಮ್ಯೂನಲ್ ಕರ್ಮಕಾಂಡ ಒಂದೆರಡಲ್ಲ. 2009ರ ವಿಜಯದಶಮಿ (ಆಯುಧ ಪೂಜೆ) ದಿನದಂದು ಈ ನೆತ್ತರು ದಾಹದ ಚೆಡ್ಡಿ ಚಮತ್ಕಾರಿ ಹಿಂದೂಗಳಿಗೆ ತಲವಾರು-ಕತ್ತಿ ಪೂಜೆ ಮಾಡಲು ಕರೆಕೊಟ್ಟಿದ್ದು ದೊಡ್ಡ ಗೌಜಿಗೆಡೆ ಮಾಡಿತ್ತು. ಕೋಮು ಗಲಭೆ-ರಕ್ತಪಾತ ಮಾಡಿ ಕೋರ್ಟು-ಜೈಲಿಗೆ ಹೋಗಿ ಬಂದವರನ್ನು ಮೆರವಣಿಗೆ ಮಾಡಿಸಿ-ಆರೋಪಿಗಳನ್ನು ಪಕ್ಕದಲ್ಲೇ ಕೂರಿಸಿಕೊಂಡು ಅಲ್ಪಸಂಖ್ಯಾತರಿಗೆ ಅವಮಾನ ಆಗುವಂತೆ ಮಾತಾಡಿ ಭಟ್ಟ ವಿಜಯೋತ್ಸವ ನಡೆಸಿದ ನೂರಾರು ಘಟನೆಗಳಿವೆ; ಹಿಂದೂತ್ವ ಪುಂಡರ ಮುಟ್ಟಿದರೆ ಜುಪಾರ್ ಎಂದು ಪೊಲೀಸರಿಗೇ ರೋಪು ಹಾಕಿದ್ದೂ ಇದೆ.

ಸದಾನಂದ ಗೌಡ ಸಿಎಂ ಆದನಂತರ ಕಲ್ಲಡ್ಕ ಭಟ್ಟನ ಭಜರಂಗಿ-ಚೆಡ್ಡಿ ಕ್ರಿಮಿನಲ್‌ಗಳ ಗ್ಯಾಂಗ್ ಆತನ ತವರೂರು ಸುಳ್ಯದಲ್ಲಿ ಮೂರ್‍ನಾಲ್ಕು ಸಲ ಕಾನೂನು-ಸುವ್ಯವಸ್ಥೆ ಕೆಡಿಸುವ ಮತ್ತು ಕೋಮುಕಲಹ ಹುಟ್ಟುಹಾಕಲು ಹವಣಿಸಿದೆ. ಪೊಲೀಸು ಠಾಣೆಯ ಮೇಲೆ ಕಲ್ಲೆಸೆದು ದಾಳಿ ಮಾಡಿದ-ಅಲ್ಪಸಂಖ್ಯಾತರನ್ನು ಕಾಡಿದ ಮತ್ತು ಅಂತರ್‌ಧರ್ಮೀಯ ಸಹಪಾಠಿಗಳನ್ನು ಕಾಮದ ಕಣ್ಣಿಂದ ಕಂಡು ಗೊಂದಲ-ಗಲಾಟೆ ಎಬ್ಬಿಸಿದ ಹಿಂದೂ ಗೂಂಡಾಗಳನ್ನು ಬಗಲಲ್ಲಿಟ್ಟುಕೊಂಡು ಭಟ್ಟ ಪೊಲೀಸರಿಗೆ ತಾಕತ್ತಿದ್ದರೆ ಇವರ ಬಂಧಿಸಿ ಎಂದಬ್ಬರಿಸಿದ್ದ. ಜಿಲ್ಲಾಡಳಿತ-ಜಿಲ್ಲಾ ಪೊಲೀಸ್ ಭಟ್ಟನ ಕಾಲ್ಬುಡದಲ್ಲಿ ಶರಣಾಗಿ ಕುಂತಿತ್ತು! ಭಟ್ಟನ ಈ ಹಿಂದೂತ್ವದ ತಂತ್ರದ ಹಿಂದೆ ಶೂದ್ರ ಸಿಎಂ ಗೌಡನ 'ಹೇತ್ಲಾಂಡಿ' ಎಂದು ಬಿಂಬಿಸಿ ಅಧಿಕಾರದಿಂದ ಇಳಿಸುವ ಬ್ರಾಹ್ಮಣಿಕೆ ಹುನ್ನಾರ ಅಡಗಿತ್ತು. ಅತೀ ಶೂದ್ರ ಸದಾನಂದ ಗೌಡ ಸಿಎಂ ಆದ ಕ್ಷಣದಿಂದ ಕಟ್ಟಾ ವಿಪ್ರ ಭಟ್ಟ ಚಡಪಡಿಸುತ್ತಲೇ ಇರುವುದು ಸುಳ್ಯದಲ್ಲಷ್ಟೇ ಅಲ್ಲ ಇಡೀ ಕರಾವಳಿಯಲ್ಲೇ ಬಹಿರಂಗ ರಹಸ್ಯ!!

ಈ ಜಗಳಗಂಟ ಭಟ್ಟ ಮೊನ್ನೆ (22-1-12) ತನ್ನ ಸಂಘಪರಿವಾರದ ಭೂಗತ ಅಡ್ಡೆಯಿರುವ ಕಲ್ಲಡ್ಕದ ಬಳಿಯ 'ಉಪ್ಪಿನಂಗಡಿ'ಯಲ್ಲಿ ಕೋಮುಸಂಘರ್ಷ ಸನ್ನಿವೇಶ ಸೃಷ್ಟಿಸಿ ಬಿಟ್ಟಿದ್ದಾನೆ. ಕಳೆದೊಂದು ತಿಂಗಳಿಂದ ಮುಸ್ಲಿಮರು ಹೆಚ್ಚಿರುವ ಈ ಉಪ್ಪಿನಂಗಡಿಯ ನೆಮ್ಮದಿ ಕೆಡಿಸಿ ಧರ್ಮಕಾರಣ ಮಾಡಲು ಭಟ್ಟನ ನಿರ್ದೇಶಕತ್ವದ ಕಾವಿ-ಖಾಕಿ ಪರಿವಾರ ತರಲೆ-ತಂಟೆ ಮಾಡುತ್ತಲೇ ಇತ್ತು. ಮೊನ್ನೆ ರವಿವಾರ ಹಿಂದೂವಾದಿಗಳು ಉಪ್ಪಿನಂಗಡಿಯಲ್ಲಿ ಹಿಂದೂ ಸಮಾಜೋತ್ಸವವೆಂಬ ಮುಸ್ಲಿಂ-ಕ್ರಿಶ್ಚಿಯನ್ನರ ಕೆಣಕುವ-ಕಾಡುವ ಸಮಾವೇಶವೊಂದು ಆಯೋಜಿಸಿದ್ದರು. ಆ ವೇದಿಕೆಯಲ್ಲಿ ಆಚಾರವಿಲ್ಲದ ಕಲ್ಲಡ್ಕ ಭಟ್ಟನ ನಾಲಿಗೆ ಬೇಕಾಬಿಟ್ಟಿಯಾಗಿ ಅಲ್ಪಸಂಖ್ಯಾತರ ನಿಂದಿಸಿತು. ಕೋಮು ಗಲಭೆ ಮಾಡಿಯೇ ತೀರಬೇಕೆಂದು ಹಠತೊಟ್ಟಂತೆ ಮತಾಂಧ ಮಾತುಗಾರಿಕೆ ನಡೆಸಿದ ಭಟ್ಟ ಮನುಷ್ಯ ಸಮಾಜದಲ್ಲಿರಲು ತಾನು ನಾಲಾಯಕ್ ಎಂಬುದನ್ನು ಸ್ವಯಂಸಾಬೀತು ಪಡಿಸಿಕೊಂಡುಬಿಟ್ಟ!

ಭಟ್ಟನ ಅಸಹ್ಯ-ಅಶ್ಲೀಲ-ಅನಾಗರಿಕ-ಅಕ್ರಮ-ಅಡ್ನಾಡಿ ಭಾಷಣ ಸಹಜವಾಗೇ ಮುಸ್ಲಿಮರ ಕೆಎಫ್‌ಡಿ ಸಂಘಟನೆಯನ್ನು ಪ್ರತಿಕ್ರಿಯಿಸುವಂತೆ ಮಾಡಿದೆ. ಭಟ್ಟ ಬುದ್ಧಿಪೂರ್ವಕವಾಗೇ ಕೋಮುಉದ್ರೇಕಕಾರಿ ಭಾಷಣ ಮಾಡುತ್ತಾನೆಂದು ಮುಸ್ಲಿಮ್ ಹುಡುಗರು ಬೊಬ್ಬೆ ಹಾಕುತ್ತಾ ಬೀದಿಗಿಳಿದು ಬಿಟ್ಟರು. ಪರಿಸ್ಥಿತಿ ಬಿಗಡಾಯಿಸಿತು. ಅತ್ತ ಭಟ್ಟ ಕಿತಾಪತಿ ಮಾಡಿ ಪಲಾಯನ ಮಾಡಿದರೆ, ಇತ್ತ ಕಲ್ಲು ತೂರಾಟ-ಹೊಂಚು ದಾಳಿ, ಹಲ್ಲೆ-ಲಾಠಿ ಚಾರ್ಜ್ ನಡೆದುಹೋಯ್ತು! ರಕ್ತಪಾತವಾಯ್ತು. ಯಾರ್‍ಯಾರದೋ ತಲೆ ಒಡೆಯಿತು; ಪೊಲೀಸ್ ಅಧಿಕಾರಿಯೊಬ್ಬನ ಮುಸುಡಿ ಕಲ್ಲೇಟಿಂದ ಜಖಂ ಆಯ್ತು. ಇಷ್ಟಾದರೂ ಪೊಲೀಸರು ಮಾತ್ರ ಚೆಡ್ಡಿ ಭಟ್ಟನ ಅಡಿಯಾಳಂತೆ ವರ್ತಿಸಿದರು. ನಿಷ್ಪಕ್ಷಪಾತವಾಗಿ ಪರಿಸ್ಥಿತಿಯನ್ನು ನಿಭಾಯಿಸದೇ ಹಿಂದೂ ಕೋಮುವಾದಿಗಳಿಗೆ 'ಅನುಕೂಲ' ಆಗುವಂತೆ ಡ್ಯೂಟಿ ಮಾಡಿದರು. ಅಲ್ಲಿಗೆ ಕರಾವಳಿ ತಾಲೀಬಾನಿಕರಣ ಯಾನೆ ಕೇಸರೀಕರಣ ಆಗುವುದು ಖಾತ್ರಿಯಾಗಿ ಹೋಯ್ತು!!

ಕಮ್ಯೂನಲ ಸೆನ್ಸಿಟೀವ್ ಎಂಬ 'ಅಭಿದಾನ'ದ ಉಪ್ಪಿನಂಗಡಿಯಲ್ಲಿ 'ಕೇಸರೀಬಾನಿ'ಗಳು ಕಳೆದ ಹದಿನೈದೇ ದಿನದಲ್ಲಿ ಹುಟ್ಟುಹಾಕಿದ ಎರಡನೇ ಕೋಮು ಭಾನ್ಗಡಿ ಇದು. ಕೆಲವು ದಿನಗಳ ಹಿಂದೆ ಹಿಂದೂತ್ವದ ಬೆಂಕಿ ನವಾಬ, ನಾ. ಸೀತಾರಾಮ ಕಾರಂತ ಎಂಬಾತ ಉಪ್ಪಿನಂಗಡಿಯಲ್ಲಿ ಅಲ್ಪಸಂಖ್ಯಾತರ ಬಗ್ಗೆ ಅವಹೇಳನಕಾರಿಯಾಗಿ ಬೊಗಳಿ ಹೋಗಿದ್ದ. ಹೀಗಾಗಿ ಉಪ್ಪಿನಂಗಡಿ ಎಂಬುದು ಬೂದಿ ಮುಚ್ಚಿದ ಕೆಂಡದಂತಾಗಿತ್ತು. ಇದೆಲ್ಲ ಗೊತ್ತಿದ್ದ ಕಲಹ-ಕ್ರೌರ್ಯ ಪ್ರಿಯ ಕಲ್ಲಡ್ಕ ಭಟ್ಟ ಕೋಮುಗಲಭೆ ಹುಟ್ಟುಹಾಕಲು ಇದೇ ಸುಸಮಯವೆಂದು ಮುಸ್ಲಿಂ-ಕ್ರಿಶ್ಚಿಯನ್ನರ ಧರ್ಮವನ್ನು ಕೀಳಾಗಿ ಟೀಕಿಸಿದ್ದಾನೆ; ತನ್ನ ಕೋಮು ಪ್ರಚೋದನಾಕಾರಿ ಭಾಷಣದ ಚಾಳಿ ಪ್ರದರ್ಶಿಸಿದ್ದಾನೆ.


ಕಲ್ಲಡ್ಕದ ಕ್ರಿಮಿನಲ್ ಕೋಮುವಾದಿ ಭಟ್ಟ ತನ್ನ ಎಡಬಲದಲ್ಲಿ ಒಂದಿಬ್ಬರು ಲೋಕಲ್ ಕಾವಿ ಸ್ವಾಮಿಗಳನ್ನು ಕೂರಿಸಿಕೊಂಡು ಉಪ್ಪಿನಂಗಡಿಯ ಶಾಂತಿ ಸಹಬಾಳ್ವೆ ಹಾಳುಮಾಡಿ ಕೋಮು ದಂಗೆ ಎಬ್ಬಿಸಲು ಅದೆಷ್ಟೇ ತಿಪ್ಪರಲಾಗ ಹಾಕಿದರೂ ಉಪ್ಪಿನಂಗಡಿಯ ನಸೀಬು ಗಟ್ಟಿಯಾಗಿತ್ತು! ಹಾಗಾಗಿ ಅಂಥ ದೊಡ್ಡ ಅನಾಹುತವೇನಾಗಿಲ್ಲ. ಆದರೆ ಈ ಮನೆಮುರುಕ ಭಟ್ಟನ ಸಮಾಜಘಾತುಕ ಕುಕೃತ್ಯಗಳಿಗೆ ಅಂಕುಶ ಇಡದಿದ್ದರೆ ಉಪ್ಪಿನಂಗಡಿ ಮಾತ್ರವಲ್ಲ, ಇಡೀ ಕರಾವಳಿಯೇ ಕೋಮುಕದನದಿಂದ ನರಕವಾಗುವುದು ಗ್ಯಾರಂಟಿ. 'ಕೇಸರೀಬಾನಿ'ಗಳ ಬಾಡಿಗಾರ್ಡ್‌ಗಳಂತಾಗಿರುವ ಪೊಲೀಸರಿಂದ ಭಟ್ಟನನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಭಟ್ಟನ ಮೇಲೆ ನೆಪಕ್ಕಷ್ಟೇ ಕೇಸುಹಾಕಿ ಕಣ್ಣಿಗೆ ಮಣ್ಣೆರಚುವ ತಂತ್ರಗಾರಿಕೆಯನ್ನು ಪೊಲೀಸರು ಮಾಡುತ್ತಿದ್ದಾರೆ.


ಹಾಗಿದ್ದರೆ ಈ ಹಿಂದೂತ್ವದ ಕಳ್ಳ ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು?! ಸಿಎಂ ಸದಾನಂದ ಗೌಡ ಶೂದ್ರರ ಸ್ವಾಭಿಮಾನದ ಸಂಕೇತವಾಗುವರಾ? ಅಥವಾ ಅಬ್ರಾಹ್ಮಣರನ್ನು ಕಲ್ಲಡ್ಕ ಭಟ್ಟನೆಂಬ ಕೊಳ್ಳಿ ದೆವ್ವಕ್ಕೆ ಬಲಿ ಕೊಟ್ಟ ಪೂಜಾರಿ ಅನ್ನಿಸಿಕೊಳ್ಳುವರಾ? ಇದು ಕರಾವಳಿಯ ಕಂಗೆಟ್ಟವರ ಅಳಲು!

• ಸಹುಷ

▶5

ಯಡ್ಡಿಯ ಮುಂದಿನ ಯೋಜನೆ ಏನಾದೀತೆಂಬುದಕ್ಕೆ ಇದು ಸೂಚನೆಯಷ್ಟೇ. ಹಾಗೊಮ್ಮೆ ಮಾರ್ಚ್ ನಂತರ ಉತ್ತರದ ರಾಜ್ಯಗಳ ಚುನಾವಣೆ ಫಲಿತಾಂಶ ಹೊರಬಿದ್ದ ಮೇಲೂ ಹೈಕಮಾಂಡ್ ತನ್ನನ್ನು ಮುಖ್ಯಮಂತ್ರಿ ಮಾಡಲು ನಿರಾಕರಿಸಿದ್ದೇ ಆದರೆ ಬಿಜೆಪಿ ಸರ್ಕಾರವನ್ನೇ ಬುಡಮೇಲು ಮಾಡುವುದು ಯಡ್ಡಿಯ ಉದ್ದೇಶ. ಆಗ ಸಹಜವಾಗೇ ಬಿಜೆಪಿ ತನ್ನನ್ನು ಹೊರಹಾಕುತ್ತದೆ. ಹಾಗಾಯಿತೆಂದರೆ ಒಂದೋ ಹೊಸ ಪಕ್ಷ ಕಟ್ಟಬೇಕು ಅಥವಾ ಈಗಿರುವ ಯಾವುದಾದರೊಂದು ಪಕ್ಷವನ್ನು ಆಶ್ರಯಿಸಬೇಕು. ಜೆಡಿಎಸ್ ಜೊತೆ ಕೈಜೋಡಿಸುವುದು ಎತ್ತಿಂದೆತ್ತ ಲೆಕ್ಕಹಾಕಿದರೂ ಸಾಧ್ಯವಾಗದ ಮಾತು. ಕಾಂಗ್ರೆಸ್ ಮೊದಲೇ ಶತ್ರುವಾದ್ದರಿಂದ ಅದನ್ನು ಸೇರುವುದು ಆತ್ಮಹತ್ಯಾತ್ಮಕವಾಗುತ್ತದೆ. ಉಳಿದಿರುವುದು ನಿತೀಶ್ ಕುಮಾರ್ ಜೆಡಿಯು ಮತ್ತು ಶರದ್ ಪವಾರ್‌ರ ಎನ್‌ಸಿಪಿ. ಜೆಡಿಯು ಈಗಾಗಲೇ ಎನ್‌ಡಿಎ ಮಿತ್ರಕೂಟದಲ್ಲಿರುವುದರಿಂದ ಅದನ್ನು ಸೇರುವುದೆಂದರೆ ಪರೋಕ್ಷವಾಗಿ ಮತ್ತೆ ಅಡ್ವಾಣಿ ಮರ್ಜಿಗೊಳಪಟ್ಟಂತೆಯೇ.





ಹೊಸ ಪಕ್ಷದ ಅನಿವಾರ್ಯತೆಯಾಚೆಗೆ ಇಲ್ಲಿ ಯಡ್ಡಿಗೆ ಕಾಣುತ್ತಿರುವುದು ಶರದ್ ಪವಾರ್‌ರ ಎನ್‌ಸಿಪಿಯೊಂದೇ!

ತನಗೆ ಎನ್‌ಸಿಪಿ ಅನಿವಾರ್ಯವಾಗಿದ್ದೇ ಆದ ಪಕ್ಷದಲ್ಲಿ ಕಾಂಗ್ರೆಸ್ ಇದೇ ಸ್ಥಿತಿಯಲ್ಲಿತ್ತೆಂದರೆ ಅದು ತನ್ನದಾರಿಗೇ ತೊಡಕು. ಹೇಗಾದರೂ ಮಾಡಿ ಕಾಂಗ್ರೆಸ್ ಒಡೆದರಷ್ಟೇ ತನ್ನ ದಾರಿ ಸುಸೂತ್ರ. ಅದಕ್ಕೆ ಬಿ.ಸಿ. ಪಾಟೀಲ್ ಮತ್ತು ಮಾಲೀಕಯ್ಯ ಗುತ್ತೇದಾರ್‌ರಂಥ ಅತೃಪ್ತ ಕಾಂಗ್ರೆಸ್ ಶಾಸಕರನ್ನು ಯಡ್ಡಿ ಛೂಬಿಟ್ಟಿದ್ದಾರೆ. ಮೇಲುನೋಟಕ್ಕೆ ಈ ಇಬ್ಬರು ಶಾಸಕರು ಎನ್‌ಸಿಪಿಯ ದೂತರಂತೆ ಕಾಣುತ್ತಾರಾದರೂ ಇವರಿಬ್ಬರನ್ನೂ ಸೂತ್ರ ಹಿಡಿದು ಆಡಿಸುತ್ತಿರುವುದು ಸದ್ಯ ಹುಮ್ನಾಬಾದ್‌ನ ಕಾಂಗ್ರೆಸ್ ಶಾಸಕ ರಾಜಶೇಖರ್ ಪಾಟೀಲ್. ಈ ರಾಜಶೇಖರ್ ಪಾಟೀಲ್‌ಗೂ ಯಡ್ಡಿಗೂ ಏನು ಸಂಬಂಧ ಎಂದು ಅನೇಕರು ತಲೆಕೆಡಿಸಿಕೊಳ್ಳಬಹುದು. ಯಾರೂ ನಂಬಲಿಕ್ಕಿಲ್ಲ, ಕಳೆದ ಬಜೆಟ್ ಅವಧಿಗೆ ಹುಮ್ನಾಬಾದ್ ಕ್ಷೇತ್ರವೊಂದಕ್ಕೆ ಯಡ್ಡಿ 340 ಕೋಟಿ ರೂಪಾಯಿಗಳ ಅನುದಾನ ಕೊಡುತ್ತಾರೆಂದರೆ, ತನ್ನದಲ್ಲದ ಪಕ್ಷದ ವಿರೋಧಿ ಶಾಸಕನೊಬ್ಬನಿಗೆ ಯಡ್ಡಿ ಇಷ್ಟೆಲ್ಲ ಮಣೆ ಹಾಕಲು ಕಾರಣವಿರಲೇಬೇಕಲ್ಲವೆ?

## ರಾಜಶೇಖರ್ ಪಾಟೀಲ?


ಯಡ್ಡಿ ಮುಖ್ಯಮಂತ್ರಿಯಾಗಿದ್ದಷ್ಟೂ ಕಾಲ ಬೀದರ್‌ನ ಮಟ್ಟಿಗೆ ಮುಖ್ಯಮಂತ್ರಿಯಂತೆ ಮೆರೆದದ್ದು ಇದೇ ಹುಮ್ನಾಬಾದ್‌ನ ಕಾಂಗ್ರೆಸ್ ಶಾಸಕ ರಾಜಶೇಖರ್ ಪಾಟೀಲರೇ!

ಬಸವಕಲ್ಯಾಣದ ಬಿಜೆಪಿ ಶಾಸಕ ಬಸವರಾಜ್ ಪಾಟೀಲ್ ಅಟ್ಟೂರು ಮತ್ತು ಔರಾದ್‌ನ ಮತ್ತೊಬ್ಬ ಬಿಜೆಪಿ ಶಾಸಕ ಪ್ರಭು ಚವ್ಹಾಣರಂಥ ತನ್ನದೇ ಪಕ್ಷದ ಶಾಸಕರನ್ನು ಮೂಲೆಗೊತ್ತಿದ ಯಡ್ಡಿ ರಾಜಶೇಖರ್ ಪಾಟೀಲ್ ಹೇಳಿದ ಅಧಿಕಾರಿಗಳು, ಎಸ್ಪಿ, ಡೀಸಿ ಎಲ್ಲರನ್ನು ಬೀದರ್‌ನಲ್ಲಿ ಪ್ರತಿಷ್ಠಾಪಿಸಿದ್ದು ಅವರದೇ ಪಕ್ಷದ ಕಾರ್ಯಕರ್ತರ ಕಣ್ಣು ಚುಚ್ಚದೇ ಮತ್ತೇನು?




ಹೀಗೆ ಕಾಂಗ್ರೆಸ್ ಶಾಸಕ ರಾಜಶೇಖರ್ ಪಾಟೀಲರನ್ನು ಯಡ್ಡಿ ಎತ್ತಾಡಿ ಮೆರೆಸಿದ್ದರ ಹಿಂದಿದ್ದದ್ದು ಸದ್ಯ ಬಿಜೆಪಿಗೆ ಎಮ್ಮೆಲ್ಸಿಯಾಗಿರುವ ಬಸವರಾಜ್ ಪಾಟೀಲ್ ಹುಮ್ನಾಬಾದ್!

ಈ ಬಸವರಾಜ್ ಪಾಟೀಲ್ ಹುಮ್ನಾಬಾದ್ ಎಂಬ ಬಿಜೆಪಿ ಎಮ್ಮೆಲ್ಸಿಯೇ ಸದ್ಯ ಹುಮ್ನಾಬಾದ್‌ಗೆ ಕಾಂಗ್ರೆಸ್ ಶಾಸಕರಾಗಿರುವ ರಾಜಶೇಖರ್ ಪಾಟೀಲ್‌ರ ತಂದೆ.



ಇಲ್ಲಿಗೆ ಒಂದೂವರೆ ವರ್ಷದ ಹಿಂದೆ ಅಂದರೆ ಮೊನ್ನೆ ನಡೆದ ವಿಧಾನಸಭಾ ಪರಿಷತ್ ಚುನಾವಣೆಯ ತನಕ ಬಸವರಾಜ್ ಪಾಟೀಲ್ ಹುಮ್ನಾಬಾದ್ ಕಾಂಗ್ರೆಸ್ ನಾಯಕರಾಗೇ ಇದ್ದರು. ಕಳೆದ 20 ವರ್ಷಗಳಿಂದ ಸತತವಾಗಿ ಕಾಂಗ್ರೆಸ್‌ನಿಂದ ಗೆದ್ದು ಎಮ್ಮೆಲ್ಸಿಯಾಗುತ್ತಲೇ ಬಂದ ಬಸವರಾಜ ಪಾಟೀಲ್ ಹುಮ್ನಾಬಾದ್ ಮತ್ತು ಗುಲ್ಬರ್ಗದ ಖರ್ಗೆ-ಧರಂಸಿಂಗ್ ಮೂವರು ಹೈದ್ರಾಬಾದ್ ಕರ್ನಾಟಕದ ಮಟ್ಟಿಗೆ ತ್ರಿಮೂರ್ತಿಗಳಿದ್ದಂತೆ. ಯಡವಟ್ಟಾಗಿದ್ದು ಮಗ ರಾಜಶೇಖರ ಪಾಟೀಲನಿಂದ.




ಬಸವರಾಜ ಪಾಟೀಲರಿಗೂ ಬೀದರ್‌ನ ಪಾಳೇಗಾರ ಗುರುಪಾದಪ್ಪ ನಾಗಮಾರಪಲ್ಲಿಗೂ ಅನಾದಿಕಾಲದ ನೆಂಟಸ್ತಿಕೆ. ನಾಗಮಾರಪಲ್ಲಿಯ ಮಗ ಸೂರ್ಯಕಾಂತ್‌ಗೆ ತಮ್ಮ ಮಗಳನ್ನು ಕೊಟ್ಟು ಬೀಗತನದ ಸಂಬಂಧವೇರ್ಪಡಿಸಿಕೊಂಡ ಬಸವರಾಜ ಪಾಟೀಲ್ ಕೃಷ್ಣನ ಸಂಪುಟದಲ್ಲಿ ಖರ್ಗೆ-ಧರಂಸಿಂಗ್ ಜೊತೆಗೇ ಮಂತ್ರಿ ಪದವಿಯಲ್ಲಿದ್ದವರು. ಮಗ ರಾಜಶೇಖರ ಪಾಟೀಲನಿಗೆ ಹುಮ್ನಾಬಾದ್‌ನ ಕಾಂಗ್ರೆಸ್ ಟಿಕೆಟ್ ಕೊಡಿಸಿ ಗೆಲ್ಲಿಸಿದ ಬಸವರಾಜ್ ಪಾಟೀಲರಿಗೆ ಸಮಸ್ಯೆ ಶುರುವಾಗಿದ್ದೇ ಬಿಜೆಪಿ ಅಧಿಕಾರಕ್ಕೆ ಬಂದ ನಂತರ. ಮಗ ರಾಜಶೇಖರ್ ಪಾಟೀಲ್ ಕಾಂಗ್ರೆಸ್ ಶಾಸಕನಾದರೂ ವೃತ್ತಿಯಲ್ಲಿ ಕಂಟ್ರಾಕ್ಟರ್. ಸಹಜವಾಗೇ ಅಧಿಕಾರಸ್ಥ ಪಕ್ಷಕ್ಕೆ ಎಗ್ಗೆ ತಿಕ್ಕಬೇಕು.



## ತಂದೆ ಬಸವರಾಜ್ ಪಾಟೀಲ್

ತನ್ನ ಕಂಟ್ರಾಕ್ಟರ್ ಪ್ರವೃತ್ತಿಗೆ ತಕ್ಕಂತೆ ಮುಖ್ಯಮಂತ್ರಿ ಯಡ್ಡಿಗೆ ಆಪ್ತನಾದ ರಾಜಶೇಖರ್ ಪಾಟೀಲ್ ಆದಕ್ಕೆ ತನ್ನ ಜಾತಿಯನ್ನೇ ದಾಳ ಮಾಡಿಕೊಂಡ. ಹೇಗೂ ನಾಗಮಾರಪಲ್ಲಿ ಮಗನಿಗೆ ತಂಗಿಯನ್ನು ಕೊಟ್ಟ ಹಂಗಿತ್ತಲ್ಲ, ಆ ಸಂಬಂಧವನ್ನೇ ಬಳಸಿಕೊಂಡು ನಾಗಮಾರಪಲ್ಲಿಯನ್ನು ಬಿಜೆಪಿಗೆ ತರುವಲ್ಲಿ ರಾಜಶೇಖರ ಪಾಟೀಲ್ ಕೈಚಳಕ ಮೆರೆದುಬಿಟ್ಟ. ಮುಂದೆ ಲೋಕಸಭಾ ಚುನಾವಣೆ ಬಂತಲ್ಲ; ಅಸಲೀ ಫಜೀತಿ ಶುರುವಾಗಿದ್ದೇ ಬಸವರಾಜ ಪಾಟೀಲರಿಗೆ!

ಏಕೆಂದರೆ ಧರಂಸಿಂಗ್ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿದ್ದದ್ದು ಗುರುಪಾದಪ್ಪ ನಾಗಮಾರಪಲ್ಲಿ. ಖರ್ಗೆ-ಧರಂಸಿಂಗ್ ಸ್ನೇಹ ಮತ್ತು ಕಾಂಗ್ರೆಸ್ ಪಕ್ಷಬಂಧದ ಮಧ್ಯೆಯೂ ಮಗಳನ್ನು ಕೊಟ್ಟ ಮನೆಯ ಋಣವೇ ಬಸವರಾಜ ಪಾಟೀಲರಿಗೆ ಹೆಚ್ಚಾಯಿತು. ಮಗ ರಾಜಶೇಖರ್ ಪಾಟೀಲ್ ಮತ್ತು ಅಪ್ಪ ಬಸವರಾಜ ಪಾಟೀಲ್ ಕಾಂಗ್ರೆಸ್‌ನಲ್ಲಿದ್ದುಕೊಂಡೇ ಬಿಜೆಪಿಯ ನಾಗಮಾರಪಲ್ಲಿ ಜೊತೆ ಕೈಜೋಡಿಸಿಬಿಟ್ಟರು. ಅಷ್ಟಾಗ್ಯೂ ಗೆದ್ದದ್ದು ಮಾತ್ರ ಧರಂಸಿಂಗ್!

ಅಲ್ಲಿಗೆ ಹುಮ್ನಾಬಾದ್ ಮತ್ತು ಖರ್ಗೆ-ಧರಂಸಿಂಗ್ ಸಂಬಂಧವೇ ಕಡಿದು ಹೋಗಿತ್ತು. ಇದಾಗಿ ಎರಡು ವರ್ಷದ ನಂತರ ವಿಧಾನಪರಿಷತ್ ಚುನಾವಣೆ ಬಂದಾಗ ಧರಂಸಿಂಗ್-ಖರ್ಗೆ ಸೇರಿಕೊಂಡು ಹುಮ್ನಾಬಾದ್‌ಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಿದರು. ಆದರೇನಂತೆ ಮಗ ರಾಜಶೇಖರ್ ಪಾಟೀಲ್ ಯಡ್ಡಿ ಜೊತೆ ಸಂಬಂಧ ಕುದುರಿಸಿದ್ದು ಅಪ್ಪ-ಹುಮ್ನಾಬಾದ್‌ಗೆ ವರವಾಯಿತು. ಯಡ್ಡಿಯೇ ಕರೆದು ಹುಮ್ನಾಬಾದ್‌ಗೆ ಬಿಜೆಪಿ ಟಿಕೆಟ್ ಕೊಟ್ಟರು. ಪಕ್ಷ ಅಧಿಕಾರದಲ್ಲಿದ್ದುದರಿಂದ ಹುಮ್ನಾಬಾದ್ ಗೆದ್ದೂಬಿಟ್ಟರು. ಮೇಲುನೋಟಕ್ಕೆ ಅಪ್ಪ ಬಿಜೆಪಿ ಮಗ ಕಾಂಗ್ರೆಸ್ ಶಾಸಕ!

ಯಡ್ಡಿ ಜೊತೆಗಿನ ರಾಜಶೇಖರ ಪಾಟೀಲರ ಈ ಪಕ್ಷಘಾತುಕ ನೆಂಟಸ್ತಿಕೆಯೇ ಇವತ್ತು ಕಾಂಗ್ರೆಸ್‌ಗೆ ಮುಳುವಾಗುತ್ತಿದೆ. ಕಾಂಗ್ರೆಸ್ ಮಟ್ಟಿಗೆ ಯಾರೆಲ್ಲ ಖರ್ಗೆ-ಧರಂಸಿಂಗ್ ವಿರುದ್ಧ ತಿರುಗಿಬಿದ್ದಿದ್ದಾರೋ ಅವರೆಲ್ಲರನ್ನೂ ಯಡ್ಡಿ ಪರ ಒಗ್ಗೂಡಿಸುತ್ತಿರುವುದು ಹುಮ್ನಾಬಾದ್ ಶಾಸಕ ರಾಜಶೇಖರ್ ಪಾಟೀಲ್. ಶುರುವಿನಲ್ಲಿ ಬಿ.ಸಿ. ಪಾಟೀಲ್ ಮತ್ತು ಮಾಲೀಕಯ್ಯ ಗುತ್ತೇದಾರ್ ಎನ್‌ಸಿಪಿಯನ್ನು ಹೆಜ್ಜೆಯಿಟ್ಟವರಂತೆ ಕಾಣಿಸುತ್ತಿದ್ದಾರಾದರೂ ಆದರ ಅಸಲೀ ಸೂತ್ರಧಾರ ಮಾತ್ರ ರಾಜಶೇಖರ್ ಪಾಟೀಲರೆ.

## ಕಾಂಗ್ರೆಸ್ ಅತೃಪ್ತರು

ಇದೇ ರಾಜಶೇಖರ್ ಪಾಟೀಲ್ ಮಹಾರಾಷ್ಟ್ರದ ಕಾಂಟ್ರಾಕ್ಟ್ ವಿಷಯಕ್ಕೆ ಬಂದರೆ ಶರದ್ ಪವಾರ್‌ಗೆ ಪರಮಾಪ್ತ. ಶರದ್ ಪವಾರ್ ಹೇಳಿಕೇಳಿ ಸಕ್ಕರೆ ದೊರೆ. ಹುಮ್ನಾಬಾದ್‌ನ ರಾಜಶೇಖರ್ ಪಾಟೀಲ್ ಕೂಡ ಸಕ್ಕರೆ ಕಾರ್ಖಾನೆದಾರನೆ. ಎನ್‌ಸಿಪಿ ನಾಯಕ ಶರದ್ ಪವಾರ್‌ಗೆ ಕರ್ನಾಟಕದ ಮಟ್ಟಿಗೆ ರಾಜಶೇಖರ್ ಪಾಟೀಲರಿಗಿಂತಲೂ ಆತ್ಮೀಯತೆಯಿರುವುದು ಹುಕ್ಕೇರಿ ಶಾಸಕ ಮತ್ತು ಹಾಲಿ ಕೃಷಿ ಸಚಿವ ಉಮೇಶ್ ಕತ್ತಿ ಜೊತೆ. ಅತ್ತ ರಾಜಶೇಖರ್ ಪಾಟೀಲ್ ಮತ್ತು ಉಮೇಶ್ ಕತ್ತಿ ಸೇರಿಕೊಂಡೇ ಶರದ್ ಪವಾರ್ ಮತ್ತು ಯಡ್ಡಿ ದಾಂಪತ್ಯಕ್ಕೆ ಚಾಲನೆ ಕೊಡುತ್ತಿದ್ದಾರೆ.

ಯಡ್ಡಿ ಎಲ್ಲಾ ಬಿಟ್ಟು ಸಿದ್ಧರಾಮಯ್ಯರ ಬಗ್ಗೆ ಮೊಸಳೆ ಕಣ್ಣೀರಿಡುವುದಕ್ಕೆ ಉಮೇಶ್ ಕತ್ತಿ ಮತ್ತು ರಾಜಶೇಖರ್ ಪಾಟೀಲರ ಕಾರಸ್ಥಾನಗಳಿಗೂ ಸಂಬಂಧವಿದೆ. ಹೇಗೂ ಮುಂಬರುವ ಚುನಾವಣೆಯಲ್ಲಿ ಹುಮ್ನಾಬಾದ್ ಕಾಂಗ್ರೆಸ್ ಟಿಕೆಟ್ ರಾಜಶೇಖರ ಪಾಟೀಲರಿಗೆ ಸಿಗುವುದು ಕಷ್ಟ. ಖರ್ಗೆ-ಧರಂಸಿಂಗ್‌ರೇ ಅದಕ್ಕೆ ಅಡ್ಡಗಾಲಿಡುತ್ತಾರೆ. ಅದಕ್ಕೆ ಕಾಂಗ್ರೆಸ್ಸಿಗೇ ಒಂದು ಗತಿ ಕಾಣಿಸಲು ರಾಜಶೇಖರ ಪಾಟೀಲ್ ಕತ್ತಿಮಸೆಯುತ್ತಿದ್ದಾರೆ. ಹುಮ್ನಾಬಾದ್ ಪಕ್ಕದ ಭಾಲ್ಕಿಗೆ ಸದ್ಯ ಕಾಂಗ್ರೆಸ್ ಶಾಸಕರಾಗಿರುವುದು ಈಶ್ವರ್ ಖಂಡ್ರೆ. ಜಾತಿಯಲ್ಲಿ ಲಿಂಗಾಯತ ಮತ್ತು ರಾಜಕೀಯವಾಗಿ ಗಾಡ್‌ಫಾದರ್‌ಗಳಿಲ್ಲದ ಅನಾಥ. ಹಾಗೇ ಬಿಜಾಪುರದ ಬಬಲೇಶ್ವರದ ಶಾಸಕ ಮತ್ತು ಮೆಡಿಕಲ್ ದೈತ್ಯ ಎಂ.ಬಿ. ಪಾಟೀಲ್, ಮುದ್ದೇಬಿಹಾಳದ ಅಪ್ಪಾಜಿ ನಾಡಗೌಡರಂಥ ಲಿಂಗವಂತರಿಗೆಲ್ಲ ಕಾಂಗ್ರೆಸ್‌ನಲ್ಲಿ ಅನಾಥ ಪ್ರಜ್ಞೆ ಕಾಡುತ್ತಿದೆ. ಇವರೆಲ್ಲರಿಗೂ ಯಡ್ಡಿ ಪಕ್ಷಭೇದ ಮರೆತು ನೆರವಾದ ಋಣವಿದೆ.

ರಾಯಚೂರಿನ ಮಾನ್ವಿ ಶಾಸಕ ಹಂಪಯ್ಯ ನಾಯ್ಕ, ಬೆಳಗಾವಿಯ ಚಿಕ್ಕೋಡಿ ಶಾಸಕ ಪ್ರಕಾಶ್ ಹುಕ್ಕೇರಿ, ಕುಡಚಿ ಶಾಸಕ ಶಾಮಭೀಮ ಘಾಟ್ಗೆ ಕೂಡ ಕಾಂಗ್ರೆಸ್ ನಾಯಕತ್ವದ ವಿರುದ್ಧ ಸಿಡಿದೆದ್ದಿದ್ದಾರೆ. ಇಂಥ ಅತೃಪ್ತ, ಅಸಂತುಷ್ಟ ಕಾಂಗ್ರೆಸ್ ಶಾಸಕರೆಲ್ಲರನ್ನೂ ಎನ್‌ಸಿಪಿಯತ್ತ ಸೆಳೆಯುವುದು ರಾಜಶೇಖರ್ ಪಾಟೀಲ್ ಮತ್ತು ಉಮೇಶ್ ಕತ್ತಿಯ ಯಡ್ಡಿಪರ ರಣತಂತ್ರ. ಇಂಥ ಸರಿಸುಮಾರು ಹದಿನೈದಿಪ್ಪತ್ತು ಮಂದಿ ಕಾಂಗ್ರೆಸ್ ಶಾಸಕರೆಲ್ಲ ಎನ್‌ಸಿಪಿ ಸೇರಿದರೆಂದರೆ ಕಾಂಗ್ರೆಸ್ ಪಾಲಿಗೆ ಲಿಂಗಾಯಿತ ವರ್ಗದ ಎಲ್ಲಾ ಬಾಗಿಲುಗಳು ಮುಚ್ಚಿದಂತೆಯೇ.

ಇದಕ್ಕೆ ಸರಿಯಾಗಿ ಅಸಂತುಷ್ಟ ಸಿದ್ದುವನ್ನು ಕಾಂಗ್ರೆಸ್ ತೊರೆಯುವಂತೆ ಮಾಡಿಬಿಟ್ಟರೆ ಒಂದೆಡೆ ಲಿಂಗಾಯತರು ಮತ್ತೊಂದೆಡೆ ಕುರುಬರು ಕಾಂಗ್ರೆಸ್ ಪಾಲಿಗೆ ಶಾಶ್ವತವಾಗಿ ಇಲ್ಲವಾದಂತೆಯೇ.

ತನ್ನ ಕನಸಿನ ಸಾಮ್ರಾಜ್ಯ ಸಾಕಾರಗೊಳ್ಳಬೇಕೆಂದರೆ ಅದು ಬಿಜೆಪಿ ಮತ್ತು ಕಾಂಗ್ರೆಸ್ಸಿನ ಸಮಾಧಿಯ ಮೇಲೆ ತಾನೆ?

ಅದಕ್ಕೆಂದು ಸಿಕ್ಕಿರುವ ಮಾಯಾಜಿಂಕೆಯೇ ಎನ್‌ಸಿಪಿ. ಅಡ್ವಾಣಿ, ಅನಂತ್, ಆರೆಸ್ಸೆಸ್ ಯಾರ ಹಂಗೂ ಇಲ್ಲ. ಸರ್ಕಾರ ಉರುಳಿಸಿದರೆ ರಾಜ್ಯಪಾಲ ಭಾರದ್ವಾಜರ ಭಯವಿಲ್ಲ. ಸಿಬಿಐ ಕಾಟವಿಲ್ಲ, ಕೇಂದ್ರದ ಕಾಂಗ್ರೆಸ್ಸಿನ ಮರ್ಜಿಗೆ ಕಾಯಬೇಕಿಲ್ಲ. ಶರದ್ ಪವಾರ್ ಎಂಬ ಗುರಾಣಿಯ ರಕ್ಷೆಯಲ್ಲಿ ಏನೆಲ್ಲ ಸಾಧಿಸಬಹುದಲ್ಲವೆ?

ಮಾಯಾಜಿಂಕೆಯ ಬೆನ್ನೇರಿ ಹೊರಟ ಭ್ರಷ್ಟ ವೃದ್ಧನ ದುರಾಸೆ ಸದ್ಯಕ್ಕೆ ತಣಿಯುವುದಿಲ್ಲ. ✤

# ದಲಿತರಿಗೇ ಹೆಮ್ಮಾರಿ ಮಾರಸಂದ್ರ ಮುನಿಯಪ್ಪ

ಬಹುಜನ ಸಮಾಜ ಪಕ್ಷದ ಕರ್ನಾಟಕ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪನ ವಿರುದ್ಧ ಹೊಸ ಕೇಸ್ ಒಂದು ದಾಖಲಾಗಿದೆ.


ಇದೂ ಸೇರಿದರೆ ಮುನಿಯಪ್ಪನ ವಿರುದ್ಧ ದಾಖಲಾಗುತ್ತಿರುವ 34 ನೇ ಕೇಸು ಇದೆಂದರೆ ನೀವು ನಂಬಲೇಬೇಕು. ಈ ಕಂಪ್ಲೇಂಟ್ ಹಾಗೂ ಕೇಸ್‌ಗಳ ಪೈಕಿ ಬಹುತೇಕವು ಭೂಕಬಳಿಕೆ, ಬೆದರಿಕೆ, ಹಲ್ಲೆ, ದಾಂಧಲೆಗಳ ಪ್ರಕರಣಗಳಾಗಿವೆ.

ಅಂದಹಾಗೆ ಮಾರಸಂದ್ರ ಮುನಿಯಪ್ಪನ ವಿರುದ್ಧ ಬಡದಲಿತರೇ ಹೆಚ್ಚಾಗಿ ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಈ ರೀತಿ ನೊಂದವರ ಸಿಟ್ಟು ಆಕ್ರೋಶಗಳೀಗ ಸಂಘಟಿತ ರೂಪ ತಾಳಿದೆ. 'ದಲಿತರಿಂದ ದಲಿತರ ಶೋಷಣೆ ವಿರೋಧಿ ಸಮಿತಿ' ಎನ್ನುವ ಹೊಸ ಸಂಘಟನೆಯೇ ಈಗ ಹುಟ್ಟಿಕೊಂಡಿದೆ.

ಮಾರಸಂದ್ರ ಮುನಿಯಪ್ಪನ ಭೂಕಬಳಿಕೆ, ದಬ್ಬಾಳಿಕೆ ಹಾಗೂ ಶೋಷಣೆಗಳ ವಿರುದ್ಧ ದಲಿತ ಬಡಜನರೇ ರೂಪಿಸಿಕೊಂಡಿರುವ ಸಂಘಟನೆ ಇದು. ಮುನಿಯಪ್ಪ ಈ ತನಕ ಡಜನ್‌ಗಟ್ಟಲೇ ಕ್ರಿಮಿನಲ್ ಕೇಸುಗಳಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿದ್ದರೂ ಪೊಲೀಸರು ಗಂಭೀರವಾಗಿ ಪರಿಗಣಿಸದೆ, ಸೂಕ್ತ ಕಾನೂನು ಕ್ರಮಗಳನ್ನು ಜರುಗಿಸದೆ ಇರುವುದೀಗ ರಾಜ್ಯ ಹೈಕೋರ್ಟ್ ಗಮನಕ್ಕೂ ಬಂದಿದೆ. ಬಹುಜನ ಸಮಾಜ ಪಕ್ಷದಲ್ಲೇ ಇದ್ದ ಡಿ.ವೀರಣ್ಣ ಎಂಬುವವರು ಈ ಬಗ್ಗೆ ಹೈ ಕೋರ್ಟ್‌ನಲ್ಲಿ ದೂರು ಅರ್ಜಿ ನೀಡಿದ್ದಾರೆ. ಈ ಮುನಿಯಪ್ಪನ ಬಗ್ಗೆ ಪೂರ್ಣ ವಿವರಗಳನ್ನು ನೀಡುವಂತೆ ಕೋರ್ಟ್ ಈಗ ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ, ಗೃಹ ಕಾರ್ಯದರ್ಶಿ ಹಾಗೂ ಬೆಂಗಳೂರು ಸಿಟಿ ಪೊಲೀಸ್ ಕಮೀಷನ್‌ರಿಗೆ ಸೂಚಿಸಿದೆ.


### ಭೂಕಬಳಿಕೆಯ ವೃತ್ತಾಂತ

ಬೆಂಗಳೂರು ಉತ್ತರ ತಾಲೂಕಿನ ಮಾರಸಂದ್ರದ ಮುನಿಯಪ್ಪ ಈಗ್ಗೆ ಮೂರು ವರ್ಷಗಳ ಹಿಂದೆ ರಾಜ್ಯ ಬಹುಜನ ಸಮಾಜ ಪಾರ್ಟಿಗೆ ಅಧ್ಯಕ್ಷರಾದರು. ಅದುವರೆಗೂ ಅಧ್ಯಕ್ಷರಾಗಿದ್ದ ಬಿ. ಗೋಪಾಲ್ ಬಹಳ ಸಭ್ಯ ವ್ಯಕ್ತಿ, ತಂಟೆ ತಕರಾರುಗಳಿಲ್ಲದ ರಾಜಕಾರಣಿಯಾಗಿದ್ದರು. ಆದರೆ 2008ರ ಜನವರಿಯಲ್ಲೆಂದು ಕಾಣುತ್ತದೆ. ಒಂದು ದಿನ ಬೆಂಗಳೂರಿಗೆ ಬಂದ ಮಾಯಾವತಿ ಪಕ್ಷದ ಬಹಿರಂಗ ಸಭೆಯಲ್ಲೇ "ಇನ್ನು ಮೇಲೆ ಕರ್ನಾಟಕ ಬಿ.ಎಸ್.ಪಿ.ಗೆ ಮಾರಸಂದ್ರ ಮುನಿಯಪ್ಪ ಅಧ್ಯಕ್ಷರಾಗುತ್ತಾರೆ. ಗೋಪಾಲ್ ಮನೆಗೆ ಹೋಗಬಹುದು" ಎನ್ನುವಂತೆ ಒರಟೊರಟಾಗಿ ಅನೌನ್ಸ್ ಮಾಡಿ ಎಲ್ಲರಿಗೂ ಶಾಕ್ ನೀಡಿದ್ದರು. ಮುನಿಯಪ್ಪ ರಾಜ್ಯ ಬಿಎಸ್‌ಪಿ




ಅಧ್ಯಕ್ಷರಾಗಿದ್ದು ದಲಿತ ದಮನಿತ ಜನರಿಗೆ ಸ್ಥೈರ್ಯ ತುಂಬುವ ಬದಲು ಹೊಸ ದಮನಕಾಂಡ ಶು:) ಮಾಡಲು ಅವಕಾಶ ಸಿಕ್ಕಂತಾಯಿತು.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಮುನಿಯಪ್ಪ ವಿರುದ್ಧ ಈಗ ಒಟ್ಟಾರೆ 34 ಕೇಸುಗಳಿವೆ ಎನ್ನಲಾಗುತ್ತಿದೆ. ಕೋಟ್ಯಾಂತರ ರೂಪಾಯಿಗಳ ಬೆಲೆಯ ಮನೆ, ಜಮೀನುಗಳಿವೆ ಎಂತಲೂ ಸುದ್ದಿ ಇದೆ. ಆದರೆ ಇದೇ ಮುನಿಯಪ್ಪ 2004 ರಲ್ಲಿ ಸಾತನೂರು ಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ನಿಂತಿದ್ದಾಗ ತನ್ನದೆಂಬ ಒಂದೇ ಒಂದೂ ಆಸ್ತಿಯೂ ಇಲ್ಲವೆಂದು ಅಫಿಡವಿಟ್ ನೀಡಿದ್ದಾರೆ. ತಾಯಿ ಲಕ್ಷ್ಮಮ್ಮನವರ ಹೆಸರಿನಲ್ಲಿರುವ 2 ಎಕರೆ ಭೂಮಿ ಹಾಗೂ 20x30 ಅಡಿ ಅಳತೆಯ ಸಣ್ಣ ಮನೆ ಮಾತ್ರ ಅವರ ಕುಟುಂಬಕ್ಕಿತ್ತು. ಅದೇ ಸಮಯದಲ್ಲಿ ಮುನಿಯಪ್ಪನ ವಿರುದ್ಧ ಒಂದೇ ಒಂದು ಪೊಲೀಸ್ ದೂರು, ಕ್ರಿಮಿನಲ್ ಕೇಸು, ನ್ಯಾಯಾಲಯದ



ಎದುರು ವಿಚಾರಣೆ ಬಾಕಿ ಇರುವ ಪ್ರಕರಣಗಳೂ ಇರಲಿಲ್ಲ ಅಂತಲೇ ಅಫಿಡವಿಟ್ ನೀಡಲಾಗಿದೆ.

ಇದು ನಿಜ ಎಂತಾದರೆ ಮುನಿಯಪ್ಪನ ವಿರುದ್ಧ ದಾಖಲಾಗಿರುವ ಕೇಸುಗಳೆಲ್ಲಾ ಆ ನಂತರದ್ದು ಎಂದು ಹೇಳಿಕೊಳ್ಳಬಹುದು. ಬಹಳ ಮುಖ್ಯವಾಗಿ ಮುನಿಯಪ್ಪ ಬಿಎಸ್‌ಪಿ ರಾಜ್ಯಾಧ್ಯಕ್ಷರಾದ ಮೇಲೆ ಮಾಡಿರುವ ಕಾನೂನುಬಾಹಿರ ಕೃತ್ಯಗಳಿಂದ ದಾಖಲಾಗಿರುವ ಪ್ರಕರಣಗಳು ಎಂದಾಗುತ್ತವೆ. ಅಂತಹ ಕೆಲವು ಪ್ರಕರಣ ಭೂಕಬಳಿಕೆಯ ವಿವರಗಳು ಇಲ್ಲಿವೆ.




ರಂಗಪ್ಪ

### ಲಕ್ಷ್ಮೀಪುರ ಭೂಹಗರಣ


ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲೂಕು ಯಶವಂತಪುರ ಹೋಬಳಿ ಲಕ್ಷ್ಮೀಪುರ ಗ್ರಾಮದ ಸರ್ವೆ ನಂಬರ್ 11 ರಲ್ಲಿ ಹನ್ನೊಂದು ಎಕರೆ ಭೂಮಿಯು ಐವರು ಬಡ ದಲಿತ ಮಹಿಳೆಯರಿಗೆ ಸರ್ಕಾರದಿಂದ ಮಂಜೂರಾಗಿತ್ತು. ಈ ರೀತಿಯ ಭೂಮಂಜೂರಾತಿಗಳು ಪಿಟಿಸಿಎಲ್ ಕಾಯ್ದೆ ವ್ಯಾಪ್ತಿಗೆ ಬರುತ್ತವೆ. ಆ ಕಾಯ್ದೆ ಪ್ರಕಾರ ಪರಿಶಿಷ್ಟ ಜಾತಿಯವರಿಗೆ ಒಮ್ಮೆ ಸರ್ಕಾರ ಭೂಮಿ ಮಂಜೂರು ಮಾಡಿದರೆ ಆ ಭೂಮಿಯನ್ನು ಯಾರೇ ಆಗಲಿ ಸರ್ಕಾರದ ಅನುಮತಿ ಇಲ್ಲದೇ ಖರೀದಿಸುವಂತಿಲ್ಲ, ದಲಿತರೂ ಸಹ ಇನ್ನೊಬ್ಬ ದಲಿತರ ಭೂಮಿ ಕೊಳ್ಳುವಂತಿಲ್ಲ. ಆದರೆ ಮುನಿಯಪ್ಪ ಈ ಮಹಿಳೆಯರಿಗೆ ಮಂಜೂರಾಗಿದ್ದ ಜಮೀನುಗಳನ್ನು ಅಕ್ರಮ ಒಪ್ಪಂದದ ಮೂಲಕ ಕಾನೂನುಬಾಹಿರವಾಗಿ ತಮ್ಮ ವಶಕ್ಕೆ ಪಡೆದಿದ್ದಾರೆ. ಈಗ ಕೋಟಿಗಟ್ಟಲೆ ಬೆಲೆಬಾಳುವ ಆ ಜಮೀನಿನಲ್ಲೇ ಅಕ್ರಮ ಬಡಾವಣೆ ರಚಿಸಿ ಸೈಟುಗಳನ್ನು ಮಾರಿದ್ದಾರೆ. ಆಶ್ಚರ್ಯವೆಂದರೆ ಈ ರೀತಿ ದಲಿತ ಬಡವರ ಭೂಮಿ ಕಿತ್ತು ಸೈಟು ಮಾಡಿ ಮಾರಿರುವ ಬಡಾವಣೆಗೆ "ಕಾನ್ಷಿರಾಂಜೀ ನಗರ" ಎಂದು ಹೆಸರಿಟ್ಟಿದ್ದಾರೆ. ಅದೇ ಜಾಗದಲ್ಲಿ ತನಗೆಂದು ದೊಡ್ಡ ಬಂಗಲೆ ನಿರ್ಮಿಸಿಕೊಂಡು ಅದಕ್ಕೆ 'ಮಾಯಾವತಿ ವೈಟ್ ಹೌಸ್' ಎಂದು ಹೆಸರಿಟ್ಟಿದ್ದಾರೆ. ಅದೇ ಬಡಾವಣೆಯಲ್ಲಿ ಓಡಾಡಿ ಗಮನಿಸಿದರೆ ರಸ್ತೆಗಳಿಗೆ ಜ್ಯೋತಿ ಬಾ ಫುಲೆ, ಸಾಹು ಮಹಾರಾಜ, ಭಗವಾನ್ ಬುದ್ಧರ ಹೆಸರಿಟ್ಟಿರುವುದೂ ಕಾಣಸಿಗುತ್ತದೆ. ಇಂತಾ ಬೋರ್ಡುಗಳ ಕೆಳಗೆ ಭೂಮಿ ಕಳೆದುಕೊಂಡಿರುವ ಜಯಮ್ಮ, ಗೌರಮ್ಮ ಮುಂತಾದ ದಲಿತ ಮಹಿಳೆಯರ ಬದುಕು ಛಿದ್ರವಾಗಿ ಹೋಗಿದೆ.



ಜಯಮ್ಮ



ಗೌರಮ್ಮ



ಸೈಯದ್ ಬಷೀರ್

ಈಗ ಜಯಮ್ಮ ಭೂಮಿ ವಿಚಾರವಾಗಿ ಕೋರ್ಟ್‌ಗೆ ಹೋಗಿ ಇಂಜಕ್ಷನ್ ಪಡೆದು ಬಂದಿದ್ದಾರೆ. ಈ ವಿಚಾರವಾಗಿಯೇ ಜಯಮ್ಮನವರ ತಮ್ಮ ಡಿ.ವೀರಣ್ಣ ಅಕ್ಕನ ಸಹಾಯಕ್ಕೆಂದು ಓಡಾಡುತ್ತಿದ್ದಾಗ ಅವರ ಕೊಲೆ ಯತ್ನ ನಡೆದಿದೆ. ಜನವರಿ 6ನೇ ತಾರೀಖು ಈ ಘಟನೆ ನಡೆದಿದ್ದು ಮುನಿಯಪ್ಪ, ಪುರುಷೋತ್ತಮ, ಉದಯಕುಮಾರ್, ರವಿ ಕುಮಾರ್ ಹಾಗೂ ಮುನಿಯಪ್ಪನ ಮಗ ಸಂದೀಪ ವಿರುದ್ಧ ಹೆಬ್ಬಾಳ ಪೊಲೀಸರಿಗೆ ದೂರು ನೀಡಲಾಗಿದೆ ಎಫ್.ಐ.ಆರ್ ಸಹ ದಾಖಲಾಗಿದೆ. ಮುನಿಯಪ್ಪ ವಿರುದ್ಧ ಈ ತರಹದ ಇನ್ನೂ ಹಲವು ಕಂಪ್ಲೇಂಟುಗಳಿವೆ.

ದೇವನಹಳ್ಳಿ ಏರ್‌ಪೋರ್ಟ್ ಹತ್ತಿರದ ವೆಂಕಟಾಲದಲ್ಲಿ ದಲಿತರಿಗೆ ಸೇರಿದ್ದ 30 ಎಕರೆ ಭೂಮಿಯನ್ನು ಪಿಟಿಸಿಎಲ್ ಕಾಯ್ದೆ ಉಲ್ಲಂಘಿಸಿ ಇದೇ ಮುನಿಯಪ್ಪ ವಶಪಡಿಸಿಕೊಂಡು ಪೂನಾ ಮೂಲದವರಿಗೆ ಮಾರಿದ್ದಾರೆ ಎನ್ನಲಾಗಿದೆ. ಇದೊಂದೇ ಡೀಲ್‌ನಲ್ಲಿ ಮುನಿಯಪ್ಪ 63 ಕೋಟಿ ರೂಪಾಯಿಗಳಿಗೂ ಜಾಸ್ತಿ ಹಣ ಪಡೆದಿದ್ದಾರಂತೆ!

ಯಲಹಂಕ ಪೊಲೀಸ್ ಠಾಣೆಯಲ್ಲಿ ಇದರ ಬಗ್ಗೆ ಕೇಸ್ ದಾಖಲಾಗಿದೆ.

▶12

# ಸಿಂಧಗಿ ಮಠದಲ್ಲಿ ಸ್ವಾಮಿಯ ಮರ್ಡರ್!

ದಾಯಾದಿ ಕಲಹ, ಆಸ್ತಿ ವಿವಾದಗಳು ಸಿಂಧಗಿಯ ಕಕ್ಕಳಮೇಲಿಯ ಜಂಗಮ ಲಿಂಗಾಯತ ಮಠವನ್ನು ನೆತ್ತರುಮಯಗೊಳಿಸಿವೆ. ಇದೇ ಸೋಮವಾರ ಮಠಕ್ಕೆ ಸೇರಿದ ಆಸ್ತಿಗೆ ಸಂಬಂಧಿಸಿದಂತೆ ತನ್ನ ಸೋದರ ಸಂಬಂಧಿಗಳಿಂದಲೇ ಹಲ್ಲೆಗೊಳಗಾದ ಮಠದ ಹಾಲಿ ಸ್ವಾಮೀಜಿ ಶ್ರೀ ನೂರೊಂದೇಶ್ವರ ಶಿವಾಚಾರ್ಯ ಸ್ವಾಮಿ ತೀವ್ರ ರಕ್ತಸ್ರಾವದಿಂದ ಸಾವನ್ನಪ್ಪಿದ್ದು ಕೊಲೆಗಾರರ ತಲಾಷಿಗೆ ಪೊಲೀಸರು ಬಲೆ ಬೀಸಿ ಕೂತಿದ್ದಾರೆ.


ಜನವರಿ 23 ಅಮಾವಾಸ್ಯೆಯಾಗಿತ್ತಾದ್ದರಿಂದ ಮಠದಲ್ಲಿ ಭಕ್ತರು, ಕಾರ್ಯಕ್ರಮಗಳ ಸಣ್ಣನೆ ಗೌಜು ಗದ್ದಲವಿತ್ತು. ಕಾಶಿಯಲ್ಲಿ ಎಂ.ಎ, ಪಿಎಚ್.ಡಿ ಮುಗಿಸಿ ಬಂದಿದ್ದ ನೂರೆಂದೇಶ್ವರರು ಬರುವ ಭಕ್ತರೆನಿಸಿಕೊಂಡವರಿಗೆ ಪ್ರವಚನ ನೀಡುವ, ಸಂಕಷ್ಟಗಳಿಗೆ ಸಮಾಲೋಚನೆ ನೀಡುವುದನ್ನು ರೂಢಿಸಿಕೊಂಡಿದ್ದರು. ಸುಮಾರು ಎಂಟು ಗಂಟೆಯ ಸುಮಾರಿಗೆ ಭಕ್ತರ ಸಂಖ್ಯೆ ಸ್ವಲ್ಪ ಕಡಿಮೆಯಾಗುತ್ತಿದ್ದಂತೆ ಸ್ವಾಮಿ ಬಹಿರ್ದೆಸೆಗೆಂದು ಮಠದಿಂದ ಹೊರಬಂದಿದ್ದರು. ಅದೂ ತುಂಬಾ ದೂರವೇನಲ್ಲ, ಮಠದ ಕಾಂಪೌಂಡಿನಿಂದ ಚೂರೇ ಚೂರು ಹಿಂದಕ್ಕಷ್ಟೆ.

ಚಿಕ್ಕ ಊರಾಗಿತ್ತಾದ್ದರಿಂದ ಆದಾಗಲೇ ಜನರ ಸದ್ದಡಗಿ ಹೋಗಿತ್ತು, ತಾವು ಬಹಿರ್ದೆಸೆಗೆಂದು ಕೂತ ಕಡೆಗೆ ಒಂದಿಬ್ಬರು ಬರುತ್ತಿರುವುದು ಸ್ವಾಮಿಗೆ ಅಸ್ಪಷ್ಟವಾಗಿ ಕಾಣಿಸಿತ್ತಾದರೂ ಅಪಾಯದ ಸೂಚನೆಯಿರದಿದ್ದರಿಂದ ಅಷ್ಟೇನು ಗಮನವನ್ನವರು ನೀಡಿರಲಿಲ್ಲ, ಆದರೆ ಬಂದವರೆ ಏಕಾಏಕಿ ತಲವಾರಿನಿಂದ ಸ್ವಾಮಿಯ ಮೇಲೆ ಹಲ್ಲೆ ಮಾಡಿದ್ದರು. ಇದ್ದಕ್ಕಿದ್ದಂತೆ ಆದ ಈ ಆಕ್ರಮಣಕ್ಕೆ ಕಂಗಾಲಾಗಿ ಹೋದ ಸ್ವಾಮಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ್ದರಾದರೂ ಸಜ್ಜಾಗಿ ಬಂದಿದ್ದ ಹಂತಕರು ಬಲವಾಗಿ ಬೀಸಿದ ಏಟಿಗೆ ಅವರ ಬಲಗೈ ಕಂಪ್ಲೀಟಾಗಿ ಓಪನ್ನಾಗಿತ್ತು, ಏಟು ಬಲವಾಗಿಯೇ ಬಿದ್ದಿತ್ತು, ಮಚ್ಚು 4-5 ಇಂಚು ಆಳದ ಗಾಯದೊಂದಿಗೆ ನೆತ್ತರನ್ನು ಚಿಮ್ಮಿಸಿದಾಗಲೇ ಸ್ವಾಮಿ ನಿತ್ರಾಣರಾಗಿ ಹೋಗಿದ್ದರಾದರೂ ಸಾವರಿಸಿಕೊಂಡು ತಪ್ಪಿಸಿಕೊಳ್ಳಬೇಕೆನ್ನುವ ಹೊತ್ತಿಗೆ ಎರಡನೇ ಏಟೂ ಬಿದ್ದಿದೆ. ಈ ಬಾರಿ ಎಡಗೈನ ಒಂದಷ್ಟು ಭಾಗ ಕತ್ತರಿಸಿಕೊಂಡು ನೆಲ ಸೇರಿದ್ದರೆ, ಮುಖದ ಮೇಲೂ ಗಾಯವಾಗಿತ್ತು,

ಸ್ವಾಮಿ ಸುಸ್ತಾಗಿ ನೆಲಕ್ಕೆ ಬೀಳುತ್ತಿದ್ದಂತೆ, ಇನ್ನೇನು ಸತ್ತೇ ಹೋದರೆಂದುಕೊಂಡ ಹಂತಕರು ಅಲ್ಲಿಂದ ಎಸ್ಕೇಪಾಗಿದ್ದರು.



ಸ್ವಾಮಿಗೆ ಇನ್ನೂ ಮಧ್ಯ ವಯಸ್ಸಿಗರಾದ್ದರಿಂದ ಆ ಪರಿ ಗಾಯದ ನಡುವೆಯೇ ಮಠದವರೆಗೆ ಬಂದವರೆ ಹಲ್ಲೆಯಾಗಿದ್ದನ್ನು ಚೀರುತ್ತಾ ಕುಸಿದಿದ್ದಾರೆ. ದಿಗ್ಭ್ರಾಂತರಾದ ಭಕ್ತರು ಕೂಡಲೇ ಸ್ವಾಮಿಗಳನ್ನು ಸಿಂಧಗಿಯ ಆಸ್ಪತ್ರೆಗೆ ಸಾಗಿಸಿದ್ದರಾದರು ಆದಾಗಲೆ ವಿಪರೀತ ರಕ್ತ ಹರಿದು ಹೋಗಿತ್ತಾದ್ದರಿಂದ ರಿಸ್ಕ್ ತೆಗೆದುಕೊಳ್ಳಲಿಚ್ಛಿಸದ ಆಸ್ಪತ್ರೆ ಯವರು ಬಿಜಾಪುರದ ಕಡೆಗೆ ಚೊಟ್ಟು ಮಾಡಿದ್ದರು. ಅಲ್ಲಿಗೆ ಹೋದಾಗಲು ಸ್ವಾಮಿ ಜೀವಂತವಾಗೇ ಇದ್ದರು. ಅಲ್ಲಿಯೂ ಚಿಕಿತ್ಸೆಗೆ ಸೊಲ್ಲಾಪುರದ ದಾರಿ ತೋರಿದ್ದಾರೆ. ಸೊಲ್ಲಾಪುರಕ್ಕೆ ಹೋಗುವ ದಾರಿಯಲ್ಲೆ ಸ್ವಾಮಿ ಇನ್ನಿಲ್ಲದಂತಾಗಿದ್ದರು.



ಅಷ್ಟಕ್ಕೂ ಸಿಂಧಗಿಯ ಸೆರಗಿನಲ್ಲೇ ಇರುವ ಕಕ್ಕಳಮೇಲಿಯ ಈ ಮಠ ಒಂದು ಸಾಧಾರಣ ಮಠವಷ್ಟೆ. ಸದ್ಯ ಕೊಲೆಯಾಗಿರುವ ನೂರೊಂದಯ್ಯನವರ ತಾತ ಈ ಮಠವನ್ನು ಹುಟ್ಟುಹಾಕಿ ತಮ್ಮ ಆಸ್ತಿಯ ಒಂದಷ್ಟನ್ನು ಮಠಕ್ಕೆ ಬಿಟ್ಟು ಅದರಲ್ಲಿ ಕುಟುಂಬದವರಿಗೆ ಹಕ್ಕಿಲ್ಲ, ಮಠದ ಉಸ್ತುವಾರಿಯನ್ನು ಯಾರು ವಹಿಸಿಕೊಳ್ಳುತ್ತಾರೊ ಅವರೇ ಇದರೆಲ್ಲ ಉಸ್ತುವಾರಿ ನೋಡಿಕೊಳ್ಳಲಿ ಎಂಬ ಕರಾರು ಮಾಡಿಟ್ಟಿದ್ದರು. ಅದರಂತೆಯೆ ಮರಿ ಸ್ವಾಮಿಯಾಗಿ ಆಯ್ಕೆಯಾಗಿದ್ದ ನೂರೊಂದೇಶ್ವರ ಶಿವಾಚಾರ್ಯ ಸ್ವಾಮಿ 1998ರಲ್ಲಿ ಪೀಠಾಧಿಕಾರಿಯಾಗಿ ಗದ್ದುಗೆ ಏರಿದ್ದರು. ಆವಾಗಲೇ ಇವರು ಸೋದರ ಸಂಬಂಧಿಗಳಾದ ಮಹಾಂತಯ್ಯ, ಗುರುಲಿಂಗಯ್ಯ, ನೂರೊಂದಯ್ಯ, ಶಿವಲಿಂಗಯ್ಯ ತಕರಾರು ತೆಗೆದಿದ್ದರು. ಇಷ್ಟಕ್ಕೆಲ್ಲ ಕಾರಣವಾಗಿದ್ದು ಮಠದ ಹೆಸರಿನಲ್ಲಿದ್ದ ಆಸ್ತಿ. ಕಕ್ಕಳಮೇಲಿಯಲ್ಲಿಯೇ ಮಠಕ್ಕೆ 36 ಎಕರೆ ಜಮೀನಿದ್ದರೆ ಪಕ್ಕದ ಯಾತನೂರು ಹಳ್ಳೀಲಿ ಪ್ರತ್ಯೇಕವಾಗಿ 32 ಎಕರೆ ಜಮೀನಿತ್ತು.

ಇದು ಮಠಕ್ಕೆ ಸೇರಿತ್ತಾದರೂ ಅದರಲ್ಲಿ ತಮಗೂ ಪಾಲು ಬರಬೇಕೆಂಬುದು ಸಹೋದರರ ತಗಾದೆ. ಈ ವಿಷಯ ಕೋರ್ಟ್‌ನ ಮೆಟ್ಟಿಲನ್ನೂ ಏರಿತ್ತು. ಈಗ್ಗೆ ಆರು ತಿಂಗಳ ಹಿಂದೆ ತೀರ್ಪಿತ್ತ ಕೋರ್ಟ್ ಆಸ್ತಿ ಮಠಕ್ಕೆ ಸೇರಿದುದರಿಂದ ನೂರೊಂದಯ್ಯ ಸ್ವಾಮಿಯೇ ಅದಕ್ಕೆ ಒಡೆಯರು ಎಂದಿತ್ತು ಇದಾದನಂತರ ದಾಯಾದಿಗಳ ಹಗೆ ಮತ್ತಷ್ಟೂ ವಿಪರೀತ ಹೋಯಿತ್ತು ಒಂದೆರಡು ಬಾರಿ ಸ್ವಾಮಿಯ ಕಾರಿಗೆ ಬೆಂಕಿ ಹಚ್ಚಿ ಹಲ್ಲೆ ನಡೆಸುವ ಪ್ರಯತ್ನಕ್ಕೂ ಅವರು ಮುಂದಾಗಿದ್ದರು.

ಈ ನಡುವೆ ಕೋರ್ಟಿನ ತೀರ್ಪು ತಮಗೆ ತಿರುಮಂತ್ರವಾಗಲಿರುವ ಸೂಚನೆ ಸಿಗುತ್ತಿದ್ದಂತೆ ಸ್ವಾಮಿಯ ಸಹೋದರರು ಹೊಸದೊಂದು ಉಪಾಯ ಹೂಡಿದ್ದರು. ಊರಿನ ಹಿರಿಕರ ಪಂಚಾಯ್ತಿ ಕಟ್ಟೆಗೆ ವಿಷಯವನ್ನು ಒಯ್ದು ತಮಗೆ ಪಾಲು ಕೊಡಿಸಬೇಕೆಂದು ದುಂಬಾಲು ಬಿದ್ದಿದ್ದರು. ಪಂಚಾಯ್ತಿಗೆ ಕುಳಿತವರ ಎದುರಲ್ಲೂ ಮಠದ ಆಸ್ತಿಯಲ್ಲಿ ಪಾಲು ಕೊಡಲು ಸಾಧ್ಯವೇ ಇಲ್ಲವೆಂದು ಖಾರವಾಗಿ ಹೇಳಿ ಬಂದ ನಂತರ ಸ್ವಾಮಿಯನ್ನು ವಿರೋಧಿಸುವ ಒಂದು ವರ್ಗವೂ ಆ ಊರಲ್ಲಿ ಹುಟ್ಟಿಕೊಂಡಿತ್ತು, ದಾಯಾದಿಗಳ ಒತ್ತಡ, ಬೆದರಿಕೆ ಹೆಚ್ಚಾಗುತ್ತಿದ್ದನ್ನು ಕಂಡ ನೂರೊಂದಯ್ಯ ಸ್ವಾಮಿ ಈಗೊಂದೆರಡು ತಿಂಗಳ ಹಿಂದೆ ತನ್ನ ಜೀವಕ್ಕೆ ಬೆದರಿಕೆ ಇದ್ದು ಆತ್ಮ ರಕ್ಷಣೆಗೋಸ್ಕರ ರಿವಾಲ್ವರ್ ಬೇಕೆಂದು ಅರ್ಜಿ ಸಲ್ಲಿಸಿ ರಿವಾಲ್ವರ್ ಪಡೆದಿಟ್ಟುಕೊಂಡಿದ್ದರು.

ಆಗಿನಿಂದಲೂ ಸ್ವಾಮಿಯ ಮೇಲೆ ಹಲ್ಲೆ ನಡೆಯುವ ಸಂಚುಗಳು ಚಾಲ್ತಿಯಲ್ಲಿದ್ದವು. ಈ ಹಲ್ಲೆಗೂ ಸ್ವಲ್ಪ ದಿನದ ಮುಂಚೆ ಮಠದ ಆವರಣದ ಸುತ್ತ ಮಹಾಂತಯ್ಯ, ಗುರುಲಿಂಗಯ್ಯ ಮುಂತಾದವರು ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದದನ್ನು ಗಮನಿಸಿದ್ದ ಸ್ವಾಮಿ ಆತ್ಮೀಯರೊಟ್ಟಿಗೆ ಆತಂಕವನ್ನು ಹಂಚಿಕೊಂಡಿದ್ದರು. ಬೂದಿ ಮುಚ್ಚಿದ ಕೆಂಡದಂತೆ ಹಾಗೊಮ್ಮೆ, ಹೀಗೊಮ್ಮೆ ಹೊಗೆಯಾಡುತ್ತಿದ್ದ ಕಲಹ ಮೊನ್ನೆಯ ಅಮಾವಾಸ್ಯೆಯಲ್ಲಿ ಸ್ವಾಮಿಯ ಹತ್ಯೆಯೊಂದಿಗೆ ಅಂತ್ಯ ಕಂಡಿದೆ. ಸ್ವಾಮಿಯ ಪೂರ್ವಾಶ್ರಮದ ಸಹೋದರ ರುದ್ರಯ್ಯ ಎಂಬುವವರು ಸಿಂಧಗಿ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಮಹಾಂತಯ್ಯ, ನೂರಂದಯ್ಯ ಮೊದಲಾದ ದಾಯಾದಿಗಳನ್ನೇ ಆರೋಪಿಗಳನ್ನಾಗಿಸಲಾಗಿದೆ. ಅನುಮಾನ ಮೂಡುವಂತೆ ಅವರ್‍ಯಾರು ಸ್ವಾಮಿಯ ಅಂತ್ಯಸಂಸ್ಕಾರದತ್ತ ತಲೆಯನ್ನೇ ಹಾಕಲಿಲ್ಲ, ಪೊಲೀಸರು ವಿಚಾರಣೆಗೆಂದು ಸಂಪರ್ಕಿಸಲು ಹೋದರೆ ಅವರ ಅಡ್ರೆಸ್ ಖಾಲಿ, ಮೊಬೈಲ್‌ಗಳೆಲ್ಲ ಸ್ವಿಚ್ ಆಫ್! ಅಂತೂ ಇಂತೂ ದಾಯಾದಿಗಳ ಆಸ್ತಿಯ ಕಲಹ ಸ್ವಾಮಿಯ ಮರ್ಡರ್ ಮಾಡುವ ಹಂತಕ್ಕೆ ತಲುಪಿದ್ದು ಮಾತ್ರ ದುರದೃಷ್ಟ.

# ಪಶ್ಚಿಮ ಘಟ್ಟಕ್ಕೆ ಗಣಿಕಳ್ಳರು

"ಇದುವರೆಗಿನ ಎಲ್ಲಾ ಅನಾಹುತಗಳನ್ನು ಮೀರಿಸುವಂತೆ ...ತ್ತೊಂದು ವಿಪತ್ತು ಎರಗಿ ಬಂದಿದ್ದು ಮಲೆನಾಡಿಗರನ್ನು ...ತ್ತು ಎಲ್ಲ ಪರಿಸರಾಸಕ್ತರನ್ನು ಬೆಚ್ಚಿ ಬೀಳಿಸಿದೆ. ಬಿಜೆಪಿ ...ರ್ಕಾರದಲ್ಲಿ ಪ್ರಮುಖ ಸಚಿವರಾಗಿದ್ದ ಹಲವರು ಬಳ್ಳಾರಿ, ...ತ್ರದುರ್ಗ ಮತ್ತು ತುಮಕೂರುಗಳಲ್ಲಿ ಅಕ್ರಮ ...ಣಿಗಾರಿಕೆಯಲ್ಲಿ ತೊಡಗಿ ಸಾವಿರಾರು ಕೋಟಿಗಳನ್ನು ಲೂಟಿ ...ಡೆದು ಮೆರೆದಿದ್ದು ಮಾತ್ರವಲ್ಲದೆ ಪರಿಸರವನ್ನು ...ಪಡಿಸಲಾರದಂಥ ರೀತಿಯಲ್ಲಿ ಹಾಳುಮಾಡಿದ್ದು ...ಗೆಲ್ಲಾ ಗೊತ್ತಿದೆ. ಸುಪ್ರೀಂಕೋರ್ಟ್‌ನ ಆದೇಶದಿಂದಾಗಿ ... ಗಣಿಗಾರಿಕೆಗಳು ಸ್ಥಗಿತಗೊಂಡಿದ್ದು ನಂತರ ಗಣಿಧಣಿ ...ರ್ದನರೆಡ್ಡಿ ಜೈಲು ಸೇರಿದ್ದು ಎಲ್ಲವೂ ಈಗ ಇತಿಹಾಸ.

ಈ ಮೂರೂ ಜಿಲ್ಲೆಗಳಲ್ಲಿ ಜನಜೀವನದ, ಜಾನುವಾರು... ಮತ್ತು ಪರಿಸರದ ಮೇಲೆ ತೀವ್ರ ದುಷ್ಪರಿಣಾಮ ...ಂಟಾಗಿದ್ದು ಆ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವಂತೆ ...ಪ್ರೀಂಕೋರ್ಟ್ ಆದೇಶಿಸಿತ್ತು. ಅದರಂತೆ ಇಂಡಿಯನ್ ...ನ್ಸಿಲ್ ಫಾರ್ ಫಾರೆಸ್ಟ್ರಿ ರಿಸರ್ಚ್ ಅಂಡ್ ಎಜುಕೇಷನ್ ...ಸಿಎಫ್‌ಆರ್‌ಇ) ಸಂಸ್ಥೆಯ ಡೈರೆಕ್ಟರ್ ಜನರಲ್ ವಿ.ಕೆ. ...ಹುಗುಣ ಅವರ ನಾಯಕತ್ವದಲ್ಲಿ ಅಧ್ಯಯನ ಕೈಗೊಂಡ ...ಮಿತಿಯು ವರದಿಯೊಂದನ್ನು ತಯಾರಿಸಿ ಸುಪ್ರೀಂ ...ೋರ್ಟ್‌ಗೆ ಸಲ್ಲಿಸಿದೆ. ಪರಿಸರವನ್ನು ಸುಧಾರಿಸಲು ಅಗತ್ಯ...

...ಚಿವ ಸುರೇಶ್‌ಕುಮಾರ್‌ರೊಂದಿಗೆ ವಿ.ಕೆ.ಬಹುಗುಣ



...ರುವ ಕೆಲವು ಸುಧಾರಣೆಗಳನ್ನು ಶಿಫಾರಸ್ಸು ಮಾಡಲಾಗಿದೆ. ...ಷ್ಟೇ ಆಗಿದ್ದರೆ ಬಹುಶಃ ಯಾರೂ ಇದನ್ನು ಪ್ರಶ್ನಿಸುತ್ತಿರಲಿಲ್ಲ.

ಈ ಸಮಿತಿಯ ನಾಯಕ ವಿ.ಕೆ.ಬಹುಗುಣ ಅವರಿಗೆ ...ಳಿದುಕೊಳ್ಳಲು ಬೇರೆ ಎಲ್ಲೂ ಜಾಗ ಸಿಗಲಿಲ್ಲವಂತೆ. ...ದ್ದರಿಂದ ಜಿಂದಾಲ್ ಗೆಸ್ಟ್‌ಹೌಸ್‌ನಲ್ಲಿ ವಾಸ್ತವ್ಯ ಹೂಡಿ ...ಲ್ಲಿಂದಲೇ ತಮ್ಮ ಅಧ್ಯಯನ ಪ್ರವಾಸ ಕೈಗೊಂಡಿದ್ದರು. ಈ ...ಂದಾಲ್ ಕಂಪನಿ ಕೂಡ ಗಣಿಗಾರಿಕೆಯಿಂದ ಸಾವಿರಾರು ...ೋಟಿ ಲಾಭ ಮಾಡುತ್ತಿರುವ ಕಂಪನಿ. ಇವರು ಲೈಸೆನ್ಸ್ ...ಡೆದುಕೊಳ್ಳಲಿಕ್ಕಾಗಿ ಯಡಿಯೂರಪ್ಪನ ಕುಟುಂಬದವರಿಗೆ ...ೋಟಿಗಟ್ಟಲೆ ಲಂಚ ಕೊಟ್ಟಿದ್ದಾರೆಂದು ನ್ಯಾ. ಸಂತೋಷ್ ...ಗ್ಡೆಯವರ ವರದಿ ಹೇಳುತ್ತದೆ. ಅದು ಹಾಗಿರಲಿ. ಈ ...ಹುಗುಣ ಎಂಬ ಮಹಾಶಯ ಬಳ್ಳಾರಿ ಗಣಿಯ ...ನಾಹುತದ ಬಗ್ಗೆ ಮಾತಾಡುವುದನ್ನು ಬಿಟ್ಟು ಪಶ್ಚಿಮ ಘಟ್ಟ ...ಪ್ರದೇಶದಲ್ಲಿ ನೆಲದಾಳದ ಗಣಿಗಾರಿಕೆ ನಡೆಸಲು ಅಗತ್ಯವಿರುವ ...ಧ್ಯಯನ ಕೈಗೊಳ್ಳಬೇಕೆಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿ...ುವ ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾನೆ.

ಆತನ ಪ್ರಕಾರ "ಅರಣ್ಯ ಮತ್ತು ಗಣಿಪ್ರದೇಶದ ನಕ್ಷೆಗಳು ಒಂದಕ್ಕೊಂದು ಬೆರೆತುಹೋಗಿವೆ. ಆದ್ದರಿಂದ ಇಲ್ಲಿ ಗಣಿಗಾರಿಕೆ ಕೈಗೊಳ್ಳುವ ಕಂಪನಿಗಳು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗುತ್ತದೆ. ಸ್ವೀಡನ್‌ನ ರಾಜಧಾನಿ ಸ್ಟಾಕ್‌ಹೋಮ್‌ನ ನೆಲದಡಿಯೇ ಗಣಿಯಿದೆ. ಅದೇರೀತಿಯಲ್ಲಿಯೇ ನಾವು ಪಶ್ಚಿಮಘಟ್ಟದ ಗಣಿಗಾರಿಕೆಗೆ ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಾಧ್ಯ."!

ಕೊಲೆ-ಸುಲಿಗೆ ಮಾಡಿದ ಅಪರಾಧಿಯನ್ನು ಪತ್ತೆ ಹಚ್ಚಲು ಒಂದು ವೇಳೆ ಇಂಥಾ ಅಧಿಕಾರಿಯನ್ನು ನೇಮಿಸಿದರೆ ಆತ ಏನು ಮಾಡಬಹುದು? ಈತ ಅಪರಾಧಿಗಳನ್ನು ಪತ್ತೆಹಚ್ಚುವುದನ್ನು ಬಿಟ್ಟು ಕೊಲೆ ಸುಲಿಗೆ ಮಾಡಿಯೂ ಬುದ್ಧಿವಂತಿಕೆ ಮತ್ತು ಚಾಕಚಕ್ಯತೆ ಬಳಸಿ ಯಾರ ಕಣ್ಣಿಗೂ ಬೀಳದಂತೆ ಹೇಗೆ ತಪ್ಪಿಸಿಕೊಳ್ಳಬಹುದು ಎಂಬ ಬಗ್ಗೆ ಚಾಣಾಕ್ಷ ಐಡಿಯಾಗಳನ್ನು ಕೊಡುವುದು ಗ್ಯಾರಂಟಿ. ಈ ಬಹುಗುಣರ ಪ್ರತಿಭೆಯೇ ಅಂಥಾದ್ದು, ಅದನ್ನು ಯಾರೂ ಅನುಮಾನಿಸು ವಂತಿಲ್ಲ. ಆತ ಪತ್ರಕರ್ತರ ಪ್ರಶ್ನೆಯೊಂದಕ್ಕೆ ನೀಡಿದ ಉತ್ತರ ನೋಡಿ. "ದೇಶದ ಪ್ರಗತಿಗೆ ಗಣಿಗಾರಿಕೆ ಅನಿವಾರ್ಯ. ಹಾಗೆ ಸುಮಾರು 800 ಕೋಟಿ ಮೆಟ್ರಿಕ್ ಟನ್‌ಗಳಷ್ಟು ಬೃಹತ್ ಅದಿರು ಪಶ್ಚಿಮ ಘಟ್ಟದ ಗರ್ಭದಲ್ಲಿ ಅಡಗಿದೆ. ಆದ್ದರಿಂದ ಎಲ್ಲರೂ ಈ ಕಡೆಗೇ ತಮ್ಮ ದೃಷ್ಟಿ ನೆಟ್ಟಿದ್ದಾರೆ. ಕೆಲವು ಪ್ರಚಾರಪ್ರಿಯ ಸಂಪ್ರದಾಯವಾದಿಗಳ ಮಾತನ್ನು ಕೇಳುತ್ತಾ ಕೂತರೆ ಆಗೋದಿಲ್ಲ. ನಮಗೂ ಪರಿಸರದ ಬಗ್ಗೆ ಕಾಳಜಿ ಇದೆ.... ಭೂಗತ ಗಣಿಗಾರಿಕೆಯ ವೆಚ್ಚ ಸ್ವಲ್ಪ ಹೆಚ್ಚಾದರೂ ಪಶ್ಚಿಮ ಘಟ್ಟದ ಪರಿಸರದಲ್ಲಿ ನಾವು ಆ ವಿಧಾನವನ್ನು ಬಳಸಬಹುದು."

ಬಹುಗುಣ ಎಂಬ ಹೆಸರಿನ ಹೀನಗುಣದ ಈ ವ್ಯಕ್ತಿ ಯಾರ ಪರವಾಗಿ ಮಾತಾಡುತ್ತಿದ್ದಾನೆ? ಯಾವುದೋ ಒಂದೆರಡು ದಿನ ಜಿಂದಾಲ್ ಎಂಬ ಗಣಿ ಕಂಪನಿಯ ಗೆಸ್ಟ್ ಆಗಿದ್ದರು ಎಂಬುದಷ್ಟೇ ಅಲ್ಲ. ಈ ಜೀವ ವಿರೋಧಿ ಮನುಷ್ಯನ ಮೈಮನಸ್ಸುಗಳೆಲ್ಲಾ ಪರ್ಮನೆಂಟಾಗಿ ಜಿಂದಾಲ್‌ನಂಥ ಗಣಿಧಣಿಗಳ ಋಣ ತೀರಿಸಲು ತುಡಿಯುತ್ತಿರುವುದು ಮೇಲ್ನೋಟಕ್ಕೆ ನಿಚ್ಚಳ ವಾಗಿ ಕಾಣುತ್ತಿದೆ.

ಕೇಂದ್ರ ಉಕ್ಕು ಖಾತೆಯ ಕಾರ್ಯದರ್ಶಿ ಪಿ.ಕೆ. ಮಿಶ್ರಾ ಈ ಗಣಿಗಳ್ಳರ ದೈತ್ಯರಾಗವನ್ನು ಮುಂದುವರೆಸಿ ದ್ದಾರೆ. 12 ನೇ ಪಂಚವಾರ್ಷಿಕ ಯೋಜನೆಯ ಭಾಗವಾಗಿ ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ಪ್ರಾರಂಭಿಸ ಬೇಕೆಂದು ಮಿಶ್ರಾ ನೇತೃತ್ವದ ಸಮಿತಿ ಶಿಫಾರಸು ಮಾಡಿದೆ. ಆದರೆ ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಇದೇ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿ ನಾನಾ ಅನಾಹುತಗಳಿಗೆ ಕಾರಣವಾಗಿದ್ದ ಸರ್ಕಾರಿ ಸ್ವಾಮ್ಯದ ಕುದುರೆಮುಖ ಕಂಪನಿಯನ್ನು 2006 ರಲ್ಲಿ ಸ್ಥಗಿತಗೊಳಿಸ ಲಾಗಿತ್ತು ಎಂಬ ಸತ್ಯವು ಈ ಬಹುಗುಣ, ಮಿಶ್ರಾಗಳೆಂಬ ಗಣಿ ಏಜೆಂಟರಿಗೆ ತಿಳಿಯದ ಸಂಗತಿಯೇನಲ್ಲ. ಆದರೆ ಅವರು ಎಲ್ಲದಕ್ಕಿಂತಲೂ ಹೆಚ್ಚು ಬದ್ಧರಾಗಿರುವುದು ಅಭಿವೃದ್ಧಿಗೆ. ಅಭಿವೃದ್ಧಿ ಎಂದರೆ ದೈತ್ಯ ಕಂಪನಿಗಳ ಅಭಿವೃದ್ಧಿ ಮಾತ್ರ ಎಂಬು ದರಲ್ಲಿ ಯಾರೂ ಅನುಮಾನ ಪಡುವಂತಿಲ್ಲ. ಅವರ ಅಭಿ ವೃದ್ಧಿಯ ಫಲವಾಗಿ ಈ ದೇಶದ ಕೋಟ್ಯಾನುಕೋಟಿ ಜನರ ಬದುಕು ಮತ್ತು ಪರಿಸರ ನರಕಸದೃಶವಾಗಿ ಪರಿಣಮಿಸುತ್ತದೆ ಎಂಬುದು ಈಗ ಕರ್ನಾಟಕದ ಮಂದಿಗೆ ಕಣ್ಣೆದುರಿನಲ್ಲೆ ಇರುವ ಸತ್ಯ.

ನಮ್ಮ ನಾಡಿನ ಹಲವು ಪ್ರಜ್ಞಾವಂತರು ಇಂಥಾ ಸಂಚುಗಳನ್ನು ಅರ್ಥ ಮಾಡಿಕೊಂಡು ಮುಂಬರುವ ಘೋರ ವಿಪತ್ತುಗಳನ್ನು ತಡೆಯಲಿಕ್ಕಾಗಿ ಕ್ರಿಯಾಶೀಲರಾಗಿರುವುದು ನಮ್ಮೆಲ್ಲರ ಸುದೈವ. ಈ ಹೀನಗುಣದ ವರದಿಯನ್ನು ವಾಪಸ್ ಪಡೆದು ಹೊಸದೊಂದು ವರದಿಯನ್ನು ಮಂಡಿಸಲು ಆದೇಶಿಸುವಂತೆ ಕೋರಿ, ಅಕ್ರಮ ಗಣಿಗಾರಿಕೆಯ ವಿರುದ್ಧ ಕಾನೂನು ಸಮರ ನಡೆಸುತ್ತಿರುವ ಸಮಾಜ ಪರಿವರ್ತನಾ ಸಮುದಾಯ ಎಂಬ ಸಂಘಟನೆ ಸುಪ್ರೀಂಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದ್ದಾರೆ.

"ಸುಪ್ರೀಂಕೋರ್ಟ್ ಆಗಲಿ ಅಥವಾ ಸರ್ಕಾರವಾಗಲಿ ಪಶ್ಚಿಮಘಟ್ಟದ ಗಣಿಗಾರಿಕೆಗೆ ಸಂಬಂಧಿಸಿದ ವಿಷಯವನ್ನು ಈ ಸಂಸ್ಥೆಗೆ ವಹಿಸಿ ಕೊಟ್ಟಿಲ್ಲ. ಗಣಿಗಾರಿಕೆಯಿಂದಾಗಿರುವ ಅನಾಹುತದ ಬಗ್ಗೆ ತನಿಖೆ ಮಾಡುವುದಷ್ಟೆ ಅವರಿಗೆ ಕೋರ್ಟ್ ವಹಿಸಿರುವ ಜವಾಬ್ದಾರಿ. ಹೀಗಿರುವಾಗ ಈಗಾಗಲೇ ಸುಪ್ರೀಂಕೋರ್ಟ್‌ನಿಂದ ನಿಷೇಧಗೊಂಡಿರುವ ಪ್ರದೇಶದಲ್ಲೆ ಮತ್ತೆ ಗಣಿಗಾರಿಕೆ ಪ್ರಾರಂಭಿಸಬೇಕೆಂದು ಕೇಳುತ್ತಾರೆಂದರೆ ಅದರ ಹಿಂದಿನ ಉದ್ದೇಶವೇನು?" ಎಂದು

ಈ ಸಂಘಟನೆಯ ಸ್ಥಾಪಕರಾದ ಎಸ್.ಆರ್.ಹಿರೇಮಠ್



ಕಂಪೆನಿ ಮುಖ್ಯಸ್ಥರೊಂದಿಗೆ ಸಿ.ಕೆ.ಮಿಶ್ರಾ

ಖಾರವಾಗಿ ಪ್ರಶ್ನಿಸಿದ್ದಾರೆ. ಸದ್ಯ ಈ ಪ್ರಶ್ನೆಗೆ ಉತ್ತರಿಸುವ ಧೈರ್ಯ ಆ ಹೀನಗುಣದವರಿಗಿಲ್ಲ.

ನಿನ್ನೆಯವರೆಗೆ "ಬಳ್ಳಾರಿಯಲ್ಲಿ ಯಾವ ಅಕ್ರಮವೂ ನಡೆದಿಲ್ಲ, ಗಣಿ ರೆಡ್ಡಿಗಳು ಮಾಡುತ್ತಿರುವುದೆಲ್ಲಾ ಸಕ್ರಮ ಮತ್ತು ನಾಡಿನ ಅಭಿವೃದ್ಧಿಗಾಗಿ ಮಾತ್ರ" ಎಂದು ವಾದಿಸುತ್ತಿದ್ದ ಕರ್ನಾಟಕದ ಬಿಜೆಪಿ ಸರ್ಕಾರ ಈಗ ಮಾನ ಉಳಿಸಿಕೊಳ್ಳಲು ತನ್ನ ರಾಗ ಬದಲಿಸಿದೆ. ಜನರ ತೀವ್ರಗೊಳ್ಳುತ್ತಿರುವ ವಿರೋಧವನ್ನು ಮನಗಂಡು ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆಗೆ ನಮ್ಮ ವಿರೋಧವಿದೆಯೆಂದು ತೀರಾ ಕ್ಷೀಣ ದನಿಯಲ್ಲಿ ಹೇಳಿಕೆಯೊಂದನ್ನು ನೀಡಿದೆ.

ನಮ್ಮ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಗೋಸುಂಬೆ ಬಣ್ಣವನ್ನು ಅರಿತು ನಾವು ಕಾರ್ಯಪ್ರವೃತ್ತರಾಗದಿದ್ದಲ್ಲಿ ನಮಗೆ ಉಳಿಗಾಲವಿಲ್ಲ. ಪಶ್ಚಿಮಘಟ್ಟ ಭಾಗದ ಜನತೆ ಈಗಾಗಲೇ ಬೀದಿಗಿಳಿದಿದ್ದಾರೆ. ಪರಿಸರ ಹೋರಾಟಗಾರರಾದ ಕಲ್ಕುಳಿ ವಿಠಲ ಹೆಗಡೆಯವರು "ಮಲೆನಾಡಿನ ಜನತೆ ಪಶ್ಚಿಮ ಘಟ್ಟದಲ್ಲಿ ಮತ್ತೆ ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲ, ಈ ಉದ್ದೇಶಕ್ಕಾಗಿ ಎಂಥದೇ ತ್ಯಾಗಕ್ಕಾದರೂ ನಾವು ಸಿದ್ಧ" ಎಂದು ಘೋಷಿಸಿದ್ದಾರೆ. ಶರಾವತಿ ಟೇಲ್‌ರೇಸ್, ಗಂಗಡಿಕಲ್ಲು ಮುಂತಾದ ಕಡೆ ಗಣಿಗಾರಿಕೆಯ ಹುನ್ನಾರಗಳನ್ನು ಹಿಮ್ಮೆಟ್ಟಿಸಿದಂತೆ ಈಗಿನ ದುಷ್ಟಶಕ್ತಿಗಳನ್ನು ಓಡಿಸುವ ಛಲ ಅವರ ಮಾತಿನಲ್ಲಿ ವ್ಯಕ್ತವಾಗುತ್ತಿದೆ. ಹಾಗೆಯೇ "ನಾಡಿನ ಜನಪರ ಸಾತ್ವಿಕ ಶಕ್ತಿಗಳೆಲ್ಲಾ ಮುಂದೆ ಬಂದು ಒಗ್ಗೂಡಿ ಈ ಹೋರಾಟದಲ್ಲಿ ಪಾಲ್ಗೊಳ್ಳದೇ ಹೋದರೆ ಈ ನಾಡಿಗೆ ಉಳಿಗಾಲವಿಲ್ಲ" ಎಂದು ಹಿರಿಯ ಹೋರಾಟಗಾರರಾದ ಹಿರೇಮಠ್ ಎಚ್ಚರಿಸಿದ್ದಾರೆ. ನಮ್ಮ ನಾಡನ್ನು, ನಾಡಿನ ಪರಿಸರವನ್ನೂ ಗಣಿಗಳ್ಳರಿಂದ, ಗಂಟುಗಳ್ಳರಿಂದ ರಕ್ಷಿಸುವ ಈ ಹೋರಾಟದಲ್ಲಿ ಕೈಜೋಡಿಸಲು ನಾವು ರೆಡಿಯಾಗಿದ್ದೇವೆ. ನೀವೂ.....?

**• ದೊಡ್ಡಿಪಾಳ್ಯ ನರಸಿಂಹಮೂರ್ತಿ**

ಗೋವಾದ ಗಣಿಯ ದಾರುಣ ನೋಟ



## ಆಪತ್ತಿನಲ್ಲಿ ಪಶ್ಚಿಮ ಘಟ್ಟ...

ಭಾರತದ ಅರಣ್ಯ ಪ್ರದೇಶಗಳಲ್ಲಿ ಪೂರ್ವ ಹಿಮಾಲ ಯದ ಕಾಡುಗಳು ಹಾಗೂ ಪಶ್ಚಿಮ ಘಟ್ಟ ಕಾಡುಗಳು ಅತ್ಯಂತ ಮಹತ್ವಪೂರ್ಣವಾದುದು. ಅದರಲ್ಲೂ ಪಶ್ಚಿಮ ಘಟ್ಟ ಪ್ರದೇಶಕ್ಕೆ ಬಹಳ ವಿಶಿಷ್ಟವಾದ ಸ್ಥಾನವಿದೆ. ಈ ಪಶ್ಚಿಮಘಟ್ಟದ ಘಟ್ಟ ಕಾಡುಗಳು ಗುಜರಾತ್‌ನಿಂದ ಆರಂಭಗೊಂಡು ಮಹಾ ರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಹಾಗೂ ತಮಿಳುನಾಡಿನ ವರೆಗೆ ಒಟ್ಟು ಆರು ರಾಜ್ಯಗಳಲ್ಲಿ ಹರಡಿಕೊಂಡಿವೆ. ಪಶ್ಚಿಮ ಕರಾವಳಿಗೆ ಅಂಟಿಕೊಂಡಂತೆ ಕಾಣುವ ಇದರ ಉದ್ದ ಸುಮಾರು 1600 ಕಿಲೋಮೀಟರ್‌ಗಳು, ವಿಸ್ತೀರ್ಣ ಸುಮಾರು 1,59,000 ಕಿಲೋಮೀಟರ್‌ಗಳು.

ವಾತಾವರಣದ ಬಿಸಿಯನ್ನು ತಡೆಗಟ್ಟುವಲ್ಲಿ, ಪಶ್ಚಿಮ ದಿಕ್ಕಿನಿಂದ ಬರುವ ಮಾರುತಗಳನ್ನು ತಡೆದು ಮಳೆ ಸುರಿಸುವಲ್ಲಿ, ವಾತಾವರಣದಲ್ಲಿನ ಇಂಗಾಲದ ಡೈ ಆಕ್ಸೈಡ್‌ಅನ್ನು ಹೀರಿಕೊಂಡು ಜೀವ ಜಗತ್ತಿಗೆ ಅತ್ಯವಶ್ಯಕವಾದ ಆಮ್ಲಜನಕವನ್ನು ಒದಗಿಸುವಲ್ಲಿ ಈ ಅರಣ್ಯ ಪ್ರದೇಶ ಪರಿಸರ ಸರಪಳಿಯಲ್ಲಿ ಬಹಳ ಅಮೂಲ್ಯವಾದ ಒಂದು ಕೊಂಡಿ.

ಸುಮಾರು 22 ಸಣ್ಣ ಹಾಗೂ ದೊಡ್ಡ ನದಿಗಳಿಗೆ ಇದು ಉಗಮಸ್ಥಾನ. ಪಶ್ಚಿಮಘಟ್ಟ ಪ್ರದೇಶದ ಶೇಕಡ 35 ಭಾಗ ನಮ್ಮ ರಾಜ್ಯದ ಒಂಬತ್ತು ಜಿಲ್ಲೆಗಳ 35 ತಾಲ್ಲೂಕುಗಳಲ್ಲಿ ಹರಡಿಕೊಂಡಿದೆ. ಕಾವೇರಿ, ಕೃಷ್ಣಾ, ತುಂಗಾ, ಭದ್ರಾ, ನೇತ್ರಾವತಿ, ಶರಾವತಿ, ಹೇಮಾವತಿ ಮುಂತಾದ ಜೀವನದಿಗಳಿಗೆ ಮೂಲಸ್ಥಾನವಾಗಿರುವ ಈ ಪ್ರದೇಶದ ಮಹತ್ವ ಅರ್ಥಮಾಡಿಕೊಳ್ಳಲು ವಿಜ್ಞಾನದಲ್ಲಿ ಮಹಾ ಪಾಂಡಿತ್ಯವೇನೂ ಬೇಕಾಗಿಲ್ಲ. ಕೋಟ್ಯಾಂತರ ಮೌಲ್ಯದ ಅರಣ್ಯ ಉತ್ಪನ್ನಗಳನ್ನೂ ಕಟ್ಟಡ ನಿರ್ಮಾಣ ಮತ್ತಿತರ ಕಾರ್ಯಗಳಿಗೆ ಬೇಕಾದ ಮರಮುಟ್ಟುಗಳನ್ನೂ ಈ ಅರಣ್ಯ ನಮಗೆ ಒದಗಿಸುತ್ತಿದೆ. ನಮ್ಮ ರಾಜ್ಯದ ಅರ್ಧ ಭಾಗದಷ್ಟು ಆರ್ಥಿಕ ಚಟುವಟಿಕೆಗಳು ಒಂದಲ್ಲ ಒಂದು ರೀತಿಯಲ್ಲಿ ಈ ಘಟ್ಟ ಪ್ರದೇಶದೊಂದಿಗೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿದೆ.

ಸಹ್ಯಾದ್ರಿ ಪರ್ವತ ಶ್ರೇಣಿಗಳು ಎಂದು ಕರೆಯಲಾಗುವ ಈ ಪ್ರದೇಶದಲ್ಲಿ ಸುಮಾರು 5000 ಜಾತಿಯ ಹೂಬಿಡುವ ಸಸ್ಯ ಪ್ರಭೇದಗಳು, 139 ಸಸ್ತನಿ ಜೀವಿಗಳು, 508 ಪಕ್ಷಿ ಪ್ರಭೇದಗಳು ಮತ್ತು ಸುಮಾರು 179 ಉಭಯವಾಸಿ ಜೀವಿಗಳಿವೆ. ಇವುಗಳ ಪೈಕಿ ಕನಿಷ್ಠ ಪಕ್ಷ 325 ಪ್ರಭೇದಗಳು ಈ ಜಗತ್ತಿನಿಂದಲೇ ಅಳಿದುಹೋಗುವ ಅಪಾಯದಸ್ಥಿತಿಯನ್ನೆದುರಿಸುತ್ತಿವೆ. ಜಗತ್ತಿನಲ್ಲೇ ಅಪೂರ್ವವಾದ ಅತ್ಯಂತ ಸೂಕ್ಷ್ಮ ಹಾಗೂ ವೈವಿಧ್ಯಮಯ ಪರಿಸರವನ್ನು ಹೊಂದಿರುವ ಪಶ್ಚಿಮ ಘಟ್ಟ ಪ್ರದೇಶದ ಕೆಲವು ಪರ್ವತ ಶ್ರೇಣಿಗಳು ಇತ್ತೀಚೆಗೆ ಯುನೆಸ್ಕೊ, ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಿದ್ದು ನಮಗೆಲ್ಲ ತಿಳಿದ ವಿಚಾರ.

ಹೀಗೆ ಮನುಷ್ಯರಿಗೆ ಮಾತ್ರವಲ್ಲದೆ ನಾನಾ ಜೀವಸಂಕುಲಗಳನ್ನು ಪೊರೆದು ಪೋಷಿಸುತ್ತಿರುವ ಪಶ್ಚಿಮ ಘಟ್ಟ ಪ್ರದೇಶ ಈಗ ಸಾಲುಸಾಲು ಗಂಡಾಂತರಗಳಿಗೆ ಸಿಲುಕಿದೆ. ಇಡೀ ಜಗತ್ತನ್ನೇ ತಮ್ಮ ತಿಜೋರಿಯಲ್ಲಿ ಬಂಧಿಸಲು ಹವಣಿಸುತ್ತಿರುವ ಜಾಗತಿಕ ಬಂಡವಾಳಶಾಹಿ ಶಕ್ತಿಗಳ ಜೊತೆಗೆ ಹಲವು ದೇಶೋದ್ಧಾರಕ ಬಂಡವಾಳಿಗರು ಕೂಡಿಕೊಂಡು ಪಶ್ಚಿಮಘಟ್ಟವನ್ನು ಆಪೋಶನ ತೆಗೆದುಕೊಳ್ಳಲು ಸಜ್ಜಾಗಿದ್ದಾರೆ. ನಮ್ಮನ್ನಾಳುತ್ತಿರುವ ಸರ್ಕಾರಗಳು ಇಂಥಾ ಪಾಪಕೃತ್ಯದಲ್ಲಿ ಶಾಮೀಲಾಗಿರುವ ಏಜೆಂಟ್‌ಗಳಾಗಿದ್ದಾರೆ. ಅದರ ಕೆಲವು ಸ್ಯಾಂಪಲ್‌ಗಳನ್ನು ನೋಡೋಣ.

ತಂತ್ರಜ್ಞಾನದ ವಿಷಯದಲ್ಲಿ ವಿಶೇಷ ಹೆಗ್ಗಳಿಕೆ ಗಳಿಸಿರುವ ಜಪಾನ್‌ನಲ್ಲಿ ಇತ್ತೀಚೆಗೆ ಸಂಭವಿಸಿದ ಅಣು ಸ್ಥಾವರ ದುರಂತ ದಿಂದ ಉಂಟಾದ ಭೀಭತ್ಸ ಒಂದು ರೀತಿಯಲ್ಲಿ ಹಿರೋ ಶಿಮಾ, ನಾಗಾಸಾಕಿಯ ದುರಂತವನ್ನು ಹೋಲುವಂಥದ್ದು. ನಮ್ಮ ಪಶ್ಚಿಮ ಘಟ್ಟದ ಕೈಗಾ ಬಳಿಯಲ್ಲೂ ಅಂಥದ್ದೊಂದು ಅಣು ಸ್ಥಾವರ ಇಲ್ಲಿಗೆ ಸುಮಾರು ಒಂದು ದಶಕದಿಂದ ಕಾರ್ಯನಿರ್ವಹಿಸುತ್ತಿದೆ. ಈ ಅಣು ಸ್ಥಾವರದ ಸ್ಥಾಪನೆಯನ್ನು ಸಮರ್ಥಿಸಿದ್ದ ಅಂದಿನ ಸರ್ಕಾರಗಳು ಕೈಗಾ ಯೋಜನೆಯಿಂದ ಇಡೀ ರಾಜ್ಯದ ವಿದ್ಯುತ್ ಸಮಸ್ಯೆ ನಿವಾರಣೆಯಾಗಿ ರಾಜ್ಯ ಸುಭಿಕ್ಷವಾಗಿ ಬಿಡುತ್ತದೆ ಎಂದೆಲ್ಲಾ ಬೊಗಳೆ ಬಿಟ್ಟಿದ್ದರು. ಆದರೆ ಕೈಗಾದಿಂದ ವಿದ್ಯುತ್ ಯಾವ ಪ್ರಮಾಣದಲ್ಲಿ ಬಂದು ನಾಡನ್ನು ಉದ್ಧಾರ ಮಾಡಿದೆಯೋ ದೇವರೇ ಬಲ್ಲ. ಆದರೆ ಅಣು ವಿಕಿರಣದಿಂದ ಸುತ್ತಮುತ್ತಲ ಹತ್ತಾರು ಕಿಲೋಮೀಟರ್ ಫಾಸಲೆಯಲ್ಲಿ ವಾಸಿಸುತ್ತಿರುವ ಸಾವಿರಾರು ಜನರು ಕ್ಯಾನ್ಸರ್‌ನಂಥ ಹಲವು ರೋಗಗಳಿಂದ ನರಳುತ್ತಿರುವ ಭೀಕರ ಪರಿಣಾಮ ನಮ್ಮ ಮುಂದಿದೆ. ಈ ಬಗ್ಗೆ ಸಚಿತ್ರ ವಿವರ ವರದಿಯೊಂದು ಇತ್ತೀಚೆಗೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿ ದ್ದನ್ನು ನೀವು ನೋಡಿರಬಹುದು.

ಸ್ಥಳೀಯ ನಿವಾಸಿಗಳ ಹಾಗೂ ಜನಪರ ಹೋರಾಟ ಗಾರರ ತೀವ್ರ ವಿರೋಧವಿದ್ದಾಗ್ಯೂ ನಾನಾ ವಿದ್ಯುತ್ ಯೋಜನೆಗಳಿಗೆ ಸರ್ಕಾರ ಅಸ್ತು ಎಂದಿದೆ. ಅದು ಒಂದಲ್ಲ ಎರಡಲ್ಲ, ಬರೋಬ್ಬರಿ 136 ಯೋಜನೆಗಳು! ವಿದ್ಯುತ್ ಯೋಜನೆಗಳು ಮಾತ್ರವಲ್ಲದೆ ಹಲವಾರು ಅಣೆಕಟ್ಟು ಯೋಜನೆಗಳು, ನಾನಾ ಕೈಗಾರಿಕಾ ಯೋಜನೆಗಳು ಪಶ್ಚಿಮಘಟ್ಟದ ಮೇಲೆ ಎರಗಿ ಬಂದಿವೆ. ಇವಲ್ಲ ಸಾಲದೆಂಬಂತೆ ಪ್ರವಾಸೋದ್ಯಮ ಅಭಿವೃದ್ಧಿಯ ಹೆಸರಿನಲ್ಲಿ ದಟ್ಟ ಅರಣ್ಯದ ನಡುವೆ ತಲೆಯೆತ್ತಿರುವ ನೂರಾರು ರೆಸಾರ್ಟ್‌ಗಳು ಕಾಡನ್ನು ಹಾಳು ಮಾಡಿದ್ದು ಮಾತ್ರವಲ್ಲದೆ ನಾಡಿನ ಸಂಸ್ಕೃತಿಗೂ ಮಾರಕ. ಈಗಾಗಲೇ ಹೆದ್ದಾರಿಗಳ ನಿರ್ಮಾಣ, ರೈಲ್ವೆ ಮಾರ್ಗ ನಿರ್ಮಾಣ, ವಿದ್ಯುತ್ ಸಂಪರ್ಕ ಮಾರ್ಗ ಹಾಗೂ ಪೆಟ್ರೋಲಿಯಮ್ ಕೊಳವೆ ಮಾರ್ಗ ಯೋಜನೆಗಳು ಚಾಲ್ತಿಯಲ್ಲಿವೆ. ಇಂಥಾ ಯೋಜನೆಗಳಿಗಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ, ಕೊಡಗು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅರಣ್ಯ ನಾಶ ಪ್ರಕ್ರಿಯೆ ಅವ್ಯಾಹತವಾಗಿ ಸಾಗಿದೆ.

ಇತ್ತೀಚಿನ ದಿನಗಳಲ್ಲಿ ಬಹುವಾಗಿ ಚರ್ಚಿತವಾಗು ತ್ತಿರುವ ನೇತ್ರಾವತಿ ತಿರುವು ಯೋಜನೆ(ಸೌಭಾಗ್ಯ ಸಂಜೀವಿನಿ) ಪಶ್ಚಿಮ ಘಟ್ಟದ ಪರಿಸರದ ಮೇಲೆ ಸರಿಪಡಿಸಲಾಗದಂಥ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎಂಬುದು ಪರಿಸರವಾದಿಗಳ ಕೂಗು. ಅದರ ಜೊತೆಗೆ ಎಸ್‌ಇಜೆಡ್ ಒಂದಕ್ಕೆ 5000 ಎಕರೆ ಜಾಗವನ್ನು ಮಂಜೂರು ಮಾಡಲಾಗಿದೆ. ಅದಕ್ಕಿಂತಲೂ ಅನಾಹುತಕಾರಿಯಾದದ್ದೆಂದರೆ ಪೆಟ್ರೋಲಿಯಂ, ಕೆಮಿಕಲ್ಸ್ ಅಂಡ್ ಪೆಟ್ರೋಕೆಮಿಕಲ್ಸ್ ಇನ್ವೆಸ್ಟ್‌ಮೆಂಟ್ ರೀಜನ್ (PCPIR) ಎಂಬ ವಿನಾಶಕಾರಿ ಯೋಜನೆಗೆ ಸುಮಾರು 74000 ಎಕರೆ ಪ್ರದೇಶವನ್ನು ನಮ್ಮ ಸರ್ಕಾರ ಬಿಟ್ಟುಕೊಡಲು ತಯಾರಾಗಿರುವುದು.

"ಈ ವಿದ್ಯುತ್ ಸ್ಥಾವರಗಳು ವಿದ್ಯುತ್ ಕೊರತೆಯನ್ನು ನೀಗಿಸುತ್ತವೆ ಎಂದು ಭಾವಿಸಿದ್ದೆ. ಆದರೆ ಈ ಸ್ಥಳಕ್ಕೆ ಭೇಟಿ ಕೊಟ್ಟು ಪ್ರತ್ಯಕ್ಷ ಕಂಡ ಮೇಲೆ ಭಾರೀ ಪ್ರಮಾಣದ ಅರಣ್ಯ ನಾಶವನ್ನು ಕಣ್ಣಾರೆ ಕಂಡಿದ್ದೇನೆ. ಹಲವು ಬೆಟ್ಟಗಳನ್ನು ಧ್ವಂಸಗೊಳಿಸಲಾಗಿದೆ, ಹಲವಾರು ಕಡೆ ಸುರಂಗಗಳನ್ನು ಕೊರೆಯಲಾಗಿದೆ, ಸಾವಿರಾರು ಮರಗಳನ್ನು ಬೇರುಸಮೇತ ಉರುಳಿಸಿ ಕಣಿವೆಗಳಿಗೆ ತುಂಬಲಾಗಿದೆ. ಪರಿಸರವಾದಿಗಳ ಆಕ್ರೋಶಕ್ಕೆ ಕಾರಣವೇನು ಎಂಬುದು ಈಗ ನನಗೆ ಮನವರಿಕೆಯಾಗಿದೆ. ಇಷ್ಟೊಂದು ಅರಣ್ಯನಾಶವನ್ನು ಕಣ್ಣಾರೆ ಕಂಡ ಮೇಲೆ ನನಗೊಂದು ಅನುಮಾನ ಶುರುವಾಗಿದೆ. ಸರ್ಕಾರಗಳು ಅನುಮತಿ ಕೊಟ್ಟಿದ್ದು ಇದೇ ಯೋಜನೆಗಳಿಗೋ ಅಥವಾ ಅನುಮತಿ ಪಡೆದುಕೊಂಡ ಕಂಪನಿಗಳು ನಿಯಮಗಳನ್ನು ಮೀರಿ ಕಾನೂನುಬಾಹಿರವಾಗಿ ಈ ಯೋಜನೆ ಗಳನ್ನು ಜಾರಿಮಾಡುತ್ತಿವೆಯೋ ಎಂದು." ಈ ಮಾತನ್ನು ಹೇಳಿದವರು ಬೇರೆ ಯಾರೂ ಅಲ್ಲ, ನಮ್ಮ ಈಗಿನ ಸರ್ಕಾರದ ಅರಣ್ಯ ಸಚಿವರಾಗಿರುವ ಮಾನ್ಯ ಸಿ.ಪಿ.ಯೋಗೀಶ್ವರ್ ಅವರ ಬಾಯಿಂದ ಉದುರಿದ ಅಣಿಮುತ್ತುಗಳಿವು. ಅವರು ಇನ್ನೂ ಮುಂದುವರೆದು ಪತ್ರಕರ್ತರ ಪ್ರಶ್ನೆಗಳಿಗೆ ಈ ರೀತಿ ಉತ್ತರಿಸಿದರು. "ನಾನು ಸರ್ಕಾರದ" ಭಾಗವೇ ಆಗಿದ್ದರೂ ಕೂಡ ಪಶ್ಚಿಮ ಘಟ್ಟದಲ್ಲಿ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವುದನ್ನು ತೀವ್ರವಾಗಿ ವಿರೋಧಿಸುತ್ತೇನೆ." ಈ ಮಾತುಗಳಿಂದ ಪರಿಸ್ಥಿತಿಯ ದಾರುಣತೆಯನ್ನು ಅರ್ಥಮಾಡಿಕೊಳ್ಳಲಿಕ್ಕೆ ಉಪಯೋಗವಾಗುತ್ತದೆ ಎಂಬು ದನ್ನು ಹೊರತುಪಡಿಸಿದರೆ ಬೇರೆ ಎಳ್ಳಷ್ಟು ಉಪಯೋಗ ವಿಲ್ಲವೆಂಬುದು ಶಾಲಾಮಕ್ಕಳಿಗೂ ಗೊತ್ತಿರುವ ವಿಷಯ. ಆ ಮಾತು ಬೇರೆ.

# ತನ್ನ ವಯಲಿನ್‌ಗಾಗಿ ಪ್ರಾಣತೆತ್ತ ಸಂಗೀತಗಾರ

ಅದೆಷ್ಟೋ ಬಾರಿ ಕಾಲೇಜಿನಲ್ಲಿ ಹರಟೆ ಕೊಚ್ಚುವಾಗ "ನೀನು ಪ್ರಾಣಾಪಾಯವನ್ನು ಎದುರಿಸುತ್ತಿರುವೆ ಎಂದಿಟ್ಟುಕೊಳ್ಳೋಣ. ಆ ಕ್ಷಣ ನೀನು ಯಾವ ವಸ್ತುವಾಗಿ ಮೊದಲು ಹಾತೊರೆಯುವೆ?" ಎಂದು ಚರ್ಚಿಸಿರುತ್ತೇವೆ. ಅಥವಾ "ನೀನಿರುವ ಕಟ್ಟಡದಲ್ಲಿ ಅಗ್ನಿ ದುರಂತ ಕಂಡುಬಂದರೆ ನಿನ್ನ ಪ್ರಾಣಕ್ಕೆ ಇರುವ ಅಪಾಯವನ್ನೂ ನಿರ್ಲಕ್ಷಿಸಿ ನಿನಗೆ ಆಪ್ತವಾದ ಯಾರನ್ನು ರಕ್ಷಿಸಲು ಹವಣಿಸುತ್ತೀಯಾ?" ಎಂದು ಮಾತನಾಡಿರುತ್ತೇವೆ ಅಥವಾ ನಮಗೆ ನಾವೇ ಇಂತಹ ಪ್ರಶ್ನೆಗಳನ್ನು ಕೇಳಿಕೊಂಡಿರುತ್ತೇವೆ.

ಕೋಸ್ಟ ಕಾನ್‌ಕೋರ್ಡಿಯಾ ಹಡಗು ಮುಳುಗಿದ ನಂತರ ಆ ದುರಂತದಲ್ಲಿ ಅಸುನೀಗಿದ್ದವರಲ್ಲಿ ಮೊದಲು ಸಿಕ್ಕಿದ್ದು ಸಾನ್ಡೋರ್ ಫೆರೆರ್ ಎಂಬಾತನ ಶವ.


ಸಾನ್ಡೋರ್

38 ವರ್ಷ ವಯಸ್ಸಿನ ಸಾನ್ಡೋರ್ ಮೂಲತಃ ಹಂಗೇರಿ ದೇಶದ ರಾಜಧಾನಿ ಬುಡಪೆಸ್ಟ್‌ನವನು. ವಯಲಿನ್ ವಾದಕನಾಗಿದ್ದ ಸಾನ್ಡೋರ್ ಈ ಹಡಗಿನಲ್ಲಿದ್ದ ಯಾತ್ರಿಕರನ್ನು ರಂಜಿಸಲು ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿದ್ದ ತಂಡದ ಸದಸ್ಯನಾಗಿದ್ದ.


ತಾವಿರುವ ಹಡಗು ಮುಳುಗುತ್ತಿದೆ ಎಂದು ಗೊತ್ತಾದ ಕೂಡಲೇ ಸಾನ್ಡೋರ್ ಮೊದಲು ಮಾಡಿದ್ದು ತನ್ನ ಸುತ್ತಲೂ ಇದ್ದ ಪುಟ್ಟ ಮಕ್ಕಳಿಗೆಲ್ಲ ಲೈಫ್ ಜಾಕೆಟ್‌ಗಳನ್ನು ತೊಡಿಸಿ ಅವರ ಪ್ರಾಣಕ್ಕೆ ಅಪಾಯ ಎದುರಾಗದಂತೆ ಮಾಡಿದ್ದು. ಇದಾದ ನಂತರವೇ ಆತನಿಗೆ ನೆನಪಾಗಿದ್ದು ತನ್ನ ಜೀವನೋಪಾಯಕ್ಕೆ ಮುಖ್ಯವಾಗಿದ್ದ ತನ್ನ ವಯಲಿನ್ ವಾದ್ಯ. ಆಗ ಆತ ತನ್ನ ಕೊಠಡಿಯಲ್ಲಿದ್ದ ವಯಲಿನ್ ವಾದ್ಯವನ್ನು ತೆಗೆದುಕೊಂಡು ಬರಲು ಹೋದ. ಆದರೆ ಆತ ಅಲ್ಲಿಂದ ಹಿಂತಿರುಗುವ ಮೊದಲೇ ಆತನ ಕೊಠಡಿಗೆ ನೀರು ನುಗ್ಗಿ ಸಾನ್ಡೋರ್ ತನ್ನ ಪ್ರಾಣವನ್ನೇ ತೆತ್ತ.

ತನ್ನ ನಾಯಕತ್ವದಲ್ಲಿ ಹಡಗಿನಲ್ಲಿದ್ದ ಜನರು ಸತ್ತರೆಷ್ಟು, ಬಿಟ್ಟರೆಷ್ಟು ಎಂದು ಮೊದಲು ತಾನೇ ಹಡಗಿನಿಂದ ಪಲಾಯನ ಮಾಡಿದ ಕ್ಯಾಪ್ಟನ್ ಸೆಟ್ಟಿನೋ ಎಲ್ಲಿ, ತನ್ನ ಪ್ರಾಣಕ್ಕಿಂತಲೂ ಪುಟ್ಟಮಕ್ಕಳ ಜೀವ ಮುಖ್ಯ ಎಂದು ಭಾವಿಸಿ ಅವರನ್ನೆಲ್ಲ ರಕ್ಷಿಸಿ, ತನ್ನ ಜೀವನೋಪಾಯದ ವಯಲಿನ್ ಮುಖ್ಯ ಎಂದು ಅದನ್ನು ಪಡೆಯಲು ಹೋಗಿ ತಮ್ಮ ಪ್ರಾಣವನ್ನೇ ತೆತ್ತ ಸಂಗೀತಗಾರ ಸಾನ್ಡೋರ್ ಎಲ್ಲಿ?

# ಬಂಡವಾಳಶಾಹಿ ವಿರುದ್ಧದ ಸಿನಿಮಾದಲ್ಲಿ ಕೊಸ್ಟ ಕಾನ್‌ಕೋರ್ಡಿಯಾ

ಹಣವಂತರ ಐಷಾರಾಮಿ ತೆವಲುಗಳಿಗೆ ಹೇಳಿಮಾಡಿಸಿದಂತಿದ್ದ ಬಂಡವಾಳಶಾಹಿ ಸಿದ್ಧಾಂತದ ಫಲಾನುಭವಿಗಳ ಸ್ವರ್ಗದಂತಿದ್ದ ಕೋಸ್ಟ ಕಾನ್‌ಕೋರ್ಡಿಯಾ ಹಡಗು ಹಿಂದೊಮ್ಮೆ ಇದೇ ಬಂಡವಾಳಶಾಹಿ ಸಿದ್ಧಾಂತದ ವಿರುದ್ಧದ ಸಿನಿಮಾವೊಂದರಲ್ಲಿ ಮುಖ್ಯ ಪಾತ್ರವನ್ನು ವಹಿಸಿತ್ತೆಂಬುದು ಅಚ್ಚರಿ ಮೂಡಿಸುವ ಸಂಗತಿಯಾದರೂ ಅದು ಸತ್ಯ!

2010ರಲ್ಲಿ ಜಗದ್ವಿಖ್ಯಾತ ಸಿನಿಮಾ ನಿರ್ದೇಶಕರಾದ ಜೀನ್-ಲುಕ್ ಗೊಡಾರ್ಡ್ 'ಸೋಶಲಿಸ್ಮೆ' (ಸಮಾಜವಾದ) ಎಂಬ ಫ್ರೆಂಚ್ ಸಿನಿಮಾವನ್ನು ನಿರ್ದೇಶಿಸಿದ್ದರು. ಆ ಸಿನಿಮಾದ ಕಥಾವಸ್ತು ಪಾಶ್ಚಿಮಾತ್ಯ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಹೇಗೆ ಜಗತ್ತನ್ನೇ ನಾಶಮಾಡಬಲ್ಲದು ಎಂಬುದಾಗಿತ್ತು. ಇದೇ ಕೋಸ್ಟ್ ಕಾನ್‌ಕೋರ್ಡಿಯಾದಲ್ಲಿ ಜಗತ್ತಿನ ಶ್ರೀಮಂತರು ಎಂತಹ ಲೋಲುಪತೆಯ ಜೀವನ ನಡೆಸುತ್ತಾರೆ ಎಂದೂ, ಅಂತಹ ಹಡಗು ಹೇಗೆ ಇಂತಹ ಆರ್ಥಿಕ ನೀತಿಯ ಪ್ರತೀಕ ಎಂದೂ, ಕೊನೆಗೆ ಆ ಹಡಗು ಹೇಗೆ ಸಮುದ್ರದ ಅಲೆಗಳಿಗೆ ಬಲಿಯಾಗುತ್ತದೆಂದೂ ತೋರಿದ್ದರು.


ಸೋಶಲಿಸ್ಮೆ ಚಿತ್ರದ ದೃಶ್ಯ

ಪ್ರತಿಷ್ಠಿತ ಕಾನ್ ಚಿತ್ರೋತ್ಸವದಲ್ಲಿ ಮೊದಲ ಬಾರಿಗೆ ಪ್ರದರ್ಶನ ಕಂಡ 'ಸೋಶಲಿಸ್ಮೆ' ಚಿತ್ರಕ್ಕೆ ಮಿಶ್ರ ಪ್ರತಿಕ್ರಿಯೆಗಳು ಬಂದಿದ್ದವು. ಹಲವರು ಮಾರುಕಟ್ಟೆ ಸಿದ್ಧಾಂತವನ್ನು ನಂಬಿದರೆ ಆಗುವ ಅಪಾಯಗಳ ಮುನ್ನೆಚ್ಚರಿಕೆ ಈ ಚಿತ್ರ ಎಂದರೆ, ಇನ್ನೂ ಹಲವರು ಗೋಡಾರ್ಡ್ ತರಹದ ಮುದಿ ನಿರ್ದೇಶಕ ಮಾತ್ರ ಮಾಡಬಲ್ಲಂತಹ ಅಪ್ರಸ್ತುತ ಸಿನಿಮಾ ಇದು ಎಂದು ಜರಿದಿದ್ದರು.

ಆದರೆ ಇವತ್ತು ಏನಾಗಿದೆ? ಗೋಡಾರ್ಡ್ ಅವರು ಭವಿಷ್ಯದ ಬಗ್ಗೆ ನೀಡಿದ್ದ ಎಚ್ಚರಿಕೆ ಮುಖ್ಯವಾಗಿದೆಯಲ್ಲವೇ? ಇದನ್ನು ಅರ್ಥಮಾಡಿಕೊಳ್ಳುವ ಬೌದ್ಧಿಕ ಶಕ್ತಿ ನಮಗಿರಬೇಕಷ್ಟೇ.

# ಇಟಲಿ ಹತ್ತಿರ ಮುಳುಗಿದ ಹಡಗಿನ ದುರಂತ ಕತೆ

• ಸಾವಂತ್ರಿ

ಕಳೆದ ವಾರ ಇಟಲಿಯ ಸಮುದ್ರ ತೀರದಲ್ಲಿ ಮುಳುಗಿದ ಕೋಸ್ಟ ಕಾನ್‌ಕೋರ್ಡಿಯಾ ಎಂಬ ಬೃಹತ್ ಐಶಾರಾಮಿ ಹಡಗಿನಲ್ಲಿ ಮೂರು ಸಾವಿರಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ಹಾಗೆಯೇ ಒಂದು ಸಾವಿರಕ್ಕೂ ಹೆಚ್ಚು ನಾವಿಕರ ಮತ್ತು ಕೆಲಸಗಾರರ ತಂಡವೂ ಇತ್ತು. ಅಂತಹ ಕೆಲಸಗಾರರಲ್ಲಿ 202 ಜನ ಭಾರತೀಯರಿದ್ದರು.

ಆ 202 ಜನರಲ್ಲಿ ಒಬ್ಬರ ಹೊರತಾಗಿ ಎಲ್ಲರೂ ಸುರಕ್ಷಿತವಾಗಿ ತಮ್ಮ ಮನೆಗಳಿಗೆ ಕಳೆದ ಕೆಲವು ದಿನಗಳ ಹಿಂದೆ ಹಿಂದಿರುಗಿದ್ದಾರೆ. ಹಾಗೆ ಹಿಂದಿರುಗದಿದ್ದ ಏಕೈಕ ವ್ಯಕ್ತಿ ಮುಂಬೈ ಮೂಲದ ರಸ್ಸಲ್ ರೆಬೆಲ್ಲೋ ಎಂಬ ನಾವಿಕ.

30 ವರ್ಷ ವಯಸ್ಸಿನ ರೆಬೆಲ್ಲೋ ಕಳೆದ ಐದು ವರ್ಷಗಳಿಂದ ಇದೇ ಕೋಸ್ಟ ಕಾನ್‌ಕೋರ್ಡಿಯಾದಲ್ಲಿ ಸ್ಟೀವರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಮಡದಿ ಮತ್ತು ಮೂರು ವರ್ಷದ ಮಗನನ್ನು ಹೊಂದಿರುವ ರೆಬೆಲ್ಲೋ ಕಳೆದ ಅಕ್ಟೋಬರ್‌ನಲ್ಲಿ ಮತ್ತೆ ಈ ಹಡಗನ್ನು ಏರಿದರು. ಕಳೆದ ಬಾರಿ ಅವರು ಬಂದರು ಒಂದನ್ನು ತಲುಪಿದಾಗ ತಮ್ಮ ಮನೆಗೆ ಫೋನ್ ಮಾಡಿ ತಮ್ಮ ಹೆಂಡತಿ ಜೊತೆ ಮಾತನಾಡಿದ್ದೇ ಕೊನೆ. ಹಡಗು ಮುಳುಗಿದ ನಂತರ ಸುರಕ್ಷಿತವಾಗಿ ದಡ ಸೇರಿದವರಲ್ಲಿ ರೆಬೆಲ್ಲೋ ಇರಲಿಲ್ಲ. ಇಲ್ಲಿಯತನಕ ಅವರ ಪತ್ತೆಯೂ ಇಲ್ಲ...


ಬಷೀರ್ ಅಹಮದ್ ಮತ್ತು ವಿನೋದ್ ಕುಮಾರ್


ಆಂಥೋನಿ

ಬೆಂಗಳೂರಿನ ಬಷೀರ್ ಅಹಮದ್ ಮತ್ತು ವಿನೋದ್ ಕುಮಾರ್ ರೆಬೆಲ್ಲೋಗಿಂತ ಅದೃಷ್ಟವಂತರು. ಅಹಮದ್ ಅವರು ಹಡಗಿನಲ್ಲಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದರೆ ವಿನೋದ್ ಅವರ ಸಹಾಯಕರಾಗಿದ್ದರು. ಮೊನ್ನೆ ಬೆಂಗಳೂರಿಗೆ ಆಗಮಿಸಿದ ಅಹಮದ್ ಆ ಭೀಕರ ಘಟನೆಯನ್ನು ನೆನಪು ಮಾಡಿಕೊಳ್ಳುತ್ತಾ "ಎಲ್ಲವೂ ರಾತ್ರಿ 9.45ಕ್ಕೆ ಪ್ರಾರಂಭವಾಯಿತು. ಸುಮಾರು 1,800 ಪ್ರಯಾಣಿಕರು ಊಟ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಥಡ್ ಎಂಬ ಶಬ್ದ ಕೇಳಿಸಿತು. ಆಮೇಲೆ ಹಡಗು ತೂಗಾಡಿತು. ಬಿರುಗಾಳಿ ಇದ್ದಾಗ ಹಡಗು ಹಾಗೆ ತೂಗಾಡುವುದುಂಟು. ಆದರೆ ಆ ಸಮಯದಲ್ಲಿ ಬಿರುಗಾಳಿ ಬೀಸುತ್ತಿರಲಿಲ್ಲ. ರಾತ್ರಿ 10.30 ಅಷ್ಟು ಹೊತ್ತಿಗೆ ನೀರು ಹಡಗನ್ನು ತುಂಬಿಕೊಂಡು ಅದು ಒಂದು ಕಡೆಗೆ ವಾಲಲಾರಂಭಿಸಿದಾಗ ಜನ ಭಯಭೀತರಾದರು" ಎಂದು ಹೇಳಿದರು.

ಅವರ ಸಹಾಯಕ ಆಗಿದ್ದ ವಿನೋದ್ ಕುಮಾರ್ ಅಂತಹ ಪರಿಸ್ಥಿತಿಯಲ್ಲೂ ನೌಕೆಯ ಶಿಸ್ತನ್ನು ಕಾಪಾಡಿಕೊಂಡು ತನ್ನ ಹಿರಿಯ ಅಹಮದ್ ಹೇಳಿದ್ದನ್ನು ಚಾಚೂ ತಪ್ಪದೆ ಮಾಡಿದರು. ಇವರಿಬ್ಬರು ಇತರೆ ನೌಕರರೊಂದಿಗೆ ಸೇರಿ ತಮ್ಮ ಕೈಲಾದಷ್ಟು ಜನರನ್ನು ಸುರಕ್ಷಿತವಾಗಿ ದಡಕ್ಕೆ ಸೇರಿಸಿದ ನಂತರವೇ ತಾವೂ ರಕ್ಷಾನೌಕೆಯನ್ನು ಏರಿ ಹಡಗನ್ನು ತೊರೆದರು.


ರಸ್ಸಲ್

ಇಂತಹ ಒಂದು ಪ್ರಕರಣವನ್ನು ಎದುರಿಸಿ, ಸಾವಿನ ದವಡೆತನಕ ಹೋಗಿ ವಾಪಸ್ ಬಂದ ನಂತರವೂ ನೀವು ಮತ್ತೆ ಯಾವುದಾದರೂ ಹಡಗಿನಲ್ಲಿ ಕೆಲಸ ಮಾಡುತ್ತೀರಾ ಎಂದು ಕೇಳಿದರೆ "ಈಗ ನಮಗೆ ಪುನರ್‌ಜನ್ಮ ಸಿಕ್ಕಿದೆ ಎನಿಸುತ್ತಿದೆ ನಿಜ. ಆದರೆ ನೌಕೆಯಲ್ಲಿ ಕೆಲಸ ಮಾಡುವುದೇ ನಮಗಿಷ್ಟ ಮತ್ತು ಹಣವೂ ಚೆನ್ನಾಗಿ ಸಿಗುತ್ತದೆ. ಸ್ವಲ್ಪ ದಿನಗಳ ನಂತರ ನಾವು ಮತ್ತೆ ಸಮುದ್ರಕ್ಕೆ ವಾಪಸ್ ಹೋಗುತ್ತೇವೆ" ಎನ್ನುತ್ತಾರೆ.

ಗೋವಾದ ಆಂಥೋನಿ ಫೆಮುಂಡೋ ಕೂಡ ಸಾವಿ ದವಡೆಯಿಂದ ಸ್ವಲ್ಪದರಲ್ಲೇ ಪಾರಾಗಿ ಬಂದವರು. ಅವರು ಕೂ ಹಲವಾರು ಇತರೆ ಗೋವಾ ಮೂಲಕ ನೌಕರರಂತೆ ಹಡಗಿನಲ್ಲಿ ಕೆಲಸ ಮಾಡುತ್ತಿದ್ದರು. "ಕಲ್ಲುಬಂಡೆ ಹಡಗು ಡಿಕ್ಕಿ ಹೊಡೆದಾಗ ನಾನು ಮತ್ತು ನ ಕ್ಯಾಬಿನ್ ಮೇಟ್ ಪಂಕಜ್ ನಮ್ಮ ಕ್ಯಾಬಿನ್‌ನ ಸಿನಿಮಾ ನೋಡುತ್ತ ಕೂತಿದ್ದೆವು. ಸ್ವಲ್ಪ ಹೊತ್ತಿ ನಂತರ ಹಡಗು ವಾಲಲಾರಂಭಿಸಿತು ಮತ್ತ ಹೊರಗೆ ಜನರು ಕೂಗಾಡುತ್ತಿರುವ ಸದ ಕೇಳಿಸಿತು. ನಾವಿಬ್ಬರು ಹೊರಗೆ ಬಂದ ನೋಡಿದರೆ ಇತರೆ ನಾವಿಕರು ಲೈಫ್ ಜಾಕೆಟ ತೊಟ್ಟಿರುವುದನ್ನು ಗಮನಿದೆವು. ನಾವು ನವ ಕ್ಯಾಬಿನ್‌ಗೆ ಹಿಂದಿರುಗಿ ನಮ್ಮ ಲೈಫ ಜಾಕೆಟ್‌ಗಳನ್ನು ತೊಟ್ಟು ಮೇಲೆ ಬಂದೆವ ಮಕ್ಕಳು ಅಳುತ್ತಿದ್ದವು. ನನ್ನ ಕಣ್ಣ ಮುಂದೆಯೆ ಕೆಲವು ಮಕ್ಕಳು ನೀರು ಪಾಲಾದರು. ಅವರನ್ನು ರಕ್ಷಿಸಲು ನ ಕೈಯಿಂದಾಗಲಿಲ್ಲ ಎಂಬ ನೋವು ನನ್ನನ್ನು ಕಾಡುತ್ತಿದೆ ಎಂದು ಆಂಥೋನಿ ದುಃಖಿಸುತ್ತಿದ್ದಾರೆ.

"ನೀವು ಮತ್ತೆ ಸಮುದ್ರಕ್ಕೆ ಹೋಗುತ್ತೀರಾ?" ಎಂದ ಕೇಳಿದರೆ ಆಂಥೋನಿ "ನನಗೆ ಬೇರೆ ಮಾರ್ಗವಿಲ್ಲ, ನನ್ನ ಎ ದಾಖಲೆಗಳು, ಪಾಸ್‌ಪೋರ್ಟ್, ಎಲ್ಲವೂ ಆ ಕಂಪನಿಯ ಬ ಇವೆ" ಎನ್ನುತ್ತಾರೆ.

ಈ ದುರಂತದ ಸುತ್ತ ಇನ್ನೂ ಹಲವು ರೋಚಕ ಕತೆಗ ಇಲ್ಲಿವೆ....










# ಟೈಟಾನಿಕ್‌ಗಿಂತ ಮೂರು ಪಟ್ಟು ದೊಡ್ಡ ಹಡಗು

ಇಟಲಿಯ ದ್ವೀಪ ಒಂದರ ಹತ್ತಿರ ಮುಳುಗಿದ ಕೊಸ್ಟ ಕಾನ್‌ಕೋರ್ಡಿಯಾ ಹಡಗು ಸಾಮಾನ್ಯ ಹಡಗಲ್ಲ. ಸುಮಾರು ನೂರು ವರ್ಷಗಳ ಹಿಂದೆ ಮುಳುಗಿದ ಜಗದ್ವಿಖ್ಯಾತ ಟೈಟಾನಿಕ್ ಹಡಗಿಗಿಂತ ಮೂರು ಪಟ್ಟು ದೊಡ್ಡದಾಗಿದೆ ಕೊಸ್ಟಾ ಕಾನ್‌ಕೋರ್ಡಿಯಾ. ಇದರಲ್ಲಿ ಒಂಬತ್ತು ಅಂತಸ್ತುಗಳಿದ್ದು ಸುಮಾರು ಐದು ಸಾವಿರ ಜನ ಇದರಲ್ಲಿ ವಾಸ ಮಾಡಬಹುದಾಗಿದೆ. ಈ ಕಾರಣಕ್ಕೇ ಈ ಹಡಗು ಒಂದು ಚಿಕ್ಕ ನಗರದಷ್ಟು ದೊಡ್ಡದಾಗಿದೆ ಎಂದು ಹೇಳಲಾಗುತ್ತಿದೆ. 950 ಅಡಿ ಉದ್ದ ಮತ್ತು 115 ಅಡಿ ಅಗಲವಿರುವ ಈ ಹಡಗನ್ನು 45,000 ಟನ್ ಸ್ಟೀಲ್ ಉಪಯೋಗಿಸಿ ನಿರ್ಮಿಸಲಾಗಿದೆ. ಈ ಹಡಗಿನ ಒಟ್ಟು ತೂಕವೇ 1,14,5000 ಟನ್!


ಐಷಾರಾಮಿ ಹಡಗು ಮತ್ತು ಅದರೊಳಗಿನ ದೃಶ್ಯಗಳು...

ಈ ಹಡಗು ಕೋಸ್ಟಾ ಕ್ರೂಸ್ ಎಂಬ ಕಂಪನಿಗೆ ಸೇರಿದ್ದು ವಿಹಾರ ನೌಕಾಯಾನಕ್ಕೆ ಈ ಕಂಪನಿ ಯೂರೋಪಿನಲ್ಲೇ ಹೆಚ್ಚು ಖ್ಯಾತಿ ಪಡೆದಿರುವ ದೊಡ್ಡ ಕಂಪನಿಯಾಗಿದೆ.

ಆಧುನಿಕ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಲಾಗಿದ್ದ ಇಷ್ಟು ದೊಡ್ಡ ಹಡಗು ಮುಳುಗುವ ಅಪಾಯವೇ ಇಲ್ಲ, ಹಾಗೊಮ್ಮೆ ಮುಳುಗಿದರೂ ಅದರಲ್ಲಿ ವಿಹಾರಯಾನ ಮಾಡುತ್ತಿರುವ ಜನರ ಜೀವಹಾನಿ ಆಗುವುದಿಲ್ಲ ಎಂದೇ ನಂಬಲಾಗಿತ್ತು, ಆದರೆ ಈ ಹಡಗಿನ ಕ್ಯಾಪ್ಟನ್ ಸೆಟ್ಟಿನೋ ಎಂಬಾತನ ಧಿಮಾಕು ಮತ್ತು ನಿರ್ಲಕ್ಷ್ಯದಿಂದಾಗಿ ಸಾವಿರಾರು ಜನ ಪ್ರಾಣಾಪಾಯವನ್ನು ಎದುರಿಸಿದರಲ್ಲದೆ, ಮೂವತ್ತಕ್ಕೂ ಹೆಚ್ಚು ಜನ ತಮ್ಮ ಪ್ರಾಣವನ್ನೇ ಕಳೆದುಕೊಂಡರು.



# ...ಾಹಸ ಹೇಳೋಕೆ, ...ೇಡಿತನ ಮಾಡೋಕೆ

ಕೋಸ್ಟ ಕಾನ್‌ಕೋರ್ಡಿಯಾ ಹಡಗಿನ ನಾಯಕ್ ಶೆಟ್ಟಿನೊ ಎರಡು ...ರ್ಷಗಳ ಹಿಂದೆ ಒಂದು ಸಂದರ್ಶನದಲ್ಲಿ ಹೀಗೆ ಹೇಳಿದ್ದ: ...ನಾನು ಟೈಟಾನಿಕ್ ಹಡಗಿನ ಕ್ಯಾಪ್ಟನ್ ಆಗಿದ್ದರೆ ನಾನು ...ವನ್ನು ಮುಳುಗುವುದಕ್ಕೆ ಬಿಡುತ್ತಿರಲಿಲ್ಲ."



ಆದರೆ ಇದೇ ಶೆಟ್ಟಿನೊ ತನ್ನ ಹಡಗು ...ುಳುಗಲಾರಂಭಿಸಿದಾಗ ಮಾಡಿದ್ದೇನು?

ಟೈಟಾನಿಕ್ ಹಡಗಿನ ನಾಯಕ ಕ್ಯಾಪ್ಟನ್ ಸ್ಮಿತ್ ತನ್ನ ...ಯಲ್ಲಿ ಸಾಧ್ಯವಾದಷ್ಟು ಜನರನ್ನು ರಕ್ಷಿಸಿದ ನಂತರ ...ಡಗಿನಲ್ಲಿ ಉಳಿದಿದ್ದ ಜನರೊಂದಿಗೆ ತಾನೂ ...ೀರುಪಾಲಾಗಿ ತನ್ನ ಪ್ರಾಣವನ್ನೇ ಬಿಟ್ಟ. ಆದರೆ ತಾನು ...್ಯಾಪ್ಟನ್ ಸ್ಮಿತ್‌ನ ಜಾಗದಲ್ಲಿ ಇದ್ದಿದ್ದರೆ ಆ ಹಡಗು ...ುಳುಗದಂತೆ ನೋಡಿಕೊಳ್ಳುತ್ತಿದ್ದೆ ಎಂದಿದ್ದ ಕ್ಯಾಪ್ಟನ್ ...ಟ್ಟಿನೊ ತನ್ನ ಹಡಗಿನಲ್ಲಿದ್ದ ಜನರನ್ನು ಅವರವರ ...ಣೆಬರಹಕ್ಕೆ ಬಿಟ್ಟು ತಾನೇ ಮೊದಲ ರಕ್ಷಾನೌಕೆಯನ್ನೇರಿ ...ರಾರಿಯಾದ. ಆ ಕಾರಣಕ್ಕೇ ಇವತ್ತು ಶೆಟ್ಟಿನೊ ಜನರ ...ಕ್ರೋಶಕ್ಕೆ, ಅಪಹಾಸ್ಯಕ್ಕೆ ಗುರಿಯಾಗಿದ್ದಾನೆ.




ಅಂದಹಾಗೆ, ಈ ಶೆಟ್ಟಿನೊನ ಉಡಾಫೆ ...ವೃತ್ತಿಯಿಂದಲೇ ನಾಲ್ಕು ಸಾವಿರ ಜನರು ಜಲಸಮಾಧಿ ...ಗುವ ಪರಿಸ್ಥಿತಿ ಉಂಟಾಗಿದ್ದು. ಮೊದಲನೆಯದಾಗಿ, ...ೋಸ್ಟ ಕಾನ್‌ಕೋರ್ಡಿಯಾ ಹಡಗನ್ನು ಈ ಶೆಟ್ಟಿನೊ ತನ್ನ ...ುತ್ರನೊಬ್ಬ ವಾಸಿಸುತ್ತಿರುವ ದ್ವೀಪಕ್ಕೆ ತೀರಾ ಸಮೀಪ ...ೋದ. ಅದಕ್ಕೆ ಕಾರಣ ಆತನ ಮಿತ್ರನಿಗೆ ಹಡಗಿನಿಂದಲೇ ...ಹಾಯ್" ಎಂದು ಹೇಳುವುದಾಗಿತ್ತು. ಅಷ್ಟು ದೊಡ್ಡ ...ಡಗು ದ್ವೀಪಕ್ಕೆ ಹತ್ತಿರ ಹೋಗಿದ್ದರಿಂದಲೇ ಅದಕ್ಕೆ ಕಲ್ಲುಬಂಡೆಗಳು ತಗುಲಿ 150 ಅಡಿಯಷ್ಟು ಉದ್ದದ ರಂಧ್ರ ಸೃಷ್ಟಿ ಆದದ್ದು.

ಹೋಗಲಿ, ಅಷ್ಟು ದೊಡ್ಡ ರಂಧ್ರದಿಂದ ಹಡಗು ಮುಳುಗುತ್ತದೆ ಎಂಬ ಅಪಾಯವೂ ಈ ಶೆಟ್ಟಿನೊಗೆ ಹೊಳೆಯಲಿಲ್ಲ. ಆತನ ಸಹಚರರು ರಂಧ್ರವಾಗಿದೆ ಎಂದಾಗ, ಶೆಟ್ಟಿನೊ ಅದನ್ನು ರಿಪೇರಿ ಮಾಡಿ ಎಂದು ಹೇಳಿ ತನ್ನ ಹಡಗಿನಲ್ಲಿದ್ದ ಓರ್ವ ವೈಯಾರಿಯ ಜೊತೆ ಹರಟೆ ಕೊಚ್ಚುತ್ತಾ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಿದ. ಡಿಕ್ಕಿ ಹೊಡೆದ ಅರ್ಧಗಂಟೆಯ ನಂತರ ಬಂದರಿನಿಂದ ಒಬ್ಬರು ಕರೆ ನೀಡಿ "ಎಲ್ಲವೂ ಸೌಖ್ಯವೇ?" ಎಂದು ವಿಚಾರಿಸಿದರೆ, ಈ ಗಮಾರ "ಏನೂ ಸಮಸ್ಯೆ ಇಲ್ಲ. ಒಂದು ಪುಟ್ಟ ಟೆಕ್ನಿಕಲ್ ಪ್ರಾಬ್ಲಮ್ ಅಷ್ಟೇ" ಎಂದು ಉತ್ತರಿಸಿದ್ದ.



ಈತ ಅಪಾಯವನ್ನು ಅದೆಷ್ಟು ನಿರ್ಲಕ್ಷಿಸಿದನೆಂದರೆ ಹಡಗಿನಲ್ಲೂ ನೀರು ತುಂಬುತ್ತಿದ್ದರೂ, ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ತನಗೂ ತನ್ನ ಗೆಳತಿಗೂ ವಿಶೇಷ ಅಡುಗೆ ಮಾಡಲು ಚೆಫ್‌ಗಳಿಗೆ ಹೇಳಿ ಆಕೆಯೊಂದಿಗೆ ವೈನ್ ಸೇವಿಸುತ್ತಾ ಕೂತ. ಹಡಗಿನಲ್ಲಿದ್ದ ಎಲ್ಲರೂ ಅಪಾಯದ ಅಂಚಿನಲ್ಲಿದ್ದರೂ ಈತ ವೈನ್ ಕುಡಿಯುತ್ತಾ, ಬಿಸಿಬಿಸಿ ಅಡುಗೆಗಾಗಿ ಕಾಯುತ್ತಿದ್ದದ್ದನ್ನು ಗಮನಿಸಿದ ಚೆಫ್ ರೊಗೆಲಿಯೋ ಬರಿಸ್ಟಾನಿಗೆ ಯೋಚನೆ ಆಯಿತು. "ಎಲ್ಲೆಡೆ ಗೊಂದಲ ಏರ್ಪಟ್ಟಿತು. ನನ್ನ ಕೈಗಳೂ ನಡುಗುತ್ತಿದ್ದವು. ಆದರೂ ಈ ಶೆಟ್ಟಿನೊ ಆರಾಮಾಗಿ ಕೂತಿದ್ದ" ಎಂದು ಬರಿಸ್ಟಾ ಹೇಳಿದ್ದಾನೆ.



ಶೆಟ್ಟಿನೊನನ್ನು ಲೇವಡಿ ಮಾಡುವ ಟೀ-ಶರ್ಟ್

ಕೊನೆಗೆ ಈತನನ್ನು ನಂಬಿದರೆ ಎಲ್ಲರಿಗೂ ಸಾವು ನಿಶ್ಚಿತ ಎಂದು ಕೋಸ್ಟ ಕಾನ್‌ಕೋರ್ಡಿಯಾದ ಎರಡನೆ ಹಂತದ ನೌಕರರು ಶೆಟ್ಟಿನೊ ವಿರುದ್ಧ ದಂಗೆ ಎದ್ದರು. ಆಗ ಈತ ಏನು ಮಾಡಿದ ಗೊತ್ತೆ? ಹಡಗು ಅಪಾಯದಲ್ಲಿರುವ ಬಗ್ಗೆ ಬಂದರಿಗೆ "ಮೇಡೇ ಮೇಡೇ" ಎಂಬ ಸೂಚನೆ ರವಾನಿಸಿ, ಹಡಗಿನಲ್ಲಿದ್ದ ಜನರನ್ನು ರಕ್ಷಿಸಲು ಇತರರಿಗೆ ಹೇಳಿ ಈತನೇ ಮೊದಲ ರಕ್ಷಾನೌಕೆಯಲ್ಲಿ ಹಾರಿ ಕುಳಿತ!

ಆಗ ಬಂದರಿನಿಂದ ಶೆಟ್ಟಿನೊಗೆ ಒಂದು ಕರೆ ಬಂತು. ಆತ ಕಡೆಯಿಂದ ಬಂದರಿನ ಅಧಿಕಾರಿ ಡಿ ಫಾಲ್ಕೊ ಎಂಬುವವರು ಮಾತನಾಡುತ್ತಿದ್ದರು. ಅವರಿಬ್ಬರ ಸಂಭಾಷಣೆ ಹೀಗೆ ನಡೆಯಿತು:

ಡಿ ಫಾಲ್ಕೊ: ಈಗ ನೀವು ಎಲ್ಲಿದ್ದೀರಿ?

ಶೆಟ್ಟಿನೊ: ರಕ್ಷಾನೌಕೆಯಲ್ಲಿದ್ದೇನೆ.

ಡಿ ಫಾಲ್ಕೊ: ನೀವು ಅಲ್ಲೇನು ಮಾಡುತ್ತಿದ್ದೀರಿ? ನೀವು ಈ ಕೂಡಲೇ ಹಡಗಿಗೆ ಹಿಂದಿರುಗಿ. ಅಲ್ಲಿನ ಪರಿಸ್ಥಿತಿಯನ್ನು ನನಗೆ ವಿವರಿಸಿ.

ಶೆಟ್ಟಿನೊ: ಆದರೆ ನಾನು ಅದನ್ನು ಇಲ್ಲಿಂದಲೇ ಹೇಳುತ್ತೇನೆ. ನಾನು ಎಲ್ಲಿಗೂ ಓಡಿಹೋಗಿಲ್ಲ, ನಾನು ಇಲ್ಲೇ ಇದ್ದೇನೆ.

ಡಿ ಫಲ್ಕೊ: ಈಗ ನಾನು ಹೇಳಿದಷ್ಟು ಮಾಡಿ. ಮೊದಲು ನೀವು ಹಡಗನ್ನೇರಿ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಿ.

ಡಿ ಫಾಲ್ಕೊ: ಆದರೆ ಅಲ್ಲಿ ತುಂಬಾ ಕತ್ತಲು.

ಡಿ ಫಾಲ್ಕೊ: ಅದಕ್ಕೆ ನೀನು ಮನೆಗೆ ಹೋಗಬೇಕು ಅಂದು ಕೊಂಡಿದ್ದೀಯಾ? ತೆಪ್ಪಗೆ ಹಡಗಿಗೆ ವಾಪಸ್ ಹೋಗುತ್ತೀಯೋ ಇಲ್ಲವೋ ದರಿದ್ರದವನೆ??

ಶೆಟ್ಟಿನೊ: ಹೋಗುತ್ತೇನೆ, ಹೋಗುತ್ತೇನೆ.

ಆದರೆ ಶೆಟ್ಟಿನೊ ಹಡಗಿಗೆ ವಾಪಸ್ ಹೋಗಲೇ ಇಲ್ಲ, ಬದಲಾಗಿ ಆತ ದಡವನ್ನು ತಲುಪಿ ಅಲ್ಲಿ ಕಾರ್ ಒಂದನ್ನು ಏರಿ ತನ್ನ ಮನೆಗೆ ಓಡಿಹೋದ. ಅಷ್ಟೇ ಅಲ್ಲ, ಪತ್ರಿಕೆಯವರು ಆತನ ವರ್ತನೆ ಬಗ್ಗೆ ಕೇಳಿದಾಗ ಶೆಟ್ಟಿನೊ "ನಾನು ಕಾಲು ಜಾರಿ ರಕ್ಷಾನೌಕೆಗೆ ಬಿದ್ದುಬಿಟ್ಟೆ" ಎಂದಿದ್ದಾನೆ!


ಇವತ್ತು ಶೆಟ್ಟಿನೊ ಬಗ್ಗೆ ಇಟಲಿಯ ಜನ ಮಾತ್ರವಲ್ಲ, ಎಲ್ಲೆಡೆ ಜನ ತಮಾಷೆ ಮಾಡುತ್ತಿದ್ದಾರೆ. ಹಾಗೆಯೇ ಬಂದರಿನ ಅಧಿಕಾರಿ ಡಿ ಫಾಲ್ಕೊ ಬಗ್ಗೆ ಮೆಚ್ಚುಗೆಯ ಮಾತನ್ನಾಡುತ್ತಿದ್ದಾರೆ.

# ...ಫಿಲಿಪೀನಿಯರ ದಿಟ್ಟತನ

ಸಮುದ್ರದಲ್ಲಿ ಅರ್ಧ ಮುಳುಗಿರುವ ಕೋಸ್ಟ ಕಾನ್‌ಕೋರ್ಡಿಯಾ ನೌಕೆಯಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನ ಪ್ರಯಾಣಿಕರಿದ್ದರೆ, ಒಂದು ಸಾವಿರಕ್ಕೂ ಹೆಚ್ಚು ನಾವಿಕರ ಮತ್ತು ನೌಕರರ ತಂಡವಿತ್ತು. ಅದರಲ್ಲೂ ಹಡಗಿನಲ್ಲಿ ಕಸ ಗುಡಿಸಲಿಕ್ಕೆ ಮತ್ತು ಪಾತ್ರೆ ತೊಳೆಯುವುದಕ್ಕೆಂದು ಫಿಲಿಪೀನ್ ದೇಶದಿಂದ ಬಂದಿದ್ದ ಕೆಲಸಗಾರರ ತಂಡ ಒಂದಿತ್ತು. ಹಡಗು ಮುಳುಗುತ್ತಿದ್ದಂತೆ ಕ್ಯಾಪ್ಟನ್ ಶೆಟ್ಟಿನೊ ಜೊತೆ ಹಲವು ನಾವಿಕರು ಪಲಾಯನ ಮಾಡಿದರಾದರೂ ಹೆಚ್ಚು ಜನರನ್ನು ರಕ್ಷಿಸಿ ಎಲ್ಲರಿಂದ ಪ್ರಶಂಸೆಗೆ ಪಾತ್ರವಾಗಿತ್ತು ಫಿಲಿಪೀನಿನ ಕೆಲಸಗಾರರು.



ನೌಕೆಯಲ್ಲಿದ್ದ ಎಲ್ಲರೂ ದುಗುಡಗೊಂಡಿದ್ದರೂ ಈ ಫಿಲಿಪೀನಿನ ಜನ ಮಾತ್ರ ಒಂದಿಷ್ಟು ವಿಚಲಿತರಾಗದೆ, ಸಮಾಧಾನದಿಂದಿದ್ದು ಬಹಳಷ್ಟು ಜನರ ಪ್ರಾಣವನ್ನು ಕಾಪಾಡಿದರು. ಮೊದಲಿಗೆ ಇವರೆಲ್ಲ ಅತಿ ಅಸಹಾಯಕ ಸ್ಥಿತಿಯಲ್ಲಿದ್ದ ಮಕ್ಕಳನ್ನು ರಕ್ಷಿಸಿದರು. ಯೂಜೆನ್ ಪುಸ್ಕೋ ಎಂಬಾತ "ನಾವು ಕೆಲವು ಮಕ್ಕಳನ್ನು ರಕ್ಷಾನೌಕೆಗಳಿಗೆ ಎಸೆದೆವು. ಹಾಗೆ ಎಸೆದಾಗಿ ಆ ಮಕ್ಕಳಿಗೆ ಗಾಯಗಳಾಗಿರಬಹುದು. ಆದರೆ ನಾವು ಅಂತಹದ್ದನ್ನೆಲ್ಲ ಎಚ್ಚರಿಕೆಯಿಂದ ನೋಡಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ. ನಮಗೆ ಆ ಮಕ್ಕಳ ಪ್ರಾಣ ಉಳಿಸುವುದೇ ಮುಖ್ಯವಾಗಿತ್ತು" ಎಂದಿದ್ದಾನೆ.



ಹಾಗೆಯೇ ತನ್ನ ಪ್ರಾಣವನ್ನು ಉಳಿಸಿಕೊಂಡ ಫ್ರಾನ್ಸ್ ದೇಶದ ಪ್ರಯಾಣಿಕನೊಬ್ಬ "ನಮಗೆಲ್ಲ ನೆರವು ನೀಡಿದ್ದು ಫಿಲಿಪೀನಿ ದೇಶದವರಾದ ಕೆಲಸಗಾರರು ಮತ್ತು ಅಡುಗೆಭಟ್ಟರು. ಅವರೆಲ್ಲ ಒಬ್ಬರೊಬ್ಬರ ಕೈ ಹಿಡಿದು, ಮಾನವ ಸರಪಳಿಯಂತೆ ನಿಂತು ನಾವೆಲ್ಲ ರಕ್ಷಾನೌಕೆಗಳನ್ನು ತಲುಪುವಂತೆ ನೋಡಿಕೊಂಡರು" ಎಂದಿದ್ದಾನೆ.

ಹಡಗುಗಳಲ್ಲಿ ನಾವಿಕರಾಗಿಯೋ, ನೌಕರರಾಗಿಯೋ ಫಿಲಪೀನ್ ದೇಶದ ಜನರು ತಮ್ಮ ನಿಸ್ವಾರ್ಥತೆಯನ್ನು, ಧೈರ್ಯವನ್ನು ಮತ್ತು ಮಾನವೀಯತೆಯನ್ನು ಮೆರೆದದ್ದು ಇದೇ ಮೊದಲಲ್ಲ, ಈ ಹಿಂದೆ ಇಂತಹದ್ದೇ ಇನ್ನೊಂದು ಪ್ರಕರಣ ನೆಡೆದಿತ್ತು.

ಅದು 1996. ಕೆನಡಾ ದೇಶಕ್ಕೆ ಮಾಲು ಸಾಗಿಸುತ್ತಿದ್ದ ಟೈವಾನ್ ಮಾಲೀಕತ್ವದ ಸರಕು ಹಡಗಿನಲ್ಲಿ ಫಿಲಪೀನ್ ದೇಶದ ಹಲವು ನೌಕರರಿದ್ದರು. ಅವರಲ್ಲಿ ರೋಡೋಲ್ಫೋ ಮಿಗುಯೆಲ್ ಒಬ್ಬ. ಒಂದು ದಿನ ರೋಡೋಲ್ಫೋ ಹಡಗಿನಲ್ಲಿದ್ದಾಗ ರೊಮಾನಿಯಾ ದೇಶದ ಇಬ್ಬರು ಕಳ್ಳ ಪ್ರಯಾಣಿಕರು ಆತನ ಕಣ್ಣಿಗೆ ಬಿದ್ದರು. ಕೂಡಲೆ ಅವರ ವಿಷಯವನ್ನು ರೋಡೋಲ್ಫೋ ಟೈವಾನ್ ದೇಶದ ತನ್ನ ಹಿರಿಯ ಅಧಿಕಾರಿಗಳಿಗೆ ತಿಳಿಸಿದ.




ಆಗ ಟೈವಾನ್ ದೇಶದವರು ಒಂದು ಸಣ್ಣ ನೌಕೆಯಲ್ಲಿ ಆ ಇಬ್ಬರು ಕಳ್ಳ ಪ್ರಯಾಣಿಕರನ್ನು ಸಮುದ್ರದಲ್ಲಿ ತೇಲಿಬಿಟ್ಟರು. ಅವರಿಬ್ಬರು ವಿಧಿ ಇಲ್ಲದೆ ಸಮುದ್ರದಲ್ಲೇ ಸತ್ತು ಹೋಗುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿತ್ತು. ಟೈವಾನ್ ದೇಶದವರ ಈ ಅಮಾನವೀಯತೆಯನ್ನು ಕಂಡು ಫಿಲಪೀನ್ ನೌಕರರು ದಂಗಾಗಿದ್ದರು.

ಸರಕು ನೌಕೆ ತನ್ನ ಪ್ರಯಾಣವನ್ನು ಮುಂದುವರೆಸಿತು. ಇದಾದ ಕೆಲವು ದಿನಗಳ ನಂತರ ಮತ್ತೆ ರೋಡೋಲ್ಫೋನಿಗೆ ಮತ್ತೊಬ್ಬ ಕಳ್ಳ ಪ್ರಯಾಣಿಕ ಅದೇ ಹಡಗಿನಲ್ಲಿ ಸಿಕ್ಕಿದ. ತಾನು ಈ ಹಿಂದಿನಂತೆ ತನ್ನ ಕರ್ತವ್ಯವನ್ನು ಪಾಲಿಸಿ ತನ್ನ ಹಿರಿಯ ಅಧಿಕಾರಿಗಳಿಗೆ ಹೇಳಿದರೆ ಈತನಿಗೂ ಸಾವೇ ಗ್ಯಾರಂಟಿ ಎಂದು ನಿರ್ಧರಿಸಿದ. ರೋಡೋಲ್ಫೋ ಆತನನ್ನು ರಕ್ಷಿಸಿದನಲ್ಲದೆ ತನ್ನ ಫಿಲಪೀನ್ ಮಿತ್ರರಿಗೂ ಆತನ ಬಗ್ಗೆ ತಿಳಿಸಿದ. ಈ ಹಿಂದೆ ಇನ್ನಿಬ್ಬರು ಕಳ್ಳ ಪ್ರಯಾಣಿಕರಿಗೆ ಆದ ಗತಿಯೇ ಈತನಿಗೂ ಆಗಬಾರದೆಂದು ನಿರ್ಧರಿಸಿದ ಅವರೆಲ್ಲರೂ ಜೊತೆಗೂಡಿ ರೊಮಾನಿಯಾ ದೇಶದ ಆ ಕಳ್ಳ ಪ್ರಯಾಣಿಕರನ್ನು ಬಚ್ಚಿಟ್ಟರು. ಪ್ರತಿದಿನ ಸರದಿ ಮೇಲೆ ಆತನಿಗೆ ಊಟ ನೀಡಿದರು. ಅವರ ಬಗ್ಗೆ ತಮ್ಮೊಳಗೇ ಮಾತನಾಡಿಕೊಳ್ಳಲು ಅವರು ಒಂದು 'ಕೋಡ್'ಅನ್ನೇ ಸೃಷ್ಟಿಸಿದರು. ಕಳ್ಳ ಪ್ರಯಾಣಿಕನ ಬಗ್ಗೆ ವಿಚಾರಿಸುವಾಗ "ಇವತ್ತು ಗಿಣಿಗೆ ಊಟ ಹಾಕಿದೆಯಾ?", "ಗಿಣಿಯನ್ನು ನೋಡಿದೆಯಾ?" ಎಂದು ಕೇಳುತ್ತಿದ್ದರು.

ಸರಕು ನೌಕೆ ಕೆನಡಾ ದೇಶವನ್ನು ತಲುಪಿದ ತಕ್ಷಣ ಅವರು ಸ್ಥಳೀಯ ಪೊಲೀಸರಿಗೆ ಕಳ್ಳ ಪ್ರಯಾಣಿಕನ ಬಗ್ಗೆ ಹೇಳಿದರಲ್ಲದೆ, ಇನ್ನಿಬ್ಬರನ್ನು ಸಮುದ್ರದ ಮಧ್ಯೆ ಟೈವಾನ್ ದೇಶದ ನೌಕರರು ಬಿಟ್ಟುಬಂದದ್ದನ್ನೂ ವಿವರಿಸಿದರು. ಕೂಡಲೇ ರೋಮಾನಿಯ ದೇಶದ ಕಳ್ಳ ಪ್ರಯಾಣಿಕನಿಗೆ ರಕ್ಷಣೆ ಸಿಕ್ಕಿತು ಮತ್ತು ಟೈವಾನ್ ದೇಶದ ನೌಕರರನ್ನು ಬಂಧಿಸಲಾಯಿತು.'

ಆದರೆ ಈ ಮಾನವೀಯ ಕತೆ ಒಂದು ರೀತಿಯ ದುರಂತದಲ್ಲಿ ಕೊನೆಗೊಂಡಿತು. ತನ್ನ ದೇಶದ ನೌಕರರ ವಿರುದ್ಧ ದೂರು ನೀಡಿದ್ದಕ್ಕೆ ಟೈವಾನ್ ದೇಶದ ಕಂಪನಿ ಈ ಫಿಲಿಪೀನ್ ದೇಶದ ನೌಕರರನ್ನೇ ಕೆಲಸದಿಂದ ವಜಾ ಮಾಡಿತು...




# ಅಪಾಯದಲ್ಲೂ ಮಾನವೀಯತೆ ಮೆರೆದ ಮಹಿಳೆ

ಕೊಸ್ಟ ಕಾನ್‌ಕೋರ್ಡಿಯಾ ಮುಳುಗುತ್ತಿದೆ ಎಂದು ಅದರಲ್ಲಿದ್ದ ನಾಲ್ಕು ಸಾವಿರಕ್ಕೂ ಹೆಚ್ಚು ಜನರಿಗೆ ಗೊತ್ತಾದಾಗ ಸಹಜವಾಗಿಯೇ ಎಲ್ಲರಲ್ಲೂ ಆತಂಕ ಆವರಿಸಿತು. ಹಡಗಿನೆಲ್ಲೆಡೆ ಕೂಗಾಟ, ಆತಂಕ, ಚೀರಾಟ, ಗಲಭೆ ನಡೆಯುತ್ತಿತ್ತು. ಆದಷ್ಟು ಬೇಗನೆ ತಾವು ರಕ್ಷಾನೌಕೆಯಲ್ಲಿ ಜಾಗ ಪಡೆದು ಬಚಾವಾದರೆ ಸಾಕು ಎಂದು ಎಲ್ಲರೂ ಹವಣಿಸುತ್ತಿದ್ದರು. ಆ ಕಾರಣಕ್ಕೇ ರಕ್ಷಾನೌಕೆಗಳಲ್ಲಿ ಜಾಗ ಪಡೆಯಲು ಪೈಪೋಟಿ ನಡೆಯಿತು.

ಇಷ್ಟೆಲ್ಲ ಗೊಂದಲಗಳ ನಡುವೆ ಗೇಬ್ರಿಯಲ್ ಗ್ರೂಬ್ ಎಂಬ ಮಹಿಳೆ ಮತ್ತು ಆಕೆಯ ಸ್ನೇಹಿತೆ ಆಂಗಲಿಕಾ ಬ್ಲಾಂಕ್ ತಾಳ್ಮೆಯಿಂದ ರಕ್ಷಾನೌಕೆಯನ್ನು ಹತ್ತಲು ತಮ್ಮ ಸರದಿಗಾಗಿ ಕಾಯುತ್ತಿದ್ದರು. ಇನ್ನೇನು ಅವರಿಬ್ಬರೂ ರಕ್ಷಾನೌಕೆಯನ್ನು ಏರಬೇಕು... ಅದೇಕ್ಷಣ ಗಾಲಿ ಕುರ್ಚಿಗಳಲ್ಲಿದ್ದ ಮೂವರು ಅಂಗವಿಕಲರು ಅವರಿದ್ದಲ್ಲಿಗೆ ಬಂದರು. ಆಗ ಗೇಬ್ರಿಯಲ್ ಮತ್ತು ಆಂಗಲಿಕಾ ತಮ್ಮ ಸರದಿಯನ್ನು ಬಿಟ್ಟುಕೊಟ್ಟು ಆ ಮೂವರು ರಕ್ಷಾನೌಕೆಯನ್ನು ತಮಗಿಂತ ಮೊದಲು ಹತ್ತಬೇಕೆಂದು ಒತ್ತಾಯ ಮಾಡಿದರು. ಅವರಿಬ್ಬರ ಬಯಕೆಯಂತೆ ಆ ಮೂವರು ರಕ್ಷಾನೌಕೆಯನ್ನು ಏರಿದರು. ಅದಾದ ಮರುಕ್ಷಣವೇ ಹಡಗು ವಾಲಿದ್ದರಿಂದ ಗೇಬ್ರಿಯಲ್ ಮತ್ತು ಆಂಗಲಿಕಾ ಆಯತಪ್ಪಿ ಹಡಗಿನ ಮತ್ತೊಂದು ದಿಕ್ಕಿನತ್ತ ಜಾರಿ ಬಿದ್ದರು. ಆಂಗಲಿಕಾ ಅದು ಹೇಗೋ ತನ್ನ ಪ್ರಾಣವನ್ನು ಕಾಪಾಡಿಕೊಂಡು ಕೊನೆಗೂ ದಡ ಸೇರಿದಳು. ಆದರೆ ಆಕೆಯೊಂದಿಗೆ ಜಾರಿ ಬಿದ್ದ ಆಕೆಯ ಗೆಳತಿ 52 ವರ್ಷದ ಗೇಬ್ರಿಯಲ್ಲಾ ಆ ಕ್ಷಣ ನಾಪತ್ತೆಯಾದವಳು ಇವತ್ತಿಗೂ ಪತ್ತೆಯಾಗಿಲ್ಲ.

ಗಾಲಿ ಕುರ್ಚಿಯಲ್ಲಿದ್ದ ಅಂಗವಿಕಲರ ಜೀವಕ್ಕೆ ಆದ್ಯತೆ ನೀಡಿದ ಗೇಬ್ರಿಯಲ್ಲಾ ತನ್ನ ಪ್ರಾಣವನ್ನೇ ಕಳೆದುಕೊಂಡಳು.



# ಯಡ್ಡಿ ಮಕ್ಕಳ ಮರ್ಜಿ ಕಾಯ್ದ ಸಿಎಂ?

## ಐಎಎಸ್ ವರ್ಗಾವರ್ಗಿಯ ಅಸಲೀ ಮರ್ಮ

ಜನವರಿ 25 ರ ಐಎಎಸ್, ಐಪಿಎಸ್ ವರ್ಗಾವರ್ಗಿಯೆಂಬುದು ನಿಜಕ್ಕೂ ಯಡ್ಡಿ ಸದಾನಂದ ಗೌಡರ ಜಿದ್ದಾಜಿದ್ದಿಯ ಪ್ರತಿಫಲವೆ?

ಯಡಿಯೂರಪ್ಪನವರ ರೆಕ್ಕೆಪುಕ್ಕ ಕತ್ತರಿಸಲೆಂದೇ ಸಿ.ಎಂ. ಸದಾನಂದ ಗೌಡರು ಐಎಎಸ್-ಐಪಿಎಸ್‌ಗಳ ವರ್ಗಾವರ್ಗಿಗೆ ಕೈ ಇಟ್ಟರೆಂದೂ ಯಡ್ಡಿಗೆ ಪರಮಾಪ್ತರ ಅಧಿಕಾರಿಗಳನ್ನೆಲ್ಲ ಎತ್ತಂಗಡಿ ಮಾಡಿ ಆ ಜಾಗಕ್ಕೆ ತಮಗೆ ನಿಷ್ಠರಾಗಿದ್ದವರನ್ನು ತಂದಿದ್ದಾರೆಂದೂ ಈ ಸರ್ಜರಿಯಿಂದಾಗಿ ಯಡ್ಡಿ ಬಣದ ಆರ್ಭಟ ಇನ್ನಷ್ಟು ಅಡಗಲಿದೆಯೆಂದು ಪುಕಾರೆಬ್ಬಿಸುವವರಿಗೆ ಬಹುಶಃ ವಾಸ್ತವದ ಅರಿವಿರಲಿಕ್ಕಿಲ್ಲ.

ಶಿವಮೊಗ್ಗದ ಜಿಲ್ಲಾಧಿಕಾರಿ ವಿ. ಪೊನ್ನುರಾಜ್‌ರನ್ನು ಎತ್ತಂಗಡಿ ಮಾಡಿದ ಮಾತ್ರಕ್ಕೇ ಯಡ್ಡಿ ಇನ್ನಷ್ಟು ಕೆಂಡಾಮಂಡಲರಾಗಿದ್ದಾರೆ, ಸದ್ಯದಲ್ಲೇ ಬಿಜೆಪಿ ಅಂತಃಕಲಹ ಉಲ್ಬಣಿಸಲಿದೆ, ಬೀದಿಕಾಳಗ ತೀವ್ರಗೊಳ್ಳಲಿದೆ; ಇತ್ಯಾದಿ ತಾನೇ ಈ ಪುಕಾರು ಪ್ರಿಯರ ಲೆಕ್ಕಾಚಾರ?


ಹಕೀಕತ್ತೇನೆಂದರೆ-ಜನವರಿ 25 ರಂದು ಸಿಎಂ ಸದಾನಂದ ಗೌಡರು ಹೊರಡಿಸಿದ 26 ಐಎಎಸ್, 24 ಐಪಿಎಸ್, 3 ಕೆಎಎಸ್ ಮತ್ತು ಇಬ್ಬರು ಐಎಫ್‌ಎಸ್ ಅಧಿಕಾರಿಗಳ ವರ್ಗಾವರ್ಗಿಯಿಂದಾಗಿ ಯಡ್ಡಿ ಪರಮಾಪ್ತರ ಕೂದಲು ಕೂಡ ಕೊಂಕಿಲ್ಲ. ಅದು ಸದಾನಂದ ಗೌಡರಿಗಿನ್ನೂ ಯಡ್ಡಿಯನ್ನು ನೇರಾನೇರ ಎದುರು ಹಾಕಿಕೊಳ್ಳುವ ಧೈರ್ಯ ಬಂದಿಲ್ಲ ಎಂಬುದು ಸ್ಪಷ್ಟ ನಿದರ್ಶನ. ಇನ್ನೂ ಹೇಳಬೇಕೆಂದರೆ ಯಡ್ಡಿ ಮಗ ವಿಜಯೇಂದ್ರನ ಆಣತಿ ಮೇರೆಗೇ ಸಿ.ಎಂ. ಗೌಡರು ಈ ವರ್ಗಾವರ್ಗಿಗೆ ಕೈಹಾಕಿದ್ದಾರೆ. ಕೆಣಕಿದರೆ ಎಲ್ಲಿ ಯಡವಟ್ಟಾಗುತ್ತೋ ಎಂಬ ಅಳುಕಿಗೆ ಬಿದ್ದೇ ಮತ್ತೆ ಯಡ್ಡಿಯ ಪರಮಾಪ್ತರಿಗೆ ಸಿಎಂ ಮಣೆ ಹಾಕಿದ್ದಾರೆ.



ಶಿವಮೊಗ್ಗದ ಜಿಲ್ಲಾಧಿಕಾರಿ ಪೊನ್ನುರಾಜ್ ವಿಷಯಕ್ಕೇ ಬಂದರೆ ಆತ ಯಾವಾಗಲೂ ಯಡ್ಡಿಗೆ ನಿಯತ್ತಾಗಿರಲಿಲ್ಲ. ಪೊನ್ನುರಾಜ್ ಹೇಳಿಕೇಳಿ ಯಾವುದೇ ಲಾಬಿಗೆ ಮಣಿಯದ, ಯಾರಿಗೂ ಮಸ್ಕಾ ಹೊಡೆಯದ, ತಟಸ್ಥ ಧೋರಣೆಯ ಚಾಲಾಕಿ ಅಧಿಕಾರಿ. ಯಡ್ಡಿ ಮುಖ್ಯಮಂತ್ರಿಯಾಗಿದ್ದಷ್ಟು ಕಾಲ ಅತಿವಿಧೇಯನಾಗಿ ನಟಿಸುತ್ತಿದ್ದ ಪೊನ್ನುರಾಜ್, ಯಡ್ಡಿ ಜೈಲು ಪಾಲಾಗಿದ್ದೇ ತಡ, ಬದಲಾದರು. ರಿಯಲ್ ಎಸ್ಟೇಟ್ ಸಂಬಂಧಿ ಮೂರ್‍ನಾಲ್ಕು ಭೂ ವ್ಯವಹಾರಗಳಲ್ಲಿ ಯಡ್ಡಿ ಮಗ ರಾಘುಗೆ ಡೋಂಟ್‌ಕೇರ್ ಎಂದುಬಿಟ್ಟರು. ತನಗೆ ಅಧಿಕಾರ ಕೈತಪ್ಪಿದ್ದೇ ಪೊನ್ನುರಾಜ್ ವರ್ತನೆಯಲ್ಲಿ ಬದಲಾಗಿದ್ದು ಯಡ್ಡಿ ಮತ್ತವರ ಮಕ್ಕಳ ಹೊಟ್ಟೆ ಸಂಕಟ ಹೆಚ್ಚಿಸಿತು.

ಇದೇ ಪೊನ್ನುರಾಜ್ ಎತ್ತಂಗಡಿಗೆ ಕಾರಣವೇ ಹೊರತು ಯಡ್ಡಿಗೆ ಆತ ನಿಯತ್ತಾಗಿದ್ದ ಕಾರಣಕ್ಕಲ್ಲ. ಈಗ ಆ ಜಾಗಕ್ಕೆ ಕೆ.ಪಿ. ಮೋಹನ್‌ರಾಜ್ ಎಂಬ ಯುವ ಐಎಎಸ್‌ನನ್ನು ತರಲಾಗಿದೆ. ಇದೂ ಕೂಡ ಯಡ್ಡಿ ಮಕ್ಕಳ ಮೂಗಿನ ನೇರಕ್ಕೇ ನಡೆದಿದೆ. ಯಡ್ಡಿ-ಮಕ್ಕಳ ಮರ್ಜಿಗೆ ತಕ್ಕಂತೆ ನಡೆದರಷ್ಟೇ ಮೋಹನ್ ರಾಜ್ ಆ ಹುದ್ದೆಯಲ್ಲಿ ಮುಂದುವರಿಯಲು ಸಾಧ್ಯ. ಇಲ್ಲವೆಂದರೆ ಇನ್ನಾರು ತಿಂಗಳಿಗೇ ಶಿವಮೊಗ್ಗಕ್ಕೆ ಹೊಸ ಜಿಲ್ಲಾಧಿಕಾರಿ ಗ್ಯಾರಂಟಿ.

ಈ ಹಿಂದೆ ಯಡ್ಡಿ ಸಿಎಂ ಆಗಿದ್ದಾಗ ಮುಖ್ಯಮಂತ್ರಿಗಳ ಕಚೇರಿಯಲ್ಲಿದ್ದು ಯಡ್ಡಿಯ ಅಕ್ಕಪಕ್ಕದಲ್ಲೇ ಠಳಾಯಿಸಿಕೊಂಡಿದ್ದ ಬಿ.ಎಸ್. ಕೃಷ್ಣಯ್ಯರನ್ನು ಯಡ್ಡಿಯೇ ನಿಂತು ಕಾರವಾರಕ್ಕೆ ಹಾಕಿಸಿಕೊಂಡಿದ್ದರು. ಬಹುಶಃ ಅಸ್ನೋಟಿಕರ್ ಮತ್ತು ಕಾಗೇರಿಯಂಥ ಮಂತ್ರಿಗಳ ಮುಂದೆ ಕೃಷ್ಣಯ್ಯ ಏಗುವುದು ಕಷ್ಟಕರವಾಗಿರಬೇಕು. ಅವರೇ ಮೇಲೆ ಬಿದ್ದು ಯಡ್ಡಿ ಮಕ್ಕಳ ಮೂಲ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಕಮೀಷನರ್ ಹುದ್ದೆಗೆ ಬಂದಿದ್ದಾರೆ. ಆ ಖಾತೆ ಆದಾಯವೂ ಇಲ್ಲ ಆ ಕಾರಣಕ್ಕೇ ತಲೆನೋವೂ ಕಮ್ಮಿ!



ಇದೇ ಮುಜರಾಯಿಗೆ ಕಮೀಷನರ್ ಆಗಿದ್ದ ಬಿ.ಜಿ.ನಂದಕುಮಾರ್ ಯಡ್ಡಿಯ ಮತ್ತೊಬ್ಬ ಅನುಯಾಯಿ. ಹಾಗೊಮ್ಮೆ ಅವರನ್ನು ಹಣಿಯಬೇಕೆಂದು ಸಿ.ಎಂ. ಎಣಿಸಿದ್ದೇ ಆಗಿದ್ದರೆ ಬಿ.ಬಿ.ಎಂ.ಪಿ.ಯ ಹೆಚ್ಚುವರಿ ಆಯುಕ್ತರಂಥ ಪ್ರತಿಷ್ಠಿತ, ಫಲವತ್ತಾದ ಹುದ್ದೆಗೆ ಏಕೆ ತರುತ್ತಿದ್ದರು? ನಿನ್ನೆಮೊನ್ನೆಯತನಕ ಚಿಕ್ಕಬಳ್ಳಾಪುರಕ್ಕೆ ಜಿಲ್ಲಾಧಿಕಾರಿಯಾಗಿದ್ದ ವಿ.ಯಶವಂತ್ ಈಗ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ, ಯಡ್ಡಿ ಮಕ್ಕಳ ಜೊತೆ ಯಶವಂತನ ಒಡನಾಟವಿದೆ. ಅದು ಸಿ.ಎಂ. ಗೌಡರಿಗೂ ಗೊತ್ತಿದೆ. ಇಲ್ಲದಿದ್ದರೆ ಮುಖ್ಯಮಂತ್ರಿ ಕಚೇರಿಗೇಕೆ ಹಾಕುತ್ತಿದ್ದರು?

ಯಾವ ಲೆಕ್ಕಾಚಾರದಲ್ಲಿ ನೋಡಿದರೂ ಯಡ್ಡಿಯ ಕಣ್ಣುರಿಗೆ ಕಾರಣವಾಗಬಲ್ಲ, ಒಂದೇ ಒಂದು ವರ್ಗಾವರ್ಗಿಯೂ ಈ ಸಲ ಪಟ್ಟಿಯಲ್ಲಿಲ್ಲ. ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವರ್ಷದ ಬಜೆಟ್ಟೇ 1200 ಕೋಟಿ. ಅದಕ್ಕೀಗ ಅಧ್ಯಕ್ಷನಾಗಿರುವುದು ಯಡ್ಡಿಯ ಪಕ್ಕಾ ಬಂಟ ಕೃಷ್ಣಯ್ಯಶೆಟ್ಟಿ. ಹಿಡಿ ಮಣ್ಣೆ ಸಿಕ್ಕರೂ ಅದರಲ್ಲೇ ಎಣ್ಣೆಗುಂಜುವ ಶೆಟ್ಟಿಗೆ ಮಗ್ಗಲ ಮುಳ್ಳಾಗಿದ್ದದ್ದು ಮಂಡಳಿಗೆ ಎಂ.ಡಿ. ಯಾಗಿದ್ದ ಐಎಎಸ್ ಅಧಿಕಾರಿ ಕಠಾರಿಯಾ ಎತ್ತಂಗಡಿ ಮಾಡಿ ಆ ಜಾಗಕ್ಕೆ ತನ್ನದೇ ಕೋಲಾರ ಮೂಲದ ಎನ್.ಸಿ.ಮುನಿಯಪ್ಪ ಎಂಬ ಬಕಾಸುರ ಐಎಎಸ್‌ನನ್ನು ಹಾಕಿಸಿಕೊಡುವಂತೆ ಕಳೆದ ಆರು ತಿಂಗಳಿಂದ ಕೃಷ್ಣಯ್ಯಶೆಟ್ಟಿ ಗುರು ಯಡ್ಡಿಗೆ ದುಂಬಾಲು ಬಿದ್ದಿದ್ದ. ಈಗ ಸದಾನಂದ ಗೌಡ ಅದಕ್ಕೆ ತಥಾಸ್ತು ಎಂದಿದ್ದಾರೆಂದರೆ ಏನರ್ಥ?

ಹಾನೀಯ ನಿಗಮದ ಎಂ.ಡಿ.ಯಾಗಿದ್ದ. ಶಿವಲಿಂಗ ಮೂರ್ತಿಯವರನ್ನು ಸದಾನಂದ ಗೌಡರು ಎತ್ತಂಗಡಿ ಮಾಡಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಹಾಕಿದನ್ನು ಕೂಡ ರೇಣುಕಾಚಾರ್ಯನಿಗೆ ಸಿ.ಎಂ. ಹಾಕಿದ ಬರೆಯಂತೆ ಕಾಣುತ್ತದೆ. ಹೇಳಿಕೇಳಿ ಶಿವಲಿಂಗಮೂರ್ತಿ ನಿಷ್ಠುರಿ ಮತ್ತು ದಕ್ಷ ಅಧಿಕಾರಿ. ಗೆಬರಲು ಅನುವಾಗಬೇಕೆಂದರೆ ಶಿವಲಿಂಗಮೂರ್ತಿಯಂಥ ಪ್ರಾಮಾಣಿಕ ಅಧಿಕಾರಿಯಿದ್ದರೆ ಹೇಗೆ ಸಾಧ್ಯ? ಅದಕ್ಕೆ ಡಾ.ಸಂದೀಪ್‌ದವೆ ಎಂಬ ತಲೆಬುಡ ಗೊತ್ತಿಲ್ಲದವನನ್ನು ತಂದಿದ್ದಾರೆ. ಇದು ರೇಣುಕಾಚಾರ್ಯರಿಗಾದ ವರದಾನವೋ ಅವಮಾನವೋ.

ಮಿಕ್ಕಂತೆ ಯುವಜನ ಸೇವೆಯ ನಿರ್ದೇಶಕ ಹುದ್ದೆಗೆ ಬಂದ ಬಲದೇವ ಕೃಷ್ಣ ಪ್ರವಾಸೋದ್ಯಮದ ಪ್ರಧಾನ ಕಾರ್ಯದರ್ಶಿಯಾದ ಲತಾಕೃಷ್ಣರಾವ್, ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾದ ಪಿ.ಬಿ.ರಾಮಮೂರ್ತಿ, ಅಬಕಾರಿ ಹೆಚ್ಚುವರಿ ಆಯುಕ್ತರಾಗಿ ಬಂದಿರುವ ಎನ್. ಪ್ರಭಾಕರ್, ಇಂಧನ ಖಾತೆಯ ಪ್ರಧಾನ ಕಾರ್ಯದರ್ಶಿಯಾದ ಡಿ.ಎನ್. ನರಸಿಂಹರಾಜು. ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ಕಾರ್ಯದರ್ಶಿಯಾದ ಕೆ. ಅಮರನಾರಾಯಣ. ಮುಂತಾದ ಹುದ್ದೆಗಳೆಲ್ಲವೂ ಬಡ್ತಿಯ ಕಾರಣಕ್ಕಷ್ಟೇ ನಡೆದ ಕಾಟಾಚಾರದ ವರ್ಗಾವಣೆಗಳು. ಇದರಲ್ಲಿ ವಿಶೇಷವಾಗಿ ರಾಜಕೀಯವಾಗಲಿ ಏನೂ ಇಲ್ಲ.

ಇಲ್ಲಿ ಗಮನಿಸಲೇಬೇಕಾದ ಮತ್ತೊಂದು ಅಂಶವೆಂದರೆ ವಿ. ಮಂಜುಳರಂಥ ಪ್ರಾಮಾಣಿಕ ಅಧಿಕಾರಿಣಿಯನ್ನು ಆಕೆಯ ಕರ್ತವ್ಯನಿಷ್ಠೆ ಕಾರಣಕ್ಕೇ ಮತ್ತೆ ಎತ್ತಾಕಿರುವುದು. ಈ ಹಿಂದೆ ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆದಿದ್ದ ನೂರಾರು ಭೂಕಬಳಿಕೆ ಪ್ರಕರಣಗಳಿಗೆ ಕೈಹಾಕಿದ ಒಂದೇ ತಪ್ಪಿಗೆ ಕಂದಾಯ ಸಚಿವಾಲಯದಿಂದ ಕಿತ್ತು ಭೂಮಾಪನದ ನಿರ್ದೇಶಕಿಯನ್ನಾಗಿ ಎತ್ತಂಗಡಿ ಮಾಡಿದ್ದು ಆಗ ಮುಖ್ಯಮಂತ್ರಿಯಾಗಿದ್ದ ಯಡ್ಡಿ. ಈಗ ಮತ್ತೆ ಸರ್ವೇ ಇಲಾಖೆಯಿಂದ ಕಿತ್ತು ಪಶುಸಂಗೋಪನೆಯಂತೆ ನಾಮಕಾವಸ್ತೆ ಹುದ್ದೆಗೆ ಹಾಕಿ ಬಾಯಿ ಮುಚ್ಚಿಸಲಾಗಿದೆ.

ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಂಡ್ ಕಮೀಷನರ್ ಆಫ್ ಸ್ಟಾಂಪ್ಸ್ ಹುದ್ದೆಗೆ ಡಾ.ವಿ. ಚಂದ್ರಶೇಖರ್ ಎಂಬ ಕಿಲಾಡಿ ಅಧಿಕಾರಿ ವಹಿಸಿದ್ದು ಕೂಡ ಯಡ್ಡಿಯ ಕೃಪೆಯಿಂದಲೇ!

ಈ ಪೈಕಿ ಹೀನಾಯಸ್ಥಿತಿಯೆಂದರೆ ಅದು ಖರ್ಗೆಯ ಪರಮಾಪ್ತ ಕೆ. ಶಿವರಾಮು ಎಂಬ ನಟಭಯಂಕರ ಐಎಎಸ್ ಸಾಹೇಬನದ್ದು. ಪಶು ಸಂಗೋಪನಾ ಇಲಾಖೆಯಲ್ಲಿ ದನದ ಔಷಧಿ, ನಾಯಿಗಳ ಇಂಜೆಕ್ಷನ್ ಮೇವು ಆಸ್ಪತ್ರೆಗಳ ಖರೀದಿಯ ಭಯಂಕರ ಪಟ್ಟಿಯನ್ನೇ ರೆಡಿ ಮಾಡಿ ಇನ್ನೇನು ಊಟಕ್ಕೆ ಕೂರಬೇಕೆನ್ನುವಷ್ಟರಲ್ಲೇ ಶಿವರಾಮು ಎತ್ತಂಗಡಿಯಾಗಿದೆ. ನಯಾಪೈಸೆಯ ಖಮಾಯಿಯಿಲ್ಲದ, ಪಾಳುಬಿದ್ದ ಫ್ಯಾಕ್ಟರಿಗಳನ್ನು ಸಂಭಾಳಿಸುವ ಸಾರ್ವಜನಿಕ ಉದ್ದಿಮೆಗಳ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಬಂದು ಶಿವರಾಮು ಒಂದೋ ತನ್ನ ಗಾಯ ನೆಕ್ಕುತ್ತಾ ಕೂರಬೇಕು ಅಥವಾ ತನ್ನ ಗತವೈಭವ ನೆನೆದು ಕಣ್ಣೀರಿಡಬೇಕು.

ಯಡ್ಡಿಯ ಪರಮಾಪ್ತರು, ಮುಖ್ಯಮಂತ್ರಿ ಕಛೇರಿಯ ಅಧಿಕಾರಿಗಳು, ಜಾತಿಯ ಐಎಎಸ್‌ಗಳು ಯಾರೊಬ್ಬರನ್ನೂ ಅಲ್ಲಾಡಿಸುವ ಧೈರ್ಯಕ್ಕೆ ಸಿ.ಎಂ. ಕೈ ಹಾಕಿಲ್ಲವೆಂದ ಮೇಲೆ ಇದು ಯಡ್ಡಿಯ ರೆಕ್ಕೆಪುಕ್ಕ ಕತ್ತರಿಸುವ ವರ್ಗಾವರ್ಗಿ ಹೇಗಾಗುತ್ತದೆ? ಇದರರ್ಥ ಸದಾನಂದ ಗೌಡರಿಗಿನ್ನೂ ಆ ಧೈರ್ಯ ಬಂದಿಲ್ಲ, ಇನ್ನೂ ಯಡ್ಡಿಯ ಮರ್ಜಿಯಲ್ಲೇ ಇದ್ದಾರೆ. ಸಿಟ್ಟು ಒಡಲಾಳದಲ್ಲೇ ಕುದಿಯುತ್ತಿದೆಯಾದರೂ ಇನ್ನೂ ಸ್ಫೋಟಗೊಂಡಿಲ್ಲ. ಏಕೆಂದರೆ ಇನ್ನೂ ಅಂತಿಮ ದಾಳಿಗೆ ಯಡ್ಡಿಯಾಗಲಿ, ಸದಾನಂದ ಗೌಡರಾಗಲಿ ಕೈ ಹಾಕಿಲ್ಲ.

• ರಾ. ಸೋಮನಾಥ್

## ಎತ್ತಂಗಡಿಯಾದ ಐಪಿಎಸ್‌ಗಳೆಲ್ಲ ಎಂಥವರು?


24 ಮಂದಿ ಐಪಿಎಸ್‌ಗಳ ವರ್ಗಾವರ್ಗಿಯ ಪಟ್ಟಿಯನ್ನು ತಡಕಾಡಿದರೂ ಕೂಡ ಇದರಲ್ಲಿ ... ಹಾಳಯಕ್ಕೆ ನಿಷ್ಠವಾಗಲಿ, ಹಿನ್ನಡೆಯಾಗಲಿ ... ಕಾಣಿಸುತ್ತಿಲ್ಲ. ರಾಯಚೂರಿಗೆ ಎಸ್ಪಿಯಾಗಿರುವ ಬಿ... ಅಂದರಿಕಿ ಮಂಚಿವಾಡು ಎಂಬಂತಿರುವ ಪುಕ್ಕಲ ಅಧಿ... ಪಾಪ ಅಪಾರ ಬಾಧೆ ಬಿದ್ದು ರಾಯಚೂ... ಬಂದಿದ್ದಾರೆಯೇ ಹೊರತು ಇದರಲ್ಲಿ ... ಮರ್ಜಿಯಾಗಲಿ ಯಡ್ಡಿಯ ಅವಕೃಪೆಯಾಗಲಿ ... ಬಂತು?

ಆಂತರಿಕ ಭದ್ರತೆಗೆ ಡಿಐಜಿಯಾಗಿರುವ ಹೇಮ... ನಿಂಬಾಳ್ಕರ್ ಗಣಿ ರೆಡ್ಡಿಗಳ ಪರಮಾಪ್ತರಾದರೂ ಈಗ... ಸಿಕ್ಕಿರುವುದು ನಿಷ್ಪ್ರಯೋಜಕ ಹುದ್ದೆ. ಕೆಎಸ್ಆರ್ಟಿಸಿಯ ಡಿಐಜಿಯಾದ ರವೀಂದ್ರ ಪ್ರಸಾದ್ ಮತ್ತು ನೇಮಕಾತಿ ಮತ್ತು ತರಬೇತಿಯ ಡಿಐಜಿ ಹುದ್ದೆಗೆ ಬಂದ ಬಿ. ಶಿವಕುಮಾರ್ ಇಬ್ಬರೂ ಬಡ್ತಿ ಗಿಟ್ಟಿಸಿ ಬಂದಿದ್ದಾರೆಯೇ ಹೊರತು ಇದರಲ್ಲಿ ವಿಶೇಷವಾಗಲಿ ರಾಜಕೀಯವಾಗಲಿ ಇಲ್ಲವೇ ಇಲ್ಲ. ಮಾನವ ಹಕ್ಕು ಘಟಕದ ಐಜಿಪಿ ಸುನಿಲ್ ಅಗರ್‌ವಾ... ಸಿಐಡಿ ಎಸ್ಪಿ ದೇವಜ್ಯೋತಿ ರೇ, ಇಂಟಲಿಜೆನ್ಸ್ ಎಸ್ಪಿ ವಿಕಾಸ್ ಕುಮಾರ್, ಮೈಸೂರು ಎಸ್ಪಿ ದಿಲೀಪ್, ರಾಮನಗರದ ಎಸ್ಪಿ ಅನುಪಮ್ ಅಗರವಾಲ್, ಕೆಜಿ... ಎಸ್ಪಿ ರೋಹಿಣಿ ಕಟೋಚ್; ಮುಂತಾದವರೆಲ್ಲ ಯಾವುದೇ ಮರ್ಜಿಗೆ ಕಾಯದೆ, ಯಾರೇ ಮರ್ಜಿಗೆ ಕಾಯದೆ ಯಾರೇ ಗಾಡ್‌ಫಾದರ್‌ಗಳಿಲ್ಲದ 'ಅನಾಥ' ಐಪಿಎಸ್‌ಗಳೇ ಹೊರತು ರಾಜಕೀಯವಾಗಿ ಪ್ರಬಲರಾಗಲಿ, ಅನಿವಾರ್ಯವಾಗಲಿ ಅಲ್ಲದವರು.



ಹೇಮ...

ಹೆಚ್ಚೆಂದರೆ ರಾಯಚೂರಿಗೆ ಎಸ್ಪಿಯಾಗಿದ್ದ ಎ... ಶಶಿಕುಮಾರ್ ಎಂಬ ಚಿಗುರು ಮೀಸೆಯ ಒಕ್ಕಲಿಗ ಐಪಿಎಸ್‌ರನ್ನು ದೇವೇಗೌಡರೇ ಹೇಳಿ ಚಿಕ್ಕಮಗಳೂರಿಗೆ ಹಾಕಿಸಿಕೊಂಡಿರಬಹುದು... ತಮ್ಮ ಯಾರೋ ಸಂಬಂಧಿಯೊಬ್ಬಳ ಮ... ತಾಳೀಭಾಗ್ಯದ ಪ್ರಯುಕ್ತ ದೇವೇಗೌಡರ ಕಣ್ಣು ಈ ಯುವ ಐಪಿಎಸ್ ಮೇಲೆ ಬಿದ್ದಿರಬಹುದು. ಅನ... ಬಣದ ಅಭಯ್ ಪಾಟೀಲರಿಗಾಗಿ ಸಂದೀಪ್ ಪಾಟೀಲರನ್ನು ಬೆಳಗಾವಿಯಿಂದೇನಾದರೂ ಎತ್ತ... ಮಾಡಿದರೆ ಕತ್ತಿ, ಸವದಿ, ಸಂಸದ ಅಂಗಡಿ ಸೇರಿದ ಬೆಳಗಾವಿಯೇ ದಂಗೆ ಏಳುವ ಸೂಚನೆಯಿದ್ದದ್ದರಿ... ಹುಷಾರಾದ ಸದಾನಂದ ಗೌಡ ಇಲ್ಲೂ ಯಡ್ಡಿಯ ಮರ್ಜಿಯನ್ನೇ ಕಾಯ್ದಿದ್ದಾರೆ.



ಎತ್ತಿಂದೆತ್ತ ಲೆಕ್ಕ ಹಾಕಿದರೂ ಐಪಿಎಸ್ ವರ್ಗಾವಣೆಯಲ್ಲಿ ಯಡ್ಡಿ ಬಣಕ್ಕೆ ಮುಖಭಂಗವಾಗ ಹಿನ್ನಡೆಯಾಗಲಿ ಕಾಣಿಸುತ್ತಿಲ್ಲ.

▶8

# ಹೆಮ್ಮಾರಿ ಮುನಿಯಪ್ಪ

### ಕನಕಪುರ ಕ್ವಾರಿ ಹಗರಣ

ಕನಕಪುರ ದಲಿತರಿಗೆ ಸೇರಿದ ರಘು ಗ್ರಾನೈಟ್ ಭೂಮಿಯನ್ನು ದಲಿತರಿಗೆ ಮೋಸ ಮಾಡಿ ಲಪಟಾಯಿಸಿ, ತಮಿಳುನಾಡಿನ ಇಬ್ಬರು ಪಾಲುದಾರರನ್ನು ವಂಚಿಸಿದ ಹಿನ್ನೆಲೆಯಲ್ಲಿ ಈತನ ವಿರುದ್ಧ ಕೋಡಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿದೆ.

ದೊಡ್ಡಬಳ್ಳಾಪುರ ಕ್ವಾರಿ ಭೂಹಗರಣ: ಮುನಿಯಪ್ಪ ತನ್ನ ಮೊದಲನೇ ದಲಿತ ಪತ್ನಿ ಜೀವಂತವಾಗಿರುವಾಗಲೇ ಆಕೆಗೆ ಡೈವೋರ್ಸ್ ನೀಡದೆ ಎರಡನೇ ವಿವಾಹವಾಗಿದ್ದು, ಕ್ರಿಶ್ಚಿಯನ್ ಪಂಗಡದ ಎರಡನೇ ಪತ್ನಿ ಸೆಬಾಸ್ಟೀನ್ ಚೊರೊಟ್ಟೊ ಹೆಸರಿಗೆ ಸರ್ಕಾರದಿಂದ ಬಂಡೆ ಲೈಸೆನ್ಸ್ ಪಡೆದಿದ್ದರು. ಅದು ಪರಿಸರ ಕಾಯ್ದೆಯಂತೆ ವಜಾ ಆದ ನಂತರ ಆ ವಿಷಯ ಮುಚ್ಚಿಟ್ಟು ಧಾರ್ಮಿಕ ಅಲ್ಪಸಂಖ್ಯಾತ ಮುಸ್ಲಿಂ ಪಂಗಡಕ್ಕೆ ಸೇರಿದ ಸೈಯ್ಯದ್ ಬಷೀರ್ ಅಹ್ಮದ್ ಎಂಬುವವರಿಂದ ಲಕ್ಷಾಂತರಗಟ್ಟಲೇ ಹಣ ಪಡೆದು ವಂಚಿಸಲಾಗಿದೆ. ವಂಚನೆ ಪ್ರಕರಣದಲ್ಲಿ ಮುನಿಯಪ್ಪ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿದೆ.

ವಿ.ಶಂಕರ್ ಭೂಹಗರಣ: ದಲಿತ ಮುಖಂಡ ವಿ.ಶಂಕರ್‌ರವರಿಗೆ ಸೇರಿದ ಕೋಟ್ಯಾಂತರ ರೂ. ಬೆಲೆಬಾಳುವ ಆಸ್ತಿ ಕಬಳಿಸುವ ಸಲುವಾಗಿ ತನ್ನ ಗೂಂಡಾಪಡೆ ಜತೆಗೂಡಿದ ಮುನಿಯಪ್ಪ ಆ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿದಾಗ ಆತನನ್ನು ತಡೆದ ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ ಮಾಡಿದ ಕಾರಣ ಮುನಿಯಪ್ಪ ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿದೆ. ಈ ಗೂಂಡಾಗಿರಿ ಪ್ರಕರಣವು ಮಾಧ್ಯಮಗಳಲ್ಲಿ ಭಿತ್ತರವಾಗಿದೆ.

ನಾಗದೇನಹಳ್ಳಿ ಭೂಹಗರಣ: ಬಡವರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸೇರಿದ ಆಸ್ತಿ ಲಪಟಾಯಿಸುವ ಸಲುವಾಗಿ ಅಲ್ಲಿಗೆ ಅತಿಕ್ರಮ ಪ್ರವೇಶ ಮಾಡಿ ಗೂಂಡಾಗಿರಿ ಮಾಡಿದ್ದರಿಂದಾಗಿ ಮುನಿಯಪ್ಪನ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿದೆ.

ರಾಜನಕುಂಟೆ ಭೂ ಹಗರಣ: ಸಮಾಜ ವಿರೋಧಿ ಭೂ ಮಾಫಿಯಾದೊಂದಿಗೆ ಕೈಜೋಡಿಸಿದ ಮುನಿಯಪ್ಪ ಬಡವರನ್ನು ಅವರ ಭೂಮಿಯಿಂದ ಒಕ್ಕಲೆಬ್ಬಿಸಲು ಗೂಂಡಾಗಿರಿ ಮಾಡಿದಾಗ ರಾಜನಕುಂಟೆ ಪೊಲೀಸ್ ಠಾಣೆಯಲ್ಲಿ ಆತನ ವಿರುದ್ಧ ಎಫ್.ಐ.ಆರ್ ದಾಖಲಾಗಿದೆ.

ಬೈರಸಂದ್ರ ಭೂಹಗರಣ: ದಲಿತರಿಗೆ ಸೇರಿದ ಪಿಟಿಸಿಎಲ್ ವ್ಯಾಪ್ತಿಗೆ ಬರುವ ಭೂಮಿ ಲಪಟಾಯಿಸಲು ಅಕ್ರಮವೆಸಗಿದ ಮುನಿಯಪ್ಪ ವಿರುದ್ಧ ದಲಿತ ಸಂತ್ರಸ್ತರು ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ.

### ದೊಡ್ಡಬಳ್ಳಾಪುರ ಎ.ಐ.ಆರ್ -ಭೂಹಗರಣ

ದೊಡ್ಡಬಳ್ಳಾಪುರ ಎ.ಐ.ಆರ್ ಸಮೀಪ ಆಂಜನಮೂರ್ತಿ ಬಡಾವಣೆ ಹಿಂಭಾಗದಲ್ಲಿ ದಲಿತ... ಸೇರಿದ ಸುಮಾರು 200 ಎಕರೆ ಭೂಮಿಗೆ ಫೋರ್ಜ... ಅಗ್ರಿಮೆಂಟ್ ದಾಖಲೆ ಸೃಷ್ಟಿಸಿದಾಗ ಅಲ್ಲಿನ ದಲಿತರು ಈತನ ವಿರುದ್ಧ ಮೊಕದ್ದಮೆ ಹೂಡಿದ್ದಾರೆ. ಆತನ ಇಂತಹ ಹಲವಾರು ಅಪರಾಧ ಪ್ರಕರಣಗಳಿವೆ.

ಡಾ. ಬಿ.ಆರ್. ಅಂಬೇಡ್ಕರ್, ಕಾನ್ಷಿರಾಂಜಿ, ಮಾಯಾವತಿ, ಬಿ.ಎಸ್.ಪಿ ಯವರಂತ ಗೌರವಾನ್ವಿ... ಹೆಸರುಗಳನ್ನು ಗುರಾಣಿಯಾಗಿಸಿಟ್ಟುಕೊಂಡು, ಪೊಲೀಸ್ ರಕ್ಷಣೆಯಲ್ಲಿ ದಲಿತರ ಮೇಲೆ ಹಲ್ಲೆ, ಕೊ... ಪ್ರಯತ್ನ ಮಾಡಿ, ಅವರ ಆಸ್ತಿ ನುಂಗುವ ಮುನಿಯ... ವಿರುದ್ಧ ಡಜನ್‌ಗಟ್ಟಲೆ ಕ್ರಿಮಿನಲ್ ಕೇಸ್‌ಗಳಾಗಿದ್ದ... ಪೊಲೀಸರು ಸರಿಯಾದ ಕಾನೂನು ಕ್ರಮ ತೆಗೆದುಕೊಳ್ಳದೆ ಬಡದಲಿತರಿಗೆ ತಾವೂ ಅನ್ಯಾಯ ಮಾಡುತ್ತಿದ್ದಾರೆ. ಬಲಿತ ದಲಿತರಿಂದಾಗುವ ಬಡ ದಲಿತರ ಶೋಷಣೆಯನ್ನು ಖಂಡಿಸಿ ಇಂತಹ ಅಪರಾಧಿಗಳನ್ನು ಶಿಕ್ಷೆಗೆ ಒಳಪಡಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು, ನಾಡಿನ ದಲಿತ ಸಂಘಟನೆಗಳು, ಪ್ರಗತಿಪರರು ಎಲ್ಲರ ನೈತಿಕ ಹೊಣೆಯಾಗಿದೆ.

## ಮುಸ್ಲಿಂ ಕುಟುಂಬದ ಆತ್ಮಹತ್ಯೆ

# ಈ ಸಾವು ನ್ಯಾಯವೇ?

ರ್ಷದ ಮೊದಲ ಅಮಾವಾಸ್ಯೆಯ ಮಾರನೇ ದಿನ ಗಾಲ ಸಮೀಪದ ಬೋಳೇಗೌಡನ ದೊಡ್ಡಿ ಸಾಲು ತೆಣಗಳ ಸೂತಕಕ್ಕೆ ಸಾಕ್ಷಿಯಾಗಿ ನಿಂತಿತ್ತು. ಕೃಷಿಗೆ ಟ್ಟ ಮುಸ್ಲಿಂ ಕುಟುಂಬದ ಐದು ಜೀವಗಳು ಸಾಲಕ್ಕೆ ನೇಣು ಹಾಕಿಕೊಂಡಿದ್ದಾರೆ. ಈ 'ಸಾಮೂಹಿಕ ಹತ್ಯೆ' ಹತ್ತಾರು ಅನುಮಾನಗಳಿಗೆ ಕಾರಣವಾಗಿದೆ. ವೆಯೇ ರೈತರ ಹೀನಾಯ ಸ್ಥಿತಿ, ಭೂದಾಹಿಗಳ ವಂಚನೆ,



ಮಾಫಿಯಾದ ಕರಾಳತೆಯನ್ನು ಬೆತ್ತಲಾಗಿಸಿ ಹೋಗಿದೆ.

ಅದು ಐವತ್ತ ವರ್ಷದ ಆಸುಪಾಸಿನಲ್ಲಿದ್ದ ಜಾವೇದ್‌ನ ಕುಟುಂಬ. ಆತನೊಟ್ಟಿಗೆ ಮಡದಿ ಶಕೀರಾಬಾನು, ಮೊದ ಮಗ ಶೋಯಾಬ್ ಅಲ್ಲದೆ ಯಾಸ್ಮಿನ್‌ತಾಜ್ ಹಾಗೂ ನ್ನಾತಾಜ್ ಎಂಬಿಬ್ಬ ಹೆಣ್ಣುಮಕ್ಕಳೂ ನೇಣಿಗೆ ಶರಣಾಗಿ . ಇಷ್ಟಕ್ಕೆಲ್ಲ ಸಾಕ್ಷಿಯಾದದ್ದು ಶಿವಮಲ್ಲೇಗೌಡನೆಂಬಾತನ ಟದ ಮನೆ.

ತನ್ನ ತಂದೆಯ ಕಾಲಕ್ಕೇ ಮೈಸೂರಿನಿಂದ ಕೊಳ್ಳೆಗಾಲಕ್ಕೆ ಮ ನೆಲೆ ಕಂಡುಕೊಂಡಿದ್ದ ಜಾವೇದ್, ಕೃಷಿಯತ್ತ ಮುಖ ಡುವುದಕ್ಕೂ ಮುನ್ನ ಗುಜರಿ ಅಂಗಡಿಯಲ್ಲಿ ಬದುಕು ಕೊಂಡಿದ್ದ. ಆಗೆಲ್ಲ ಈ ಕುಟುಂಬ ಕೊಳ್ಳೇಗಾಲದ ರ್ ಮೊಹಲ್ಲದಲ್ಲಿ ವಾಸವಿತ್ತು. ಎರಡು ಗಂಡುಮಕ್ಕ ಟ್ಟಿಗೆ ಇಬ್ಬರು ಹೆಣ್ಣುಮಕ್ಕಳನ್ನೂ ಹೊಂದಿದ್ದ ಜಾವೇದ್, . ಒಂದಷ್ಟು ಕಾಸೂ ಮಾಡಿಕೊಂಡಿದ್ದ. ಓದು ನಿಲ್ಲಿಸಿದ ಮಕ್ಕಳಿಬ್ಬರು ಸೀಟ್ ಕವರ್ ಅಂಗಡಿಯಲ್ಲಿ ದುಡಿಮೆಗೆ ತ ನಂತರ ಮುಂದೇನೆಂದು ಕಂಡದ್ದು, ಈ ಕೃಷಿ.


ಅಸಲಿಗೆ ಈ ಜಾವೇದ್‌ನ ಭಾವ ಅಕ್ಬರ್ ಪಾಷಾ ಬಾತ ಬಾಣೂರಿನಲ್ಲಿ ಕೃಷಿ ಮಾಡಿಕೊಂಡು ಒಂದಷ್ಟು ಟು ಮಾಡಿಕೊಂಡಿದ್ದ. ಆತನಂತೆಯೇ ತಾನೂ ಕೃಷಿಯಲ್ಲಿ ಚೂರು ದುಡ್ಡಿನ ಮುಖ ಕಾಣುವಂತಾದರೆ, ಮಕ್ಕಳ ವಾವನ್ನು ನೆಮ್ಮದಿಯಿಂದ ಮಾಡಬಹುದಲ್ಲ ಎಂದು ಕೃಷಿ ನ್ನು ಆಯ್ದುಕೊಂಡಿದ್ದ. ಹೇಗಿದ್ದರು ಸಹಾಯಕ್ಕೆ, ಸಲಹೆಗೆ ವ ಅಕ್ಬರ್‌ಪಾಷ ಇದ್ದಾನಲ್ಲವಾ ಎಂಬ ನಂಬಿಕೆಯಿತ್ತವನಿಗೆ. ತನ್ನಲ್ಲಿದ್ದ ಬಂಡವಾಳಕ್ಕೆ ಜಮೀನನ್ನು ಖರೀದಿ ಮಾಡಿ ಸಾಯ ಮಾಡುವುದಂತೂ ಕನಸಿನ ಮಾತೆಂಬುದನ್ನು ಅರಿತಿದ್ದ ಆತ ಗುತ್ತಿಗೆಗೇನಾದರೂ ಸಿಗಬಹುದಾ ಎಂಬ ತಲಾಷಿನಲ್ಲಿದ್ದವನಿಗೆ ಸಿಕ್ಕಿದ್ದು ಶಿವಮಲ್ಲೇ ಗೌಡ ಎಂಬ ಭರ್ಜರಿ ಕುಳ. ಈ ಶಿವಮಲ್ಲೇಗೌಡನ ದೊಡ್ಡಪ್ಪ ಬೋಳೇಗೌಡ ಎಂಬಾತ ಸಮೀಪದ ತೆಳ್ಳನೂರು ಗ್ರಾಮದಿಂದ ಬಂದು ನೂರಾರು ಎಕರೆ ಸರ್ಕಾರಿ ಭೂಮಿಗೆ ಬೇಲಿ ಸುತ್ತಿ ತನ್ನದಾಗಿಸಿಕೊಂಡು ಅಲ್ಲೊಂದು ಮನೆಯನ್ನೂ ಮಾಡಿ ಅದಕ್ಕೆ ಬೋಳೇಗೌಡನದೊಡ್ಡಿ ಎಂಬ ಹೆಸರನ್ನಿಟ್ಟಿದ್ದೆಲ್ಲ ಈಗ ಇತಿಹಾಸ. ಈ ಜಮೀನು ಪರಭಾರೆಗೆ ಸಂಬಂಧಿಸಿದಂತೆ ಶಿವಮಲ್ಲೇಗೌಡ ಮತ್ತಾತನ ಸಹೋದರರ ನಡುವೆ ಭಾರೀ ಜಂಗೀ ಕುಸ್ತಿಯೇ ನಡೆದಿತ್ತು. ಅದಿನ್ನೂ ಇತ್ಯರ್ಥವಾಗದೆ ಕೋರ್ಟಿನ ಪಡಸಾಲೆಯಲ್ಲಿ ಮಣ್ಣು ತಿನ್ನುತ್ತಿದೆ. ದಾಯಾದಿ ವ್ಯಾಜ್ಯದಿಂದ ತಾನಂತು ಈ ಭೂಮಿಯಲ್ಲಿ ವ್ಯವಸಾಯ ಮಾಡಲು ಸಾಧ್ಯವಿಲ್ಲ ಎಂದರಿತ ಶಿವಮಲ್ಲೇಗೌಡ ತಣ್ಣಗೆ ಯಾರಿಗಾದರು ಜಮೀನನ್ನು ತಗುಲಿಸುವ ಹವಣಿಕೆಯಲ್ಲಿದ್ದಾಗಲೇ ಈ ನತದೃಷ್ಟ ಜಾವೇದ್‌ನ ಪರಿಚಯವಾಗಿತ್ತು.





ಎಂಬತ್ತು ಸಾವಿರ ಕೊಟ್ಟು ಜಾವೇದ್ ಆ ಜಮೀನಿನಲ್ಲಿ ಬೆಳೆ ಬೆಳೆದುಕೊಳ್ಳಬಹುದೆಂಬ ಕರಾರು ಮಾಡಿಕೊಂಡ ಗೌಡ ಅಡ್ವಾನ್ಸ್ ಎಂಬುದಾಗಿ 40 ಸಾವಿರವನ್ನೂ ಪಡೆದಿದ್ದ, ಮಾತ್ರವಲ್ಲ ಅವರ ವಾಸಕ್ಕೆಂದು ತೋಟದ ಮನೆಯನ್ನೂ ಬಿಟ್ಟುಕೊಟ್ಟು ತಾನು ಮಾತ್ರ ಕೊಳ್ಳೆಗಾಲದಲ್ಲಿ ಸೆಟ್ಲಾಗಿದ್ದ.

ಜಮೀನಿನ ವಿವಾದದ ಬಗ್ಗೆ ಕಿಂಚಿತ್ತೂ ತಿಳಿದಿರದ ಜಾವೇದ್, ತನ್ನ ಹೊಸ ದುಡಿಮೆಗೆ ಬೇಕಾದ ಸಂಪನ್ಮೂಲಗಳಿಗೆಲ್ಲ ದುಡ್ಡು ಸುರಿದು ಇನ್ನೇನು ನೇಗಿಲೂಡುವ ಹೊತ್ತಿಗೆ ದೌಡಾಯಿಸಿದ್ದ ಶಿವಮಲ್ಲೇ ಗೌಡನ ತಮ್ಮ ಶಿವಲಿಂಗೇ ಗೌಡ ಜಾವೇದ್‌ಗೆ ಲ್ಯಾಂಡ್ ಲಿಟಿಗೇಶನ್ನಿನ ಬಗ್ಗೆ ವಿವರಿಸಿದ್ದಲ್ಲದೆ, ಇದನ್ನು ಮೀರಿ ಕೃಷಿಗೆ ಮುಂದಾದದ್ದೇ ಆದಲ್ಲಿ ಪರಿಣಾಮ ನೆಟ್ಟಗಿರುವುದಿಲ್ಲ ಎಂಬ ಬೆದರಿಕೆಯನ್ನೂ ಹಾಕಿ ಹೋಗಿದ್ದ. ತಾನು ಭಾರೀ ಮೋಸ ಹೋಗಿದ್ದರ ಮೊದಲ ಸುಳಿವು ಜಾವೇದ್‌ಗೆ ಸಿಕ್ಕಿದ್ದೇ ಆವಾಗ. ತಡಬಡಾಯಿಸಿ ಶಿವಮಲ್ಲೇ ಗೌಡನ ಬಳಿ ಹೋದ ಜಾವೇದ್ ತನ್ನ ಅಡ್ವಾನ್ಸ್ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದ್ದಾನೆ. ಆದರೆ ಏನೇನೋ ಸಬೂಬು ಹೇಳಿದ್ದಲ್ಲದೆ ಬಾಕಿ 40 ಸಾವಿರವನ್ನು ನೀನೇ ಕೊಟ್ಟು ಬಿಡು ಎಂಬುದಾಗಿ ಗೌಡ ಹೇಳಿದ್ದ. ಊರೂರು ಸುತ್ತಿ ಸೈಕಲ್‌ನಲ್ಲಿ ಐಸ್ ಕ್ಯಾಂಡಿ ಮಾರಿ ಬದುಕಿದ ಅಬ್ಬಾನ ನೆರಳಲ್ಲೇ ಬೆಳೆದ ಜಾವೇದ್‌ಗೆ ಧಮಕಿ ಹಾಕಿ ಹಣ ವಾಪಾಸ್ಸು ಪಡೆಯುವ ಅಥವಾ ಧಿಕ್ಕರಿಸಿ ನೆಲಕ್ಕೆ ನೇಗಿಲೂಡುವ ತಾಕತ್ತಾಗಲಿ, ಬೆಂಬಲವಾಗಲಿ ಇರಲಿಲ್ಲ.



ಗುಜರಿಯಿಂದ ಗಿಟ್ಟಿಸಿಕೊಂಡಿದ್ದ ಸ್ವಲ್ಪ ಹಣವನ್ನು ಗೌಡನಿಗೆ ಮುಂಗಡವಾಗಿ ನೀಡಿಯಾಗಿತ್ತು. ಅವನಂತು ಅದನ್ನು ಹಿಂದಿರುಗಿಸುವ ಲಕ್ಷಣದ ಸುಳಿವಿರಲಿಲ್ಲ. ಇನ್ನುಳಿದ ಕಾಸನ್ನೆಲ್ಲ ಬೇಕಾದ ಸಲಕರಣೆಗಳಿಗೆ ಖರ್ಚು ಮಾಡಿಯಾಗಿತ್ತಾದ್ದರಿಂದ ಬೇಸಾಯವಲ್ಲದೆ ಆತನಿಗೆ ಬೇರೆ ದಾರಿಯೇ ಇರಲಿಲ್ಲ. ಪಕ್ಕದಲ್ಲಿದ್ದ ಸಣ್ಣಮಾದೇ ಗೌಡ ಎಂಬುವವರ ಮೂರು ಎಕರೆ ಜಮೀನನ್ನೆ ಗುತ್ತಿಗೆ ಹಿಡಿದ ಆತ ಅರಿಶಿಣ ಮತ್ತು ಜೋಳವನ್ನು ಬೆಳೆಯುವ ಸಾಹಸಕ್ಕೆ ಕೈ ಇಟ್ಟಿದ್ದ.







ಅದೂ ಜಾವೇದ್ ಅಂದುಕೊಂಡಷ್ಟು ಸುಲಭವಾಗಿರಲಿಲ್ಲ. ಬಿತ್ತನೆ, ಕಳೆ, ಗೊಬ್ಬರ, ಕೀಟನಾಶಕ ಅಂತ ಹೆಜ್ಜೆಹೆಜ್ಜೆಗೂ ದುಡ್ಡು ಕೈ ಬಿಟ್ಟು ಹೋಗುತ್ತಲೇ ಇತ್ತು. ಅಷ್ಟರಲ್ಲಾಗಲಿ ಆತನ ಕೈ ಖಾಲಿಯಾಗಿತ್ತಾದ್ದರಿಂದ ತೆಳ್ಳನೂರಿನ ಚಿಕ್ಕಣ್ಣ, ಲೋಕೇಶ್ ಎಂಬ ಅಪ್ಪಮಕ್ಕಳಿಂದ 5% ಬಡ್ಡಿಗೆ ಸಾಲ ತಂದು ಜಮೀನಿಗೆ ಸುರಿದಿದ್ದ. ಈ ಬಡ್ಡಿ ಜೋಡಿಯಾದರೂ ಅಪ್ಪಟ ಧನದಾಹಿಗಳು. ವಾಯಿದೆಗೆ ಸರಿಯಾಗಿ ತಮ್ಮ ಬಡ್ಡಿ ಬಂದು ಖಜಾನೆ ಸೇರದಿದ್ದರೆ ದಂಡಂ, ದಶಗುಣಂ ಅಂತ ಮನೆ ನುಗ್ಗುವ ಪರಂಪರೆಯವರು.

ಕೃಷಿ ನಂಬಿಕೊಂಡು ಗುಜರಿ ಅಂಗಡಿಗೂ ಎಳ್ಳುನೀರು ಬಿಟ್ಟಿದ್ದ ಜಾವೇದ್ ಬಡ್ಡಿ ಕಟ್ಟುವುದಕ್ಕೂ ಪರಿತಪಿಸುವಂತಾಗಿತ್ತು. ಇದನ್ನೇ ನೆಪವಾಗಿಸಿಕೊಂಡ ಅಪ್ಪ-ಮಗ ಜಾವೇದ್‌ಗೆ ಸಿಕ್ಕ ಸಿಕ್ಕ ಕಡೆಯಲ್ಲೆಲ್ಲ ಮರ್ಯಾದೆ ತೆಗೆದು, ಆದಷ್ಟು ಬೇಗ ಬಡ್ಡಿ ಸಮೇತ ಸಾಲ ತೀರಿಸುವಂತೆ ಕಿರುಕುಳ ಕೊಡುತ್ತಿದ್ದರು.

ಜೂ.23ನೇ ತಾರೀಖಿನಂದು ಮಾತ್ರ ಇವರ ಕಿರುಕುಳ ಎಲ್ಲೆ ಮೀರಿ ಹೋಗಿತ್ತು. ಅವತ್ತು ಜಾವೇದ್‌ನ ತೋಟದ ಮನೆಗೆ ಒಂದಷ್ಟು ಚೇಲಾಗಳೊಂದಿಗೆ ಧಾಂಗುಡಿಯಿಟ್ಟ ಬಡ್ಡಿ ಮಾಫಿಯಾ ಇಡೀ ಕುಟುಂಬವನ್ನು ಹೀನಾಯವಾಗಿ ಬೈದು ಹಾಕಿದೆ. ಸಾಲದೆಂಬಂತೆ ನಾಳೆಯೊಳಗೆ ಸಾಲವನ್ನು ತೀರಿಸದೇ ಇದ್ದಲ್ಲಿ ಮನೆಯ ಹೆಣ್ಣುಮಕ್ಕಳನ್ನು ಎಳೆದೊಯ್ದು ಜೀತಕ್ಕಿಟ್ಟುಕೊಂಡು ಸಾಲ ತೀರಿಸಿಕೊಳ್ಳುತ್ತೇವೆಂದು ಅಸಹ್ಯವಾಗಿ ಒದರಾಡಿದ್ದರು. ಜಾವೇದ್‌ನನ್ನು ವಿಪರೀತ ಚಿಂತೆಗೀಡುಮಾಡಿದ್ದೇ ಆ ಬೆದರಿಕೆ. ಇದಕ್ಕೆ ಸಾವಲ್ಲದೆ ಮತ್ತೇನೂ ಪರಿಹಾರವಲ್ಲ ಎಂಬ ಅವನ ನಿರ್ಧಾರಕ್ಕೆ ಕುಟುಂಬ ಇಡಿಯಾಗಿ ಸಮ್ಮತಿಸಿತ್ತು.

ಸಾವು ಅವರಿಗೆ ಅದೆಷ್ಟು ಅನಿವಾರ್ಯವಾಗಿ ಬೇಕಾಗಿತ್ತೆಂದರೆ ಅಪ್ಪಿ ತಪ್ಪಿ ನೇಣಿನಿಂದ ದುರದೃಷ್ಟವಶಾತ್ ಪಾರಾಗುವ ಪ್ರಮೇಯ ಬಂದರೂ ತಮ್ಮ ಆತ್ಮಹತ್ಯೆಗೆ ಅಡ್ಡಿಯಾಗದಿರಲೆಂದು ನೇಣಿಗೇರುವ ಮುನ್ನವೇ ಬೆಳೆಗೆ ಸಿಂಪಡಿಸಲು ತಂದಿಟ್ಟಿದ್ದ ವಿಷವನ್ನು ಒಟ್ಟಾಗಿ ಕೂತು ಕುಡಿದಿದ್ದರು. ಆ ತೋಟದ ಮನೆಯಲ್ಲಿ ಬಿದ್ದಿದ್ದ ವಿಷದ ಬಾಟಲ್ ಮತ್ತು ಕುಡಿದಿಟ್ಟಿದ್ದ ಖಾಲಿಲೋಟಗಳು ಈ ದಾರುಣತೆಯನ್ನು ಹೇಳುತ್ತಿದ್ದವು. ಅವತ್ತು ಅಕಸ್ಮಾತ್ತಾಗಿ ಕುಟುಂಬದ ಕಿರಿಯ ಪುತ್ರ ವಾಯಿದ್ ಪಾಷ ಆಲಿಯಾಸ್ ಸುಲ್ತಾನ್ ಕೊಳ್ಳೆಗಾಲಕ್ಕೆ ಹೋಗಿದ್ದನಾದ್ದರಿಂದ ಆತನೊಬ್ಬ ಸಾವಿನ ಎಣಿಕೆಯಿಂದ ಮಿಸ್ಸಾಗಿದ್ದ. ಅವನನ್ನು ಏಕಾಂಗಿಯಾಗಿಸಿ ಹೋಗುವ ಉದ್ದೇಶ ಖಂಡಿತ ಜಾವೇದ್‌ಗಾಗಲಿ, ಇತರೆ ಸದಸ್ಯರಿಗಾಗಲಿ ಇರಲಿಲ್ಲವೆನಿಸುತ್ತೆ. ಅದಕ್ಕೆಂದೆ ಪದೇ ಪದೇ ಆತನನ್ನು ಸಂಪರ್ಕಿಸಿ ಜಲ್ದಿ ತೋಟದ ಮನೆಗೆ ಬರುವಂತೆ ಕೇಳಿಕೊಂಡಿದ್ದರು. ಆದರೆ ಆತ ವಾಪಸ್ಸು ಬರುವವರೆಗೂ ಕಾಯುವಷ್ಟು ಸಹನೆ ಅವರಿಗಿರಲಿಲ್ಲ. ಯಾಕೆಂದರೆ ಬಡ್ಡಿ ಮಾಫಿಯಗಳು ಮತ್ತೆ ಬರುವುದಕ್ಕೂ ಮೊದಲೆ ತುರ್ತಾಗಿ ಅವರಿಗೆ ಸಾವು ಬರಬೇಕಾಗಿತ್ತು. ಹೆತ್ತಮಕ್ಕಳನ್ನೇ ಕೈಹಿಡಿದು ಖಬರ್‌ಗೆ ತಳ್ಳುವ ಹೆತ್ತಪ್ಪ-ಅಮ್ಮನ ಅಸಹಾಯಕ ಬದುಕಿನ ಅಂತ್ಯಕ್ಕೆ ಮಕ್ಕಳೂ ಸಾತ್ ನೀಡಿದ್ದರು.

ಕುಟುಂಬವೊಂದರ ಸಾಮೂಹಿಕ ಆತ್ಮಹತ್ಯೆಯ ವಾಸನೆ ಬಡಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದವರಿಗೆ ಅಷ್ಟೂ ಹೆಣಗಳ ಕಾಲುಗಳು ನೆಲಕ್ಕೆ ತಾಗುತ್ತಿದ್ದುದು ಅನುಮಾನ ಮೂಡಿಸುವಂತಿತ್ತು ಅಲ್ಲದೆ ಆ ಕುಟುಂಬ ಅನುಭವಿಸಿದ್ದ ಗುತ್ತಿಗೆ, ಬಡ್ಡಿ ಯಾತನೆ ಎಲ್ಲರಿಗೂ ಗೊತ್ತಿದ್ದರಿಂದ ಜಮೀನು ನೀಡಿದ್ದ ಶಿವಮಲ್ಲೇಗೌಡ, ಬೇಸಾಯ ಮಾಡದಂತೆ ಬೆದರಿಕೆ ಹಾಕಿದ ಶಿವಲಿಂಗೇ ಗೌಡ, ಬಡ್ಡಿ ಬಾಬ್ತಿಗೆ ಪೀಡಿಸಿದ ಅಪ್ಪ-ಮಗನ ಮೇಲೆ ಕಂಪ್ಲೇಂಟು ನೀಡಲಾಗಿದೆ. ಹೇಳಿ ಕೇಳಿ ಶಿವಮಲ್ಲೇ ಗೌಡ ಚಾಮರಾಜನಗರ ಜಿಲ್ಲೆಯ ಜೆ.ಡಿ.ಎಸ್ ಮುಖಂಡ, ಇನ್ನಾತನ ತಮ್ಮ ಲಿಂಗೇಗೌಡ ಪ್ರಭಾವಿ ಲಾಯರ್, ಚಿಕ್ಕಣ್ಣ-ಲೋಕೇಶ್‌ಗಳು ಬಡ್ಡಿ ದುನಿಯಾದವರಾದ್ದರಿಂದ ಎಲ್ಲೆಲ್ಲಿ, ಹೇಗೆ ನಿಭಾಯಿಸಬೇಕೆಂಬುದನ್ನು ಚೆನ್ನಾಗೆ ತಿಳಿದುಕೊಂಡಿರ್ತಾರೆ. ಹಾಗಾಗಿ ಕೇಸಿನ ಬಗ್ಗೆ ಅತಿಯಾದ ನಂಬಿಕೆಯಿಡುವುದು ತಪ್ಪಾದೀತು. ಅದೇನೇ ಇರಲಿ, ಈ ಸಾಮೂಹಿಕ ಆತ್ಮಹತ್ಯೆಯಂತೂ ಇನ್ನೂ ಪರಿಹಾರ ಕಾಣದೇ ಉಳಿದಿರುವ ಹಳ್ಳಿಗಾಡಿನ ಬಡವರ ಹಣಕಾಸಿನ ಹಾಗೂ ಬದುಕಿನ ಸಮಸ್ಯೆಗಳನ್ನು ಮತ್ತೊಮ್ಮೆ ನಮ್ಮೆದುರು ತಂದು ನಿಲ್ಲಿಸಿದೆ.

• ಕೊಳ್ಳೇಗಾಲ ಚಿಕ್ಕಮಾಳಿಗೆ



# ▸2 ಪ್ರಶ್ನೆಗಳಾದ ಉತ್ತರಗಳು!

ಆದರೆ ದುರಂತವೆಂದರೆ ಈಗಿನ ದಲಿತ ವಿಮೋಚನೆಗೆ ಳೆಯ ಪ್ರಶ್ನೆಗಳ ಜೊತೆಗೆ ಹೊಸ ಪ್ರಶ್ನೆಗಳು ಕೂಡಿಕೊಂಡಿವೆ. ಜೊತೆಗೆ ಹಳೆಯ ಉತ್ತರಗಳೆ ಭೂತಾಕಾರವಾದ ಪ್ರಶ್ನೆಗಳಾಗಿ ರ್ಪಟ್ಟಿವೆ. ದಲಿತ ರಾಜಕಾರಣವು ಇವುಗಳ ಹಿಂದಿರುವ ಮೂಲಭೂತ ಕಾರಣಗಳನ್ನು ಪರಿಶೀಲಿಸದೆ ಮತ್ತೆ ಕೇವಲ ಜಕೀಯ ಸ್ವಾತಂತ್ರ್ಯವನ್ನು ಖಾತರಿ ಮಾಡುವ ಸಂಸತ್ತಿನೊಳಗೆ ವೇಶ ಪಡೆಯುವ ಬಗ್ಗೆ ಮಾತ್ರ ಯೋಚಿಸುವುದು ತ್ಮವಂಚನೆಯಾಗುವುದಿಲ್ಲವೇ?

### 1950ರ ಸಂವಿಧಾನದಲ್ಲಿ ಅಂಬೇಡ್ಕರ್ ಎಲ್ಲಿದ್ದಾರೆ?

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಎಲ್ಲಾ ರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿದ್ದಂತೆ ನಮ್ಮ ದೇಶದಲ್ಲಿ ವಿಧಾನದಲ್ಲೂ ಘೋಷಿತವಾಗಿದೆ.ನಮ್ಮ ಸಂವಿಧಾನದ ನುಚ್ಛೇಧ 39 (ಬಿ) " ಈ ದೇಶದ ಭೌತಿಕ ಸಂಪನ್ಮೂಲಗಳು ಲ್ಲಾ ಸಾರ್ವಜನಿಕರ ಹಿತವನ್ನು ಕಾಯುವಂತೆ ಹಂಚಿಕೆಯಾಗ ಕು" ಎಂದೂ ಅನುಚ್ಛೇಧ 39 (ಸಿ) " ಪ್ರಭುತ್ವದ ಆರ್ಥಿಕ ತಿಗಳು ಸಂಪನ್ಮೂಲಗಳು ಒಂದು ಕಡೆ ಕೇಂದ್ರೀಕೃತ ಗದಂತೆ ನೋಡಿಕೊಳ್ಳಬೇಕೆಂದೂ", ಅನುಚ್ಛೇಧ 41 ಪ್ರಭುತ್ವವು ಎಲ್ಲರಿಗೂ ದುಡಿಯುವ ಮತ್ತು ಶಿಕ್ಷಣದ ಕನ್ನು ಮತ್ತು ದುರ್ಬಲರಿಗೆ, ವೃದ್ಧರಿಗೆ ಸರ್ಕಾರದಿಂದ ಯ ದೊರೆಯುವಂತೆಯೂ" ನೋಡಿಕೊಳ್ಳಬೇಕೆಂದೂ, "ಸರ್ಕಾರದ ಆರ್ಥಿಕ ಸಾಮರ್ಥ್ಯಕ್ಕೆ ಒಳಪಟ್ಟು ಎಂಬ ರಿಸಲ್ಪಟ್ಟಿದೆ!), ಅನುಚ್ಛೇಧ 43 " ಎಲ್ಲ ದುಡಿಯುವ ವರ್ಗಗಳಿಗೂ ಜೀವಿಸಲು ಸಾಧ್ಯವಾಗುವಷ್ಟು , ಒದಗಿಸುವಂತೆ ನೋಡಿಕೊಳ್ಳುವ", "ಗಂಡಸು ಮತ್ತು ಹೆಂಗಸರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸುವ", ಅನುಚ್ಛೇದ 46 " ದಲಿತ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಪುರೋಭಿವೃದ್ಧಿಯನ್ನು ಖಾತರಿಪಡಿಸುವ" ನೀತಿಗಳನ್ನು ಮಾಡಬೇಕೆಂದೂ ಪ್ರಭುತ್ವಕ್ಕೆ ಸಂವಿಧಾನ ಮಾರ್ಗದರ್ಶನ ಮಾಡುತ್ತದೆ. (10)

ಆದರೆ ಈ ಎಲ್ಲಾ ಮಾರ್ಗದರ್ಶನಗಳು ಕೇವಲ ಮಾರ್ಗದರ್ಶನಗಳಷ್ಟೆ.. ಏಕೆಂದರೆ ಈ ಎಲ್ಲಾ ಪುರೋಗಾಮೀ ನೀತಿಗಳು ಸರ್ಕಾರಕ್ಕೆ ತನ್ನ ನೀತಿಗಳನ್ನು ರೂಪಿಸುವಾಗ ಗಮನಿಸಬೇಕಾದ ಅಂಶಗಳೇ ವಿನಃ ಅದಕ್ಕೆ ಶಾಸನಾತ್ಮಕ ನಿರ್ದೇಶನವಿಲ್ಲವೆಂದೂ ಅದನ್ನು ಯಾವುದೇ ನ್ಯಾಯಾಲಯಗಳು ಊರ್ಜಿತಕ್ಕೆ ತರಬೇಕೆಂದೂ ನಿರ್ದೇಶನ ನೀಡುವ ಹಾಗಿಲ್ಲವೆಂದೂ ಹೇಳಲಾಗಿದೆ. ಈ ಎಲ್ಲಾ ಅನುಚ್ಛೇದಗಳನ್ನು ಪ್ರಸ್ತಾಪ ಮಾಡುವ ಮುಂಚೆಯೇ ಅನುಚ್ಛೇಧ 37ರಲ್ಲಿ "The provisions contained in this Part shall not be enforced by any court, but the principles therein laid down are nevertheless fundamental in the governance of the country and it shall be the duty of t?e State to apply these principles in making laws." ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಅಂಬೇಡ್ಕರ್ ಸ್ಪಷ್ಟವಾಗಿ ವಿರೋಧಿಸಿದ್ದು ಈ ಸಾಧ್ಯತೆಯನ್ನೇ!

"ಅಂಬೇಡ್ಕರ್ ಬರೆದ ಸಂವಿಧಾನ " ಎಂದು ಜನರನ್ನು ನಂಬಿಸುವ ಸರ್ಕಾರಗಳು ಅಂಬೇಡ್ಕರ್‌ಗಾಗಿರುವ ಈ ಮೂಲಭೂತ ದ್ರೋಹಗಳನ್ನು ಹೇಳುವುದೇ ಇಲ್ಲ, ಬಹಳಷ್ಟು ದಲಿತ ನಾಯಕರೂ ಈ ದ್ರೋಹದ ಬಗ್ಗೆ ಚಕಾರವೆತ್ತುವುದೇ ಇಲ್ಲ, ಬದಲಿಗೆ ಸಂವಿಧಾನದ ಬಗ್ಗೆ ವಿಮರ್ಶೆ ಮಾಡಿದರೆ ಅಂಬೇಡ್ಕರ್ ಬಗ್ಗೆ ಮಾಡಿದ ವಿಮರ್ಶೆಯೆಂಬಂತೆ ಮತ್ತು ಪ್ರಜಾತಂತ್ರದ ಬಗ್ಗೆ ಮಾಡಿದ ವಿಮರ್ಶೆಯೆಂಬಂತೆ ಭಾವಾವೇಶದಲ್ಲಿ ಮಾತಾಡುತ್ತಾರೆ.

ಇದು "ಅತ್ಯುತ್ತಮ ಸಂವಿಧಾನ"ದ ಅನುಷ್ಠಾನದಿಂದ ಉಂಟಾಗಿರುವ ಸಮಸ್ಯೆ ಅಲ್ಲ, ಸಂವಿಧಾನ ರಚನೆಯಲ್ಲಿ ಮೂಲಭೂತವಾಗಿ ಅಂಬೇಡ್ಕರ್ ಆಶಯಗಳನ್ನು ಹೊರಗಿಟ್ಟು ಉಳ್ಳವರ ಹಿತಾಸಕ್ತಿಗೆ ಅನುಗುಣವಾಗಿ ರಚಿಸಿದ ಸಂವಿಧಾನದಲ್ಲೇ ಇವತ್ತಿನ ಬವಣೆಯ ಮತ್ತು ಬಿಕ್ಕಟ್ಟಿನ ಬೀಜಗಳಿವೆ.

ಈ ಸಂವಿಧಾನ ಖಂಡಿತವಾಗಿ ಇದೇ ಪರಿಣಾಮಗಳನ್ನು ಉಂಟು ಮಾಡುತ್ತದೆ ಎಂದು ಅಂಬೇಡ್ಕರ್‌ರವರು 1949ರಲ್ಲೇ ಎಚ್ಚರಿಸಿದ್ದರು. 1949ರ ನವಂಬರ್ 26ರಂದು ಸಂವಿಧಾನ ರಚನಾ ಸಭೆಯ ಅಂತಿಮ ಸಭೆಯಲ್ಲಿ ಭಾಷಣ ಮಾಡುತ್ತಾ ಈ ಅಂಶಗಳನ್ನು ಮತ್ತು ಎಚ್ಚರಿಕೆಯನ್ನು ಭಾರತದ ಜನತೆಗೆ ಮತ್ತು ಹೊಸದಾಗಿ ರೂಪಿತವಾದ ಭಾರತದ ಗಣತಂತ್ರಕ್ಕೆ ನೀಡಿದರು:


1950ರ ಜನವರಿ 26ರಂದು ನಾವು ವೈರುಧ್ಯಗಳಿಂದ ಕೂಡಿದ ಬದುಕಿಗೆ ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಪಡೆದಿರುತ್ತೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಸಮಾನತೆ ಮುಂದುವರೆದಿರುತ್ತದೆ. ರಾಜಕೀಯದಲ್ಲಿ ನಾವು ಒಂದು ಒಬ್ಬರಿಗೆ ಒಂದು ಓಟು ಮತ್ತು ಒಂದು ಓಟಿಗೆ ಒಂದು ಮೌಲ್ಯವನ್ನು ಪರಿಗಣಿಸಿರುತ್ತೇವೆ. ಆದರೆ ನಮ್ಮ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಕಾರಣದಿಂದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಒಬ್ಬ ಮನುಷ್ಯನಿಗೆ ಒಂದು ಮೌಲ್ಯವೆಂಬ ತತ್ವವನ್ನು ನಿರಾಕರಿಸುತ್ತಿರುತ್ತೇವೆ. ಈ ವೈರುಧ್ಯಗಳಿಂದ ಕೂಡಿದ ಸಾಮಾಜಿಕ ಬದುಕನ್ನು ಎಷ್ಟು ಕಾಲ ಮುಂದುವರೆಸಲು ಸಾಧ್ಯ? ಎಷ್ಟು ಕಾಲ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಸಮಾನತೆಯನ್ನು ನಿರಾಕರಿಸಲು ಸಾಧ್ಯ? ಇನ್ನೂ ಇದೇ ಬಗೆಯ ನಿರಾಕರಣೆಯನ್ನು ಮುಂದುವರೆಸುತ್ತಾ ಹೋದರೆ ನಮ್ಮ ರಾಜಕೀಯ ಪ್ರಜಾಸತ್ತೆಗೆ ಆಪತ್ತು ಬರುತ್ತದೆ. ನಾವು ಆದಷ್ಟು ಬೇಗ ಈ ವೈರುಧ್ಯಗಳನ್ನು ನಿರ್ಮೂಲನೆ ಮಾಡದಿದ್ದರೆ ಅಸಮಾನತೆಯಿಂದ ನೊಂದ ಜನ ನಾವು ಕಷ್ಟಪಟ್ಟು ಕಟ್ಟಿರುವ ರಾಜಕೀಯ ಪ್ರಜಾಸತ್ತೆಯ ರಚನೆಯನ್ನೇ ಸ್ಫೋಟ ಮಾಡುತ್ತಾರೆ"(11)

ಇದು ನಿಜವಾದ ಪ್ರಜಾತಂತ್ರವಾದಿಯ ನೋವಿನ ಮಾತೂ ಹೌದು. ದಾರ್ಶನಿಕ ಎಚ್ಚರಿಕೆಯೂ ಹೌದು. ಕಳೆದ 62 ವರ್ಷಗಳ ಸಾಂವಿಧಾನಿಕ ಬದುಕು ಅಂಬೇಡ್ಕರ್ ಹೇಳಿದಂತೆ ಸಾಮಾಜಿಕ ಅಸಮಾನತೆಯನ್ನು ಮತ್ತು ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತಾ ರಾಜಕೀಯ ಅಸಮಾನತೆಯನ್ನು ಮತ್ತು ನಮ್ಮ ರಾಜಕೀಯ ಪ್ರಜಾಸತ್ತೆಯನ್ನು ಅವಹೇಳನ ಮಾಡುತ್ತಿದೆ.

ಬಂಡವಾಳವಾದ ಮತ್ತು ಬ್ರಾಹ್ಮಣವಾದ ಈ ದೇಶದ ಜನರ ಶತ್ರುಗಳು ಎಂದು ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದ್ದರು. ಅವರು ಕನಸು ಕಂಡ ಸಂವಿಧಾನ ಈ ಎರಡು ಶತ್ರುಗಳನ್ನು ಸೋಲಿಸಲು ನೈಜ ಯೋಜನೆಗಳನ್ನು ಹೊಂದಿದ್ದವು. ಆದರೆ 1950ರಲ್ಲಿ ದತ್ತವಾದ ಸಂವಿಧಾನ ಪ್ರಧಾನವಾಗಿ ಇದೇ ಶಕ್ತಿಗಳಿಗೆ ಪೂರಕವಾಗಿತ್ತೆಂಬುದನ್ನು ಇಂದು ಸಂವಿಧಾನದ ಹೆಸರಲ್ಲಿ ನಮ್ಮನ್ನು ಆಳುತ್ತಿರುವ ಜಾಗತೀಕರಣ ಮತ್ತು ಹಿಂದೂತ್ವವೆಂಬ ಅವಳೀ ಶತ್ರುಗಳು ರುಜುವಾತು ಮಾಡಿವೆ.

ಇಂದು 1950ಕ್ಕಿಂತಲೂ ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದ್ದೇವೆ. ಈಗ ಅಂಬೇಡ್ಕರ್ ಕನಸು ಕಂಡ ಸಮಾಜವಾದಿ ಸಂವಿಧಾನವನ್ನು ಸಾಕಾರ ಮಾಡಲು ಮತ್ತೊಂದು ನೈಜ ಸ್ವಾತಂತ್ರ್ಯ ಹೋರಾಟವನ್ನು ಪ್ರಾರಂಭಿಸದೆ ಬೇರೆ ದಾರಿಯೇನಿದೆ?

# ಮನುಷ್ಯರನ್ನು ದೇವರಾಗಿಸಿ ದೇವರನ್ನು ಬೀದಿಗೆಳೆದು...



ಹಿಂದೂ ಧರ್ಮದ ಕಂದಾಚಾರಗಳ, ಶೋಷಕ ಆಚರಣೆಗಳ ವಿರುದ್ಧ ಸೊಲ್ಲೆತ್ತದ ಬಲಪಂಥೀಯ ಸಂಘಟನೆಗಳು ಒಂದು ಕಡೆ. ಕೆಲವು ಪದಗಳನ್ನು ಕಟುವಾಗಿ ಬಳಸಿದ್ದು ತಪ್ಪಾಯಿತೇನೋ ಎಂದು ಸ್ಪಷ್ಟೀಕರಣದಂತೆ ಬರೆದ ಲೇಖನದಲ್ಲಿ ಹೇಳಿದ ದಿನೇಶ್ ಅಮಿನ್ ಮಟ್ಟು ಇನ್ನೊಂದು ಕಡೆ. ಇವರೀರ್ವರ ನಡುವಿನ ಹಗ್ಗಜಗ್ಗಾಟದಲ್ಲಿ ಕಳೆದುಹೋಗಿದ್ದು ವಿವೇಕಾನಂದರ ವ್ಯಕ್ತಿತ್ವವಲ್ಲ, ಅವರ ವಿಚಾರಗಳು.

ವಿವೇಕಾನಂದರ 150ನೇ ಜನ್ಮಾಚರಣೆಯ ಪ್ರಯುಕ್ತ ಅವರ ವಿಚಾರಗಳ ಬಗ್ಗೆ ಚಿಂತನ-ಮಂಥನ ನಡೆಯಬೇಕಿತ್ತು, ಬಲಪಂಥೀಯ ಸಂಘಟನೆಗಳೇನೋ ವಿವೇಕಾನಂದರ ವ್ಯಕ್ತಿ ಪೂಜೆಗೆ ತೃಪ್ತರಾಗಿಬಿಡುತ್ತಾರೆ. ದಿನೇಶ್ ಅಮಿನ್ ಮಟ್ಟುರವರು 'ಅಂತರಾಳ'ದಲ್ಲಿ (ಪ್ರಜಾವಾಣಿ, ಜನವರಿ 17, 2012) ಬರೆದ ಲೇಖನದ ಉದ್ದೇಶ ಬೇರೆಯೇ ಇದ್ದಿರಬಹುದಾದರೂ ಅದು ಬಲಪಂಥೀಯ ಸಂಘಟನೆಗಳಿಗೆ ಪೂರಕವಾಗಿ ಬಳಸಲ್ಪಡುವಂತಾಗಿದ್ದು ವಿಪರ್ಯಾಸವೇ ಸರಿ.

## ಮನುಷ್ಯನನ್ನು ದೇವರಾಗಿಸುವ ಚಟ

ವ್ಯಕ್ತಿ ಯಾರೇ ಇರಲಿ - ಎಲ್ಲರೂ ಒಳ್ಳೆತನ ಮತ್ತು ಕೆಟ್ಟತನಗಳ ಮಿಶ್ರಣ ಮಾತ್ರ; ಕಡೆಪಕ್ಷ ಮನದಲ್ಲಿ ಮೂಡುವ ವಿಚಾರ ವಾದಸರಣಿಗಳ ಲೆಕ್ಕದಲ್ಲಿ, ಮನದ ವಿಚಾರವಾದದಲ್ಲಿ ಮೇಲುಗೈ ಸಾಧಿಸಿದ್ದು ಒಳ್ಳೆತನವಾ ಕೆಟ್ಟತನವಾ ಎಂಬುದರ ಮೇಲೆ ವ್ಯಕ್ತಿಯ ವ್ಯಕ್ತಿತ್ವದ ಅಂತಿಮ ತುಲನೆ ಮಾಡುವುದು ಸಾಧ್ಯವಾಗಬಹುದೇನೋ. ವ್ಯಕ್ತಿಯೊಬ್ಬನನ್ನು ದೇವರ ಸ್ಥಾನಕ್ಕೇರಿಸಿ ಆರಾಧನಾಭಾವ ಬೆಳೆಸಿಕೊಳ್ಳುವ ಪ್ರವೃತ್ತಿ ಇಂದು ನಿನ್ನೆಯದಲ್ಲ. ರಾಮ, ಕೃಷ್ಣ, ಏಸು, ಪೈಗಂಬರ, ಬುದ್ಧ, ಬಸವಣ್ಣ, ಸಾಯಿಬಾಬಾ... ಸಾಲು ದೊಡ್ಡದಿದೆ. ಈಗ ವಿವೇಕಾನಂದ. ಇವರೆಲ್ಲರಲ್ಲಿನ ಉತ್ತಮ ವಿಚಾರಗಳನ್ನಷ್ಟೇ ಸ್ವೀಕರಿಸಿ ಅವರೂ ಕೂಡ ನಮ್ಮಂತೆಯೇ ಮೂಳೆ ಮಾಂಸದಿಂದ ಕೂಡಿದ ಮನುಷ್ಯರಾಗಿದ್ದರು; ಅವರಲ್ಲೂ ಕೆಟ್ಟತನವಿತ್ತು ಅಥವಾ ಕೆಟ್ಟತನವಿದ್ದಿರಬಹುದು ಎಂದು ಒಪ್ಪಲು ನಮಗೇಕೆ ಸಾಧ್ಯವಾಗುತ್ತಿಲ್ಲ? ಪ್ರಮುಖ ಕಾರಣ ಅವರ ವಿಚಾರಗಳನ್ನು ಅಳವಡಿಸಿಕೊಳ್ಳಲು ನಮ್ಮಲ್ಲಿರುವ ಹಿಂಜರಿಕೆ ಮತ್ತದು ಕಷ್ಟಸಾಧ್ಯವೆಂಬ ಭಾವ.

ಪ್ರೀತಿಯ ಹೆಂಡತಿಯ ಮಾತು ಕೇಳಿ ಮಗನನ್ನು ಕಾಡಿಗಟ್ಟಲು ಸಿದ್ಧನಾದ ದಶರಥನಂತಹ ತಂದೆಯ ಮಾತನ್ನು ಧಿಕ್ಕರಿಸುವುದು ಸುಲಭವೇ ಹೊರತು ಅದನ್ನು ಪಾಲಿಸಿ ರಾಮನಾಗುವುದಲ್ಲ, ಒಂದು ಕೆನ್ನೆಗೆ ಹೊಡೆದವನಿಗೆ ತಿರುಗಿಸಿ ಹೊಡೆಯುವುದರಲ್ಲಿರುವ ಸುಲಭತೆ ಮತ್ತೊಂದು ಕೆನ್ನೆಗೆ ಹೊಡೆಸಿಕೊಳ್ಳುವುದರಲ್ಲಿ ಖಂಡಿತ ಇಲ್ಲ. ಸಾವಿರಾರು ಮೈಲಿ ಕ್ರಮಿಸಿ ದೇಶದೇಶಗಳನ್ನೇ ನಾಶಗೊಳಿಸುವಂತಹ ಶಸ್ತ್ರಾಸ್ತ್ರಗಳನ್ನು ತಯಾರಿಸಿದ ಮೇಲೆ ಬುದ್ಧನ ಅಶಾಂತಿ ಮಂತ್ರ ಪಠಿಸುವುದೇ ಹಿಂಸ್ರ ಪ್ರವೃತ್ತಿಯಾದೀತು. ಸರ್ವರಲ್ಲೂ ಶ್ರೇಷ್ಠತೆ - ಸಮಾನತೆ ಕಾಣಬೇಕೆಂದು ಹೇಳಿದ ಬಸವಣ್ಣನ ಸಲಹೆಯನ್ನು ಪಾಲಿಸುವುದು ಕಷ್ಟವಾಗಿದ್ದಕ್ಕೇ ಅಲ್ಲವೇ ಲಿಂಗ ಧರಿಸಿ ನಾವೂ ಶ್ರೇಷ್ಠರೇ ಎಂಬ ಸೋಗಿನಲ್ಲಿ ಅಸ್ಪೃಶ್ಯತೆಯ ಮುಂದುವರಿಕೆಗೆ ಕಾರಣವಾಗಿದ್ದು. ಸರಕಾರವೇ ಇಲ್ಲವಾಗಿದ್ದ ಊರುಗಳ ಅಭಿವೃದ್ಧಿ ಮಾಡಲು ಹೊರಡುವುದರಲ್ಲಿರುವ ಕಷ್ಟ ಬಾಬಾ ನೀಡಿದ ವಿಭೂತಿಯನ್ನು ಹಣೆಗೆ ಬಳಿದುಕೊಳ್ಳುವುದರಲಿಲ್ಲ.

ಇವರೆಲ್ಲ ಮಹಾನ್ ವ್ಯಕ್ತಿಗಳು, ನಿಜ. ಅವರ ಕೆಲವು ವಿಚಾರಗಳೂ ಉನ್ನತವಾದವುಗಳು ಎಂಬುದೂ ನಿಜ. ಆದರೆ ನಾವದನ್ನು ಪಾಲಿಸಬಲ್ಲೆವಾ? ಕೊನೆಗೆ ಪಾಲಿಸುವ ಪ್ರಯತ್ನವನ್ನಾದರೂ ಮಾಡಬಲ್ಲೆವಾ? ಇಲ್ಲ ಅದು ಕಷ್ಟಸಾಧ್ಯ. ಆದರೆ ಅವರನ್ನೆಲ್ಲ ಮರೆತು ಮುಂದೆ ಸಾಗಬಲ್ಲೆವಾ? ಉಹ್ಞೂ ಅದೂ ಕಷ್ಟ! ಮನಸ್ಸಾಕ್ಷಿ ಕುಟುಕುತ್ತಿರುತ್ತದೆ. ಅವರ ವಿಚಾರಗಳನ್ನು ಪಾಲಿಸದೆಯೂ ಮನಸ್ಸಾಕ್ಷಿಯನ್ನು ಸುಮ್ಮನಾಗಿಸಬೇಕೆಂದರೆ ಏನು ಮಾಡಬೇಕು? ಅವರನ್ನು ದೇವರಾಗಿಸಬೇಕು! ಮಂದಿರ, ಮಸೀದಿ, ಚರ್ಚು, ಬೌದ್ಧ ವಿಹಾರ, ಬಾಬಾಮಂದಿರ ಕಟ್ಟಿ ಪೂಜೆ, ಪುರಸ್ಕಾರ, ನಮಾಜು, ಪ್ರಾರ್ಥನೆ ಮಾಡಿ ಅವರೆಲ್ಲ ವಿಚಾರಗಳನ್ನೂ ಮನುಷ್ಯ ನಿರ್ಮಿತ ಗೋಡೆಗಳ ನಡುವೆ ಬಂಧಿಸಿ ಹೊರಬೀಳಬೇಕು. 'ಅವರೆಲ್ಲ ದೇವರು! ಅವರು ಮಾಡಿದ್ದನ್ನು ನಾವೆಲ್ಲಿ ಪಾಲಿಸಲು ಸಾಧ್ಯ. ನಾವು ಯಕಶ್ಚಿತ್ ಮನುಷ್ಯರು' ಎಂಬ ಸಮರ್ಥನೆಯೊಂದಿಗೆ ನಮ್ಮೆಲ್ಲ ಅನಾಚಾರ ದುರಾಚಾರಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸುತ್ತ ಹರಕೆ ಕಾಣಿಕೆಯ ರೂಪದಲ್ಲಿ ಆಗಾಗ 'ಪಾಪ' ನೀಗಿಕೊಳ್ಳುತ್ತಾ ಸಾಗಿಬಿಡಬೇಕು.

ತಮ್ಮ ತಪ್ಪಿಲ್ಲದೆ ದೇವರಾಗಿಬಿಟ್ಟ ಈ ಮನುಷ್ಯರ ಬಗ್ಗೆ ಯಾರಾದರೂ ಕಟುವಾಗಿಯೋ ವಿಮರ್ಶಾತ್ಮಕವಾಗಿಯೋ ಮಾತನಾಡಿಬಿಟ್ಟರೆ ಭಕ್ತರಿಗೆ ಕೆಂಡದಂಥ ಕೋಪ. ಗೋಡೆಗಳ ನಡುವೆ ಬಂಧಿತರಾದ ದೇವರನ್ನು ಭಕ್ತರೇ ತಾತ್ಕಾಲಿಕವಾಗಿ ಬೀದಿಗೆಳೆದು ತಂದು ವಿಮರ್ಶೆ ಮಾಡಿದವರ ಮೇಲೆ ಅಬ್ಬರಿಸಿ ಬೊಬ್ಬಿರಿದು ಕೆಲವೊಮ್ಮೆ ಹಿಂಸಾವಿನೋದವನ್ನೂ ಆಚರಿಸಿ ಮತ್ತೆ ಸುರಕ್ಷಿತವಾಗಿ ದೇವರನ್ನು ಬಂಧನಕ್ಕೊಳಪಡಿಸುತ್ತಾರೆ. ಇನ್ನು 'ದೇವರ' ವಿಚಾರಗಳ ಮಾತು ಬಿಡಿ. ಅವೆಲ್ಲ ಎಲ್ಲಿವೆಯೆಂಬುದು ಸ್ವತಃ ಭಕ್ತರಿಗೇ ತಿಳಿದಿಲ್ಲ.

ದೇವರ ಸಾಲಿಗೆ ನೂಕಲ್ಪಡುವ ಹಿಟ್ ಲಿಸ್ಟಿನಲ್ಲಿ ಸದ್ಯಕ್ಕೆ ಮೊದಲ ಸ್ಥಾನದಲ್ಲಿರುವುದು ವಿವೇಕಾನಂದ. ಇವರನ್ನು ಕೂಡ ನಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾ ಬಂದಿದ್ದೇವೆ. ರಾಮಕೃಷ್ಣ ಆಶ್ರಮದವರಿಗೆ ಅವರು ಆಧ್ಯಾತ್ಮದ ಧ್ಯಾನದ ಸಂಕೇತದಂತೆ ಕಂಡರೆ ಬಲಪಂಥೀಯ ಸಂಘಟನೆಗಳಿಗೆ ತಮ್ಮ ದೃಷ್ಟಿಯ ಹಿಂದೂ ಧರ್ಮದ ಪ್ರಚಾರಕನಂತೆ ಕಾಣುತ್ತಾರೆ. 'ಹಸಿದವರ ಮುಂದೆ ಧರ್ಮದ ವಿಷಯ ಮಾತನಾಡುವುದೇ ಪಾಪ' ಎಂಬ ವಿವೇಕಾನಂದರ ಹೇಳಿಕೆ ನಮಗೆ ಅರ್ಥವೇ ಆಗಿಲ್ಲವೇನೋ. ವರುಷಗಳ ಹಿಂದೆ ಸಿಗರೇಟು ಬಿಟ್ಟುಬಿಡಲಾ ಹೇಗೆ ಎಂಬ ಗೊಂದಲದಲ್ಲಿದ್ದ ನನ್ನ ಸ್ನೇಹಿತನೊಬ್ಬನಿಗೆ ವಿವೇಕಾನಂದರೂ ತಂಬಾಕಿಗೆ ಮಾರುಹೋಗಿದ್ದರು ಎಂಬ ವಿಷಯ ಪುಸ್ತಕವೊಂದರಿಂದ ತಿಳಿದು ಸಿಗರೇಟು ಬಿಡುವ ಯೋಚನೆಯನ್ನೇ ಬಿಟ್ಟುಬಿಟ್ಟಿದ್ದ! ನಮಗೆಷ್ಟು ನಿಲುಕುತ್ತಾರೋ ಅಷ್ಟೇ ಅವರ ಎತ್ತರ ಎಂದು ನಿರ್ಧರಿಸಿಬಿಟ್ಟದ್ದೇವೆ.

'ನನ್ನ ಸತ್ಯಾನ್ವೇಷಣೆ'ದಂಥ ಪುಸ್ತಕಗಳನ್ನು [My experiments with truth] ಬರೆಯದೇ ಹೋಗಿದ್ದಲ್ಲಿ ಮಹಾತ್ಮ ಪಟ್ಟಕ್ಕೇರಿದ ಗಾಂಧಿಯನ್ನೂ ದೇವರನ್ನಾಗಿ ಮಾಡಿಬಿಡುತ್ತಿದ್ದೆವೋ ಏನೋ? ಪುಣ್ಯಾತ್ಮ! ವಿಚಾರಗಳು ಹೊರಹೊಮ್ಮುವ ಮೊದಲು ಮೂಡಿದ ಗೊಂದಲಗಳನ್ನೂ ಸ್ಪಷ್ಟವಾಗಿ, ಪ್ರಾಮಾಣಿಕವಾಗಿ ಬರೆದುಕೊಂಡು 'ದೇವರಾಗುವ' ಅಪಾಯದಿಂದ ಮುಕ್ತರಾದರು!!

● ಡಾ ಅಶೋಕ್. ಕೆ. ಆರ್.
ಸಹಾಯಕ ಪ್ರಾಧ್ಯಾಪಕ, ಅನಾಟಮಿ ವಿಭಾಗ, ಕೆವಿಜಿ ವೈದ್ಯಕೀಯ ಕಾಲೇಜು, ಕುರುಂಜಿಬಾಗ್, ಸುಳ್ಯ


## ಉಡುಪಿ ಮಠಾಧೀಶರ ಪ್ರಕಾರ ಎಲ್ಲಾ ಹಿಂದೂ ದೇವರುಗಳೂ ಪೂಜೆಗೆ ಅನರ್ಹರು!

ಒಂದು ಪತ್ರ

ಮಠಾಧೀಶರು ಕೇವಲ ... ಅವಮಾನಿಸಿದ್ದಲ್ಲ, ಸ್ವತಃ ತಮ್ಮ ...

## ಭ್ರಷ್ಟರ ನಡುವೆ ಜನ ಕೇಳಿಸಿಕೊಳ್ಳುವುದು ಪ್ರಾಮಾಣಿಕರ ದನಿ

ಬರಹಗಾರ, ಚಿಂತಕ, ವ್ಯಂಗ್ಯ ಚಿತ್ರಕಾರ, ಪತ್ರಕರ್ತ, ಚಿತ್ರ ನಿರ್ದೇಶಕ... ಹೀಗೆ ತಮ್ಮ ಬಹುಮುಖ ಪ್ರತಿಭೆಯಿಂದಲೇ ಹೆಸರಾಗಿರುವ ಎನ್.ಎಸ್. ಶಂಕರ್ ಅವರ ಸಮಕಾಲೀನ ಬರಹಗಳ 'ಹುಡುಕಾಟ' ಈಚೆಗಷ್ಟೇ ಪ್ರಕಟಗೊಂಡಿದೆ. ಎರಡು ವರ್ಷಗಳ ಹಿಂದೆ ಅವರು ದಲಿತ ರೈತ ಚಳವಳಿಗಳ ಹಿನ್ನೆಲೆಯನ್ನಿಟ್ಟುಕೊಂಡ ಬರೆದ 'ಈಗ ಅಳುವವರೂ ಇಲ್ಲ' ಎಂಬ ಪುಟ್ಟ ಕೃತಿ ಅಪಾರ ಜನಮನ್ನಣೆ ಪಡೆದಿತ್ತು. ಈ ಕೃತಿಯಲ್ಲಿರುವ ಬಹುತೇಕ ಲೇಖನಗಳು ಶಂಕರ್ ಅವರು 'ಉಷಾಕಿರಣ' ಪತ್ರಿಕೆಗೆ ಬರೆದ ಅಂಕಣ ಬರಹಗಳಾಗಿವೆ. ಅವುಗಳಲ್ಲಿ ಹೆಚ್ಚಿನವು ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸಿ ಬರೆದ ಲೇಖನಗಳು. ಕೃತಿಯಲ್ಲಿರುವ 45 ಲೇಖನಗಳಲ್ಲಿ ಕಮಲ್ ಹಾಸನ್, ಸುಭಾಷ್ ಪಾಳೇಕಾರ್, ಸಾಯಿಬಾಬಾ, ಮುನ್ನಾಭಾಯಿ, ಡಾ.ರಾಜ್, ಮೀಸಲಾತಿ, ಮತಾಂತರ, ಗಾಂಧಿ, ಅಂಬೇಡ್ಕರ್ ಎಲ್ಲರೂ ಎಲ್ಲವೂ ಬಂದುಹೋಗುತ್ತವೆ. ಜೊತೆಗೆ ಈ ಕೃತಿಯಲ್ಲಿ ಲೇಖಕರು ಅಲ್ಲಲ್ಲಿ ಬರೆದ ಪುಸ್ತಕ ವಿಮರ್ಶೆಗಳು ಸೇರಿಕೊಂಡಿವೆ. ತಲಪರಿಗೆ, ಅನಾವರಣ, ಸಾದತ್ ಹಸನ್ ಮಾಂಟೋ ಕೃತಿಗಳು ಮತ್ತು ಗಿರೀಶ್ ಕಾಸರವಳ್ಳಿ ಕುರಿತ ಪುಸ್ತಕಗಳ ವಿಮರ್ಶೆ ವಸ್ತುನಿಷ್ಠವಾಗಿ ಮೂಡಿಬಂದಿವೆ. ಒಟ್ಟಾರೆ ಈ ಕೃತಿ ಲೇಖಕರ ಪ್ರಾತಿನಿಧಿಕ ಬರಹಗಳ ಸಂಕಲನವಾಗಿದೆ.




ತಮ್ಮ 'ಅಂಕಣವೆಂದರೆ...' ಲೇಖನದಲ್ಲಿ ಲೇಖಕರು ಬರೆಯುತ್ತಾರೆ: 'ಯಾವುದೇ ಬಿಕ್ಕಟ್ಟಿನ ಸಂದರ್ಭದಲ್ಲಿ ತಾನು ಕಂಡಿದ್ದನ್ನು ಒಳ ಎಚ್ಚರದಲ್ಲಿ ಒರೆಗೆ ಹಚ್ಚಿ ನಿರ್ಣಯಿಸುವುದು ಬರಹಗಾರನ ಮೂಲಭೂತ ಜವಾಬ್ದಾರಿ; ಒಬ್ಬ ಅಂಕಣಕಾರನ ಜವಾಬ್ದಾರಿ ಕೂಡ. ಜನರನ್ನು ಎದುರು ಹಾಕಿಕೊಳ್ಳುವ ರಿಸ್ಕ್ ಬೇಡ ಅನ್ನುವವನು; ಓದುಗರನ್ನು ಒಲೈಸಲೆಂದೇ ಅಪ್ರಿಯ ಸತ್ಯ ಹೇಳಲು ಹಿಂಜರಿಯುವವನು, ದೊಡ್ಡ ಸತ್ಯಗಳನ್ನಿರಲಿ, ದೊಡ್ಡ ಸುಳ್ಳುಗಳನ್ನೂ ಕಾಣಲಾರ! ಅಷ್ಟಕ್ಕೂ, ಭ್ರಷ್ಟನಾಗದೆ ಉಳಿಯುವ ಛಾತಿಯುಳ್ಳವನ ದನಿ ಮಾತ್ರ ಪ್ರಾಮಾಣಿಕವಾಗಿರಬಲ್ಲುದು ಮತ್ತು ಓದುವ ಜನ ಅಂತಿಮವಾಗಿ ಕಿವಿಗೊಡುವುದು ಈ ಪ್ರಾಮಾಣಿಕ, ಜನಪರ ದನಿಗೆ ಮಾತ್ರ.'

ಲೇಖಕರ ಮಾತಿನಂತೆ ಈ ಕೃತಿಯಲ್ಲಿರುವ ಅನೇಕ ಲೇಖನಗಳು ಜನರಿಗೆ ಸತ್ಯ ಹೇಳಲೆಂದೇ ರೂಪುಗೊಂಡಿವೆ. ಮೀಸಲಾತಿ ಮತ್ತು ಮತಾಂತರ ವಿರೋಧಿಸುವ ಮನಸ್ಸುಗಳು ಎಂಥವು ಎಂದು ತೋರಿಸುವ ಲೇಖಕರು ಗಿರೀಶ್ ಕಾಸರವಳ್ಳಿ ಅವರ ಸಿನಿಮಾ ಕುರಿತು ಪುಸ್ತಕವೊಂದನ್ನು ಇಂಗ್ಲಿಷಿನಲ್ಲಿ ರೂಪಿಸಿ ಬೀಗುತ್ತಿದ್ದವರ ಭಜನೆ, ಕೀರ್ತನೆ ಮತ್ತು ಮಿತಿಗಳನ್ನು ಅವರ ಕೃತಿಯಿಂದಲೇ ಹೆಕ್ಕಿ ತೋರಿಸುತ್ತಾರೆ.

'ರಾಮಕೃಷ್ಣ', 'ಮತಾಂತರ ಯಾಕೆ?' ಮತ್ತು 'ಬ್ರಾಹ್ಮಣಧರ್ಮದ ದಿಗ್ವಿಜಯ' ತರಹದ ಅಪರೂಪದ ಕೃತಿಗಳನ್ನು ಕನ್ನಡಕ್ಕೆ ತಂದಿರುವ ಎನ್.ಎಸ್.ಶಂಕರ್ 'ಚಂಚಲೆ', 'ಮಾಯಾಬಜಾರ್' ಮತ್ತು 'ಈಗ ಅಳುವವರೂ ಇಲ್ಲ' ಎಂಬ ವಸ್ತುನಿಷ್ಠ ಕೃತಿಗಳನ್ನೂ ಬರೆದಿದ್ದಾರೆ. ಅವುಗಳ ಸಾಲಿಗೆ 'ಹುಡುಕಾಟ'ವೂ ಸೇರುತ್ತದೆ.

**ಹುಡುಕಾಟ**
ಲೇಖಕರು: ಎನ್.ಎಸ್.ಶಂಕರ್
ಪ್ರಕಾಶಕರು: ಪ್ರೆಸ್‌ಕ್ಲಬ್ ಪ್ರಕಾಶನ, ಕಬ್ಬನ್ ಉದ್ಯಾನವನ, ಬೆಂಗಳೂರು-01
ಪುಟಗಳು: 334, ಬೆಲೆ: ರೂ.200, ಪ್ರಕಟಣೆ: 2011


## ಪುಸ್ತಕ ಪರಿಚಯ



ಚಂದ್ರಶೇಖರ್ ಐಜೂರ್

## ಎಳೆಯರು ಬಿಡಿಸಿದ ನವಿಲುಗರಿ

ಇಲ್ಲಿರುವ 24 ಪ್ರಬಂಧಗಳು ವಿದ್ಯಾರ್ಥಿಗಳವು. ಸಾ... ಬದುಕು ಮತ್ತು ಈ ಸಮಾಜವನ್ನು ಸರಳವಾಗಿಯ... ಗಂಭೀರವಾಗಿಯೂ ಹಾಗೂ ಬೆರಗಿನಿಂದಲೂ ನೋಡುತ್ತಿ... ವಿದ್ಯಾರ್ಥಿಗಳು ವಿವಿಧ ವಿಷಯಗಳನ್ನಿಟ್ಟುಕೊಂಡು ಬ... ಪ್ರಬಂಧಗಳು 'ನವಿಲುಗರಿ'ಯಲ್ಲಿವೆ. ತಮ್ಮ ವಿದ್ಯಾರ್ಥಿ... ಪ್ರಬಂಧಗಳನ್ನೆಲ್ಲ ತಿದ್ದಿ ತೀಡಿ ಅದನ್ನು ಪುಸ್ತಕ ರೂಪದಲ್ಲಿ ತಂದಿರುವ ... ಡಾ.ಸಬಿಹಾ ಭೂಮಿಗೌಡ ಅವರ ಈ ಪ್ರಯತ್ನ ಮೆಚ್ಚುವಂತಹುದು. ಆದರೆ ... ಬಹುತೇಕ ವಿದ್ಯಾರ್ಥಿಗಳ ಪ್ರಬಂಧಗಳಲ್ಲಿ ಈ ಸಮಾಜದೊಂದಿಗೆ ಅಂಟಿಕೊಂಡಿ... ಯಾವ ವಿದ್ಯಮಾನಗಳು ಹೆಚ್ಚು ತಟ್ಟಿದಂತೆ ಕಾಣುವುದಿಲ್ಲ. ಬಹುತೇಕರು ಕ... ಮೊಬೈಲ್, ಚಪ್ಪಲಿ, ಕನಸು, ಬಾಲ್ಯ ಸ್ನೇಹವನ್ನು ಬಿಟ್ಟು ಆಚೆತ್ತ ಸರಿದಿಲ್ಲ. ... ವಿದ್ಯಾರ್ಥಿಗಳ ಕನಸಿಗೆ ಒತ್ತಾಸೆಯಾಗಿ ನಿಂತಿರುವ ಸಂಪಾದಕಿ ಇನ್ನಷ್ಟು ಶ್ರಮ ವಹಿ... ಬದುಕು ಬರಹಗಳನ್ನು ಭಿನ್ನ ನೆಲೆಗಳಿಂದ ನೋಡುತ್ತಿರುವ ಈ ತಲೆಮಾರಿನ ಎಳೆ... ಹೊಸ ತಲ್ಲಣಗಳನ್ನು ಕೇಳಿಸಿಕೊಳ್ಳಬಹುದಿತ್ತು. ಫೌರಿಯ ಬಿ.ಎಸ್., ದೀಪಿಕಾ ... ರಶ್ಮಿ ಕೆ., ಚೇತನ್ ಮತ್ತು ಅರುಣ್ ಉಳ್ಳಾಲ್ ... ಪ್ರಬಂಧಗಳ ನಿರೂಪಣೆ ಹೊಸತನದಿಂದ ಕೂಡಿ... ಸರಾಗವಾಗಿ ಓದಿಸಿಕೊಳ್ಳುತ್ತದೆ. ಈ ವಿದ್ಯಾರ್ಥಿ... ಮುಂದಿನ ನಡೆಗಳ ಬಗ್ಗೆ ಭರವಸೆ ಇಡಬಹುದು.



**ನವಿಲುಗರಿ (ಪ್ರಬಂಧಗಳು)**
ಸಂಪಾದನೆ: ಡಾ. ಸಬಿಹಾ ಭೂಮಿಗೌಡ
ಪ್ರಕಾಶಕರು: ಲಡಾಯಿ ಪ್ರಕಾಶನ, 21, ಪ್ರಸಾದ ಹಾಸ್ಟೆಲ್, ಗದಗ -582101
ಪುಟಗಳು: 96, ಬೆಲೆ: 50, ಪ್ರಕಟಣೆ: 201

# ಮುದುಕಿಯ ನೆಂಟ



ಆಕಿ ಎಲ್ಲಿಂದ ಬಂದಲು.. ಯಾವಾಗ ಬಂದಲು.. ಆಕಿ ಹೆಸರೇನು.. ಊರ ಯಾವದು..? ಯಾರಿಗೂ ಗೊತ್ತಿಲ್ಲ. ಮೊದಮೊದಲ ಆಕಿ ಮಾತಾಡೂದು ಯಾವ ಭಾಷೆ ಅನ್ನೂದು ಸೈತ ತಿಳೀತಿರಲಿಲ್ಲ. ಯಾವಾಗ ಒಂದು ದಿನ ಪಾಪಡ ಮಾರೋ ಚಂದ್ರಣ್ಣ ಆಕಿ ಮಾತಾಡೂದು ತೆಲಗು ಐತಿ, ತನಗೂ ತೆಲುಗೂ ಬರತೈತಿ ಅಂದಾಗಲೇ ಎಲ್ಲರಿಗೂ ಆಕಿ ಆಂಧ್ರ ಪ್ರದೇಶದವಳು ಅಂತ ಗೊತ್ತಾಗಿದ್ದು.

## ಕತೆ

ಡಾ.ಎಸ್.ಬಿ.ಜೋಗುರ

...ಲೆಕೆಂಡ್ ಶೋ ಸಿನೇಮಾ ಬಿಟ್ಟಿತ್ತು. ಜಿಟಿ ಜಿಟಿ ಮಳಿ ...ಐತ್ತು.

...ಚಾವಡಿ ಮುಂದಿನ ಬಸರೀ ಗಿಡದ ಎಲೀ ತುದಿಯಿಂದ ...-ಕಡ್ಡಿ ಮಾರೋ ಶಿವರಾಯನ ಗೂಡಂಗಡಿ ಪತ್ರಾಸ್ ... ಬೀಳೋ ನೀರ ಹನಿ ಜಲತರಂಗ ನುಡಸದಂಗ ...ಸತಿತ್ತು. ಜೀರುಂಡಿ ಹುಳಾ ರಮಜ ನಾದ ಹಿಡದು ... ಊದೂವಂಗ ಚಿರ್‌ಗುಡತಿದ್ವು. ಸಿನೇಮಾ ಬಿಟ್ಟು ...ಗಿ ನಡದ ಮಂದಿ ಕಾಲಾಗಿನ ಮೆಟ್ಟು ಸೈತ ಚಿಲಕನೀರಿಗಿ ...ಕ್..ಚಿರಕ್ ಅಂತ ಮ್ಯುಜಿಕ್ ಬಾರಸದಂಗ ಮಾಡತಿದ್ವು.

...ಇಟ್ಟೆಲ್ಲಾ ಆದ ಮ್ಯಾಲೂ ನಾ ನಾಯಿ ಆಗ ಹುಟ್ಟದ ...ಲ ಬೊಗಳಲಿಲ್ಲ ಅಂದ್ರ ಜಾತಿಗೇ ಅವಮಾನ ...ದಂಗ ಅಂಥೇಳಿ ಚಾವಡಿ ಮೂಲಿಂಯೊಳಗಿಂದ ...ಬೌ..ಬೌ..ಬೌ.. ಅಂತ ನಾಕ ಸಾರಿ ಬೊಗಳಿ ...ರ್‌ಗುಡತಾ ಸುಮ್ಮ ಬದ್ದಿತ್ತು. ಚಾವಡಿ ಕಟ್ಟಿ ಮ್ಯಾಲಿಂದ ...ಉಂ.. ಅಂತ ಯಾರೋ ನರಳದಂಗ ಕೇಳಸತಿತ್ತು. ...ದ ಹಾದು ಹೋಗೂ ಮಂದಿಗೆಲ್ಲಾ ಅದು ಆ ಮುದುಕಿ ...ಜೇ ಅಂತ ಎಲ್ಲರಿಗೂ ಗೊತ್ತಿತ್ತು ಆದರ ಯಾರೂ ಸನ್ಯಾಕ ...ಗಿ ಅದ್ಯಾಕ ಹಂಗ ನರಳತೈತಿ ಅಂತ ಕೇಳವರಿರಲಿಲ್ಲ.

...ಆಕಿ ಹುಚ್ಚಿಯಂಗ ಕಾಣತಿದ್ದಳು ಆದರ ಹುಚ್ಚಿ ಅಲ್ಲ. ... ಹುಡುಗರು ಆಕಿಗಿ ಹುಚ್ಚಿ.. ಹುಚ್ಚಿ ಅಂತ ...ಸೂದು.. ಕಲ್ಲ ತಗೊಂಡು ಹೊಡೆಯೂದು ನೋಡಿ ...ನಾನ ಮಂದಿನೂ ಆಕಿನ್ನ ಹುಚ್ಚಿ ಅಂತಾನೇ ಕರಿಯಾಕ ... ಮಾಡಿದ್ದರು. ಆ ಮುದುಕಿ ಮೈಬಣ್ಣ ಬಿಳಿ ಅಂದ್ರ ... ತಲಿಗೂದಲ ಮತ್ತೂ ಬಿಳಿ. ಎಡಗೈಯಾಗ ಒಂದು ... ಥರಾ ಕಾಣೋ ಕಡಗ ಇತ್ತು, ಇನ್ನೊಂದು ಕೈಯಾಗ ...ನೋ ಸುತಳೀಯಂಥಾ ದಾರ ಕಟ್ಟಿದ್ದಲು.

... ಆಕಿ ಎಲ್ಲಿಂದ ಬಂದಳು.. ಯಾವಾಗ ಬಂದಳು.. ಆಕಿ ...ರೇನು.. ಊರ ಯಾವದು..? ಯಾರಿಗೂ ಗೊತ್ತಿಲ್ಲ. ...ದಮೊದಲ ಆಕಿ ಮಾತಾಡೂದು ಯಾವ ಭಾಷೆ ...ನ್ನೂದು ಸೈತ ತಿಳೀತಿರಲಿಲ್ಲ. ಯಾವಾಗ ಒಂದು ದಿನ ...ಪಡ ಮಾರೋ ಚಂದ್ರಣ್ಣ ಆಕಿ ಮಾತಾಡೂದು ತೆಲಗು ..., ತನಗೂ ತೆಲುಗೂ ಬರತೈತಿ ಅಂದಾಗಲೇ ಎಲ್ಲರಿಗೂ ... ಆಂಧ್ರ ಪ್ರದೇಶದವಳು ಅಂತ ಗೊತ್ತಾಗಿದ್ದು. ಆ ಚಂದ್ರ ...ದಾಗಲೇ ಹಿಂದಗಿಗಿ ಬಂದು ಹೆಚ್ಚೂಕಮ್ಮಿ ಇಪ್ಪತ್ತು ವರ್ಷದ ...ಮ್ಯಾಲೇ ಆಗಿತ್ತು.

... ಹಂಗ ಪಾಪಡ ಮಾರಲಾಕ ಅಂತ ಹೇಳಿ ಬಂದಂವ ...ಗೆ ಊರಹೊರಗ ಒಂದು ಬಾಡಿಗಿ ಮನಿ ಹಿಡಕೊಂಡು, ...ಪಡ ಮಾರೋ ಬಿಜಿನೆಸ್ ಸುರು ಮಾಡಿದ್ದ. ಊರಾಗಿನ ...ದಿ ಬಯಲುಕಡಿಗೆ ಹೋಗೋ ಜಾಗದೊಳಗ ಅಂವಾ ..., ಅವನ ಹೆಂಡತಿ ಕೂಡಿ ಕೊಳಪಾಟ ಮ್ಯಾಲ ಪಾಪಡ ... ಹಿಡೂದು ನೋಡಿ ಜನಾ ಎಂಥಾ ಜಾಗದೊಳಗ ...ಪಡ ಮಾಡ್ತಾನ ನೋಡು ಹೋದಿ ಅಂತ ಬೈತಿದ್ದರು. ...ನಾಲೇ ಏನು ಮಾಡ್ತಾನ. ಅವನ ಬಜೆಟ್ಟಿಗೆ ಸೆಟ್ ಆಗೋ ..., ಅಂದ್ರ ಅದೇ ಆಗಿತ್ತು.

... ಹಿಂಗ ಮೊದಮೊದಲ ಊರ ಹೊರಗ ಪಾಪಡ ...ದವನು ಈ ಚಂದ್ರ ಈಗ ಊರ ನಡುವೇ ಒಂದು ಚಲೋ ..., ಟ್ಟಿಸ್ಯಾನ. ಊರಾಗ ರಿಕಾಮಿ ತಿರಗೋ ಹುಡುಗರಿಗೆಲ್ಲಾ ...ಗು 'ಆ ಚಂದ್ರ್ಯಾ, ಕೋದ್ರಿ ಅಂಧ್ರದಂವ, ಹ್ಯಾಂಗಿದ್ದ ಹ್ಯಾಂಗಾದ ನಿಮಗೇನಾಗ್ಯೆತರಲೇ ಧಾಡಿ..? ನೀವು ಬರೀ ಸೈರಹಟ್ಟಿ ನಾಯೀಯಂಗ ತಿರಗವರು ದುಡೆವರಲ್ಲ, ದುಃಖ ಪಡವರಲ್ಲ' ಅಂತ ಬೈತಿದ್ದರು. ಆ ಚಂದ್ರಪ್ಪ ಕರಿ ಅಂದ್ರ ಕರಿ. ಬಿಳಿ ಲುಂಗಿ ಸುತಗೊಂಡು ಬಿಳಿ ಅಂಗಿ ಹಾಕೊಂಡು ಬಜಾಜ್ ಎಮ್ 80 ಗಾಡೀ ತುಂಬಾ ಪಾಪಡ ಹೇರಕೊಂಡು ಊರಊರ ತಿರಗ್ತಾನೇ ಒಂದು ಮನಿ ಕಟ್ಟಿಸಿಬಿಟ್ಟ. ಅವನೂ ಈ ಊರನ್ನೇ ಯಾಕ ಆಯ್ದುಕೊಂಡ ಅನ್ನೂದು ಯಾರಿಗೂ ಗೊತ್ತಿಲ್ಲ. ಇಡೀ ಊರಾಗ ಹೊರಗಿನಿಂದ ಬಂದವರಂದ್ರ ಅಂವೊಬ್ಬಂವ ಬಿಟ್ಟರ ಈ ಮುದುಕಿ.

ಆ ಪರಿ ಮಳಿಂಯೊಳಗ ಮುದುಕಿ ಚಾವಡಿ ಕಟ್ಟೀ ಮ್ಯಾಲ ಮಲಗಿದ್ದಲು. ಆಕಿ ಹಾಸ್ಕೊಂಡಿರೋ ಗೋಣಿಚೀಲದ ಅರ್ಧ ಭಾಗ ಮಳಿ ಇಡಸಲ ನೀರಿಗಿ ತೊಯ್ದು ತೊಪ್ಪಿ ಆಗಿತ್ತು. ಹೊದಕೊಳಾಕೂ ಗಟ್ಟಿ ಕೌದಿ, ರಗ್ಗ ಯಾವದೂ ಇರಲಿಲ್ಲ. ಅದೇ ಹರಕಾ ಬುರಕಾ ರಗಟಿಯಂಥಾ ಬಟ್ಟೀನೇ ಸುತಗೊಂಡು ಆ ಮುದುಕಿ ಮುದ್ದಿ ಆಗಿ ನಡಕ್ಕೊಂತ ಮಲಗಿದ್ದಲು. ಆಕಿಗಿ ಜ್ವರಾ ಬಂದು ಒಂದು ಸವನ ಉಂ..ಉಂ.. ಅಂತ ನರಳತಿದ್ದಳು. ಸಿನಿಮಾ ಬಿಟ್ಟು ಮನಿಗಿ ನಡದವರೆಲ್ಲಾ ಹಂಗ ನರಳೂದು ಕೇಳಿ 'ಆ ತೆಲಗು ಮುದುಕಿ ಈ ಗಜ್ಜಿಗಿ ತಾಳೂದಿಲ್ಲ, ಒಂದು ಸವನ ನರಳತೈತಿ ನೋಡ್ರಿ' ಅನ್ನೋಂತ ಪಾರ ಆಗತಿದ್ದರು. ಆ ಮುದುಕಿ ಹಾಸಗಿಂಯೊಳಗ ಒಂದು ಸಣ್ಣ ನಾಯಿ ಕುನ್ನಿ ಮಲಗಿರತಿತ್ತು. ಅದು ಆ ಮಳಿಂಯೊಳಗೂ ಆ ಮುದಕಿನ್ನ ಬಿಟ್ಟು ಎಲ್ಲೂ ಹೋಗಿರಲಿಲ್ಲ. ಆಕಿ ಮಲಗಿದ್ದು, ನರಳೂದು ನೋಡದರ ಹೊಟ್ಟೀಗೂ ಏನೂ ತಿಂದಂಗ ಇರಲಿಲ್ಲ.

ಬೆಳಕ ಹರಿದದ್ದೇ ಮುನಸೀಪಲ್ಟೀ ಕಸ ಗೂಡಸೋ ನಾಕೈದು ಹೆಂಗಸರು ಚಾವಡಿ ಮುಂದಿನ ಕಸಾ ಹೊಡಿಯವರು. ದಿನ್ನಾ ಮುದುಕಿ ಆಟೊತ್ತಿಗಾಗಲೇ ಎದ್ದು ಕುಂದರೂದು. ಅವರು ಕಸಾ ಹೊಡಿಯೂದನ್ನ ನೋಡಕೊಂತ ಎಲ್ಲರೆ ಕಸಾಕಡ್ಡಿ ಉಳದರ ಅದನ್ನ ಎತ್ತಿ ತಗೊಂಡು ಹೋಗಿ ಅವರ ಬುಟ್ಟಿಗಿ ಹಾಕತಿತ್ತು. ಅವರ ಮಾತ ಇಕಿಗಿ ತಿಳಿತಿರಲಿಲ್ಲ, ಇಕಿನ ಮಾತ ಅವರಿಗಿ ತಿಳಿತಿರಲಿಲ್ಲ. ಆದರೂ ಆಕಿ ಕೈ ಬಾಯಿಗಿ ಹಿಡದು ತೋರಸದ ಮ್ಯಾಲ ಅವರು ಯಮನಪ್ಪನ ಹೊಟೆಲದಿಂದ ಒಂದು ಚಾ ತಂದು ಕೊಡತಿದ್ದರು. ಹರಕ ತಲಿದಿಂಬಿನ ಕೆಳಗ ಪ್ಲಾಸ್ಟಿಕ್ ಚೀಲದಾಗ ಸುತ್ತಿಟ್ಟಿರೋ ರೊಕ್ಕಾ ತಗದು ತನಗ ಚಾ ತಂದು ಕೊಟ್ಟವಳಿಗೂ ಒಂದು ಚಾ ಕುಡಿ ಅಂತ ಹತ್ತು ರೂಪಾಯಿ ನೋಟ ಆಕಿ ಕೈಯಾಗ ಕೊಡುವಕ್ಕ, ಮುದುಕಿ ಬಾಳ ಜಾಬಾದಿ ಅದಾಳ ರೊಕ್ಕಾ ನೋಡ್ರಿ, ಹ್ಯಾಂಗ ಇಟ್ಟಾಳ ಅಂತ ಅವರು ನಕ್ಕಾಗ ಇಕಿನೂ ನಗುವಕ್ಕ, ಆ ನಗುವಿಗಿ ಕಾರಣ ಮಾತ್ರ ಆಕಿಗಿ ಗೊತ್ತಿರಲಿಲ್ಲ.

ಈ ಮುದುಕಿಗಿ ಆ ಕಾಳ ಮಾರೋ ಶಿವರಾಯ ಮಧ್ಯಾಹ್ನ ಊಟದ ವ್ಯಾಳೆದೊಳಗ ಏನರೇ ತಿನ್ನಾಕ ಅಂತ ಕೊಟ್ಟರ ಮುದುಕಿ ಅದನ್ನ ಬಾಳ ಸಂಶಯದಿಂದ ನೋಡುವಕ್ಕ. ಹಣೆಗಿ ಗಂಟಿಕ್ಕಿ ನೋಡುವಕ್ಕ. ಅಂವಗ ಕಾಣಲಾರದಂಗ ತಗೊಂಡು ಹೋಗಿ ನಾಯಿಗಿ ಹಾಕೂವಕ್ಕ. ಒಂದು ಸಾರಿ ಶಿವರಾಯ ಆಕಿ ನಾಯಿಗಿ ಹಾಕೂದು ನೋಡಿ ಈ ಮುದುಕಿ ಬಾಳ ಸೊಕ್ಕಿಂದೈತಿ ಅಂತ ಅವತ್ತಿನಿಂದ ಏನೂ ಕೊಡಲಿಲ್ಲ. ಸ್ವತಃ ತಾನೇ ಹೋಗಿ ರೊಕ್ಕಾ ಕೊಟ್ಟು ತಿಂದು ಬಂದ್ರೇನೇ ಆಕಿಗಿ ಸಮಾಧಾನ. ಬಾಳ ಸಾರಿ ಆಕಿಗಿ ಏನು ಬೇಕು ಅನ್ನೂದೇ ಹೊಟೇಲದವರಿಗಿ ಗೊತ್ತಾಗತಿರಲಿಲ್ಲ. ಏನು..? ಏನು ಬೇಕು..? ಇದಾ.. ಅದಾ.. ಅಂತ ಕೇಳಿ ಸುಸ್ತು ಹೊಡೀತಿದ್ದರು.

ಪಾಪಡ ಮಾರೋ ಚಂದ್ರಣ್ಣ ಯುಗಾದಿ ದಿನ ಈ ಮುದುಕಿಗಿ ತಿನ್ನಾಕ ಅಂತ ಒಂದೆರಡು ಹೋಳಗಿ ತಗೊಂಡು ಬಂದಿದ್ದ. ಆ ಮುದುಕಿ ಅದನ್ನ ತಗೊಳಿಲ್ಲ. ತಾ ಬ್ಯಾರೆಯವರು ಕೊಟ್ಟದ್ದು ತಿನ್ನೂದಿಲ್ಲ ಅಂತ ಅವನ ಎದುರು ಕಡ್ಡೀ ಮುರದಂಗ ಹೇಳಿತ್ತು. ಆಕಿ ಗಂಡನ್ನ ಹಾಂಗ ಅನ್ನದಾಗ ವಿಷಾ ಹಾಕೇ ಸಾಯಿಸಿದ್ದರು ಅಂತ ಚಂದ್ರಣ್ಣನ ಮುಂದ ಅವಳು ಕತಿ ಹೇಳಿದ್ದಳು. ಅದನ್ನ ತಾನೇ ಮಾಡಸೀನಿ ಅಂತ ಗಂಡನ ಮನಿಯವರು ತನಗ ಹೊರಗ ಹಾಕ್ಯಾರ ಅಂತ ಅಳ್ಕೊಂತ ಅವನ ಮುಂದ ಹೇಳಿದ್ದಳು. ಚಂದ್ರಣ್ಣನ ಬಾಯಿಂದ ಅದೆಲ್ಲಾ ಕೇಳಿ ಶಿವರಾಯ, ಆ ಮುದುಕಿ ಯಾಕ ಕೊಟ್ಟದ್ದೆಲ್ಲಾ ನಾಯಿಗಿ ಹಾಕ್ತಿತ್ತು ಅಂತ ಲೆಕ್ಕಾ ಹಾಕಿದ್ದ.

ಅಂಥಾ ಮುದುಕಿಗಿ ಚಾವಡಿ ಹಿಂದಿರೋ ಕಬ್ಬಲಿಗೇರ ಓಣಿಂಯೊಳಗಿನ ಚುಕ್ಕ್ಯೋಳು ಅಂದ್ರ ಬಾಳ ಪ್ರೀತಿ. ಆ ಚುಕ್ಕ್ಯೋಳ ಕಡಿಂದೇ ಚಾ, ತಿಂಡಿ ತರಿಸೂವಕ್ಕ. ಹಂಗ ತಂದು ಕೊಟ್ಟ ಹುಡುಗರಿಗಿ ಎಂಟಾಣೆ ರೊಕ್ಕ ಕೊಡುವಕ್ಕ. ಹಿಂಗಾಗಿ ಹುಡುಗರು ಆ ಮುದುಕಿ ಕರಿಯೂದೇ ಕಾಯಿತ್ತಿದ್ದರು. ಮೊದಮೊದಲ ಈ ಮುದುಕಿ ಬಗ್ಗೆ ಬಾಳ ಮಂದಿಗಿ ಗುಮಾನಿ ಇತ್ತು. ಇಕಿ ಯಾರ ಕಡಿಂದೂ ಭಿಕ್ಷೆ ಬೇಡಲ್ಲ, ಯಾರರೇ ಕೊಟ್ಟದ್ದು ತಿನ್ನೂದೂ ಇಲ್ಲ. ಹಂಗಿದ್ದರ ಬದುಕಿಗಿ ಏನು ಮಾಡ್ತಾಳ ಅನ್ನೂದೇ ತಿಳಿಲಾರದಂಗ ಆಗಿತ್ತು. ಬಾಳ ದಿನಗಳ ಮ್ಯಾಲ ಗೊತ್ತಾಯ್ತು, ಆಕಿಗಿ ತಿಂಗಳಾ ನಾಕುನೂರು ರೂಪಾಯಿ ಪೆನ್ಶನ್ ಬರತೈತಿ ಅಂತ. ಹಂಗ ಬಂದ ದುಡ್ಡಿನೊಳಗೇ ಆಕಿ ಉಳಿಸಿ ಇಡತಿದ್ದಳು. ಶಿವರಾಯನ ಅಂಗಡಿ ಹಿಂದೇ ಚಾವಡಿ. ಮಂದಿ ಯಾರರೇ ಆ ಮುದುಕಿ ಯಾರು ಅಂತ ಕೇಳಿದ್ರೇ ಅಂವಾ ಆಕಿ ಕತಿ ಹೇಳ್ತಿದ್ದ.

ಇಂಥಾ ಮುದುಕಿ ಅವತ್ತ ಹಂಗ ಮಲಗದಕ್ಕ, ಎರಡು ದಿನಾ ಆದರೂ ಮ್ಯಾಲ ಏಳಲೇ ಇಲ್ಲ. ಮುನಸೀಪಲ್ಟಿ ಕಸಾ ಹೊಡಿಯೋ ಹೆಂಗಸರು ಶಿವರಾಯಗ 'ಆ ಮುದಕಿಗಿ ಹುಷಾರಿದ್ದಂಗ ಇಲ್ಲ, ಸತ್ಗಿತ್ತಿತ್ತೋ ಮಾರಾಯಾ..?' ಅಂದಾಗಷ್ಟೇ ಶಿವರಾಯ ಸನ್ಯಾಕ ಹೋಗಿ ನೋಡಿದ್ದ. ಬಾಳ ಜ್ವರಾ ಬಂದಂಗಿತ್ತು, ಒಂದು ಸವನ ಊಂ..ಊಂ ಅಂತ ನರಳತಿತ್ತು. ಶಿವರಾಯ ಜೋರಾಗಿ 'ಏ ಮುದುಕಿ.. ಏ ಮುದುಕಿ' ಅಂತ ಕೂಗದ. ಆಕಿ ಸವಕಾಶ ಕಣ್ಣು ಬಿಟ್ಟಳು. ಇಂವಾ ತುಸು ಹಗರಾದ. ಅಂತೂ ಜೀವಂತ ಅದಾಳ ಅಂತ ಧೈರ್ಯ ಬಂತು 'ಏನರೇ ತಿಂತಿಯೋ ಹೆಂಗೊ..?' ಅಂತ ಕೇಳದಂಗ ಮಾಡದ. ಆಕಿ ಒಲ್ಲೆ ಅನ್ನೋ ಥರಾ ಕೈ ಮಾಡಿದಲು.

ಅವತ್ತೊಂದಿನ ಯಾರೋ ಒಬ್ಬಾತ ತಾನು ಮುದುಕಿಯ ಸಂಬಂಧಿ ಅಂತ ಬೆಳ್ಳಂಬೆಳಿಗ್ಗೇನೇ ಬಂದು ಬಿಟ್ಟಿದ್ದ. ಅಂವಾ ತೆಲುಗು ಭಾಷೆ ಜೊತೆಗೆ ಕನ್ನಡಾನೂ ಮಾತಾಡತಿದ್ದ. ಅಂವಾ ಮುದಕಿನ್ನ ಕೈ ಹಿಡದು ಎಬ್ಬಿಸಿ ಕೂಡಸದ. ಚಹಾ ತಗೊಂಡು ಬಂದು ಕುಡಸದ. ಆಕಿ ಸಂಗಡ ಸ್ವಲ್ಪ ಹೊತ್ತು ತೆಲುಗು ಭಾಷೆಂಯೊಳಗ ಮಾತಾಡಿದ. ಆಕಿನ ಜೋಡಿ ಏನು ಮಾತಾಡದ ಅನ್ನೂದು ಶಿವರಾಯಗಂತೂ ತಿಳಿಲಿಲ್ಲ.

'ಇವಳು ನಮ್ಮ ಅತ್ತಿ ಆಗಬೇಕ್ರಿ. ಅಂದ್ರ ಖಾಸಾ ನಮ್ಮ ಅಪ್ಪನ ತಂಗಿರಿ. ಚುಲೋ ಮನಿತನ. ಇಕಿ ಹೆಸರಲೆ ಸಾಕಷ್ಟು ಆಸ್ತಿ ಐತಿರಿ. ಆದರ ಏನು ಮಾಡೂದು..? ಇಕಿ ಪರಿಸ್ಥಿತಿ ಹಿಂಗೈತಿ. ಈಗ ಊರಾಗ ಎಲ್ಲಾರೂ ಇಕಿನ್ನ ಹುಡಕಾಡಾಕತ್ತಾರ. ಇಕಿನ್ನ ಹುಡಕಲಾರದ ಜಾಗಾನೇ ಇಲ್ಲರಿ. ಚುಲೊ ಐತು, ಅಂತೂ ಸಿಕ್ಕಳಲ್ಲರೀ' ಅಂತ ಕಣ್ಣೀರ ತಗದಂಗ ಮಾಡಿದ್ದ. ಅಂವಾ ಕನ್ನಡದೊಳಗ ಅದೇನು ಮಾತಾಡಾಕತ್ತಾನ ಅನ್ನೂದು ಆ ಮುದುಕಿಗೂ ತಿಳೀಲಿಲ್ಲ. 'ನಾಳೆ ಬಂದು ಆಕಿನ್ನ ಕರಕೊಂಡು ಹೋಗ್ತೀನಿ. ಅಲ್ಲೀಮಟ ಸ್ವಲ್ಪ ಹಿಂಗೇ ಒಂದು ನಜರ ಇರಲಿ. ನಿಮ್ಮದು ಬಾಳ ಉಪಕಾರ ಆಯ್ತು' ಅಂತೆಲ್ಲಾ ಹೇಳಿ ಅಲ್ಲಿಂದ ಹೋದ ಆ ಆಸಾಮಿ ಮತ್ತ ಕಾಣಿಸಿಕೊಳ್ಳಲೇ ಇಲ್ಲ.

ಮರುದಿನ ಬೆಳಿಗ್ಗೆ ಚಾವಡಿ ಕಟ್ಟೆಂಯ ಮ್ಯಾಲ ಆ ಮುದುಕಿ ಇರಲಿಲ್ಲ, ಅವಳ ಹಾಸಗಿ, ಹೊದಕಿ ಎಲ್ಲಾ ಅಲ್ಲೇ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ವು. ಒಡಕ ಬಟ್ಟಲು, ಹರಕು ಚಪ್ಪಲಿ, ತಲೆದಿಂಬು ಅವಳ ಪಳೆಯುಳಿಕೆಯಂತೆ ಕಾಣತಿದ್ವು. ಅಂತೂ ಮುದುಕಿ ಸೇರಬೇಕಾದ ಜಾಗಕ್ಕ ಸೇರತು ಅನ್ನೊಂತ ಶಿವರಾಯ ಅಂಗಡಿ ಬಾಗಿಲು ತಗೀತಿದ್ದ. ಚಾದಂಗಡಿ ಚಂದ್ರಣ್ಣ ಬಂದವನೇ 'ಶಿವರಾಯ, ಇಲ್ಲಿ ಚಾವಡಿಯೊಳಗ ಒಂದು ಮುದುಕಿ ಇರತಿತ್ತಲ್ಲ..? ಅದು ಸತ್ತು ಸುಡುಗಾಡದಾಗ ಬಿದ್ದಾಳಂತಲ್ಲ..?' ಅಂದದ್ದೇ ಶಿವರಾಯಗ ಶಾಕ್ ಹೊಡದಂಗ ಆಯ್ತು. ಅದ್ಯಾವನೋ ಬಂದು ಸಂಬಂಧಿ ಅಂತ ಕರಕೊಂಡು ಹೋದ ಅಂತ ಹೇಳಬೇಕು ಅನ್ನೂದರೊಳಗ ತನಗ್ಯಾಕ ಬೇಕು ಒಣಾ ಉಸಾಬರಿ ಅಂತ ಯೋಚನೆ ಮಾಡಿ 'ಹೌದಾ..? ಯಲಾ ಇವನ ಪಾಪ..! ಮೊನ್ನೆಯಿಂದಲೂ ಅದಕ್ಕ ಅರಾಮ ಇರಲಿಲ್ಲ. ರಾತ್ರಿ ಬೆಳತಾನ ನರಳತಿತ್ತು ಅಂತ ಕಸಾ ಹೊಡಿಯೋ ಹೆಂಗಸರು ಹೇಳತಿದ್ದರು. ಯಮನಪ್ಪ ಭೇಟಿ ಆಯ್ತು. ತಗೋರೋ ಮಾರಾಯಾ ಪುಣ್ಯಾ ಮಾಡಕೊಂಡಳು. ಹಿಂದಿಲ್ಲ ಮುಂದಿಲ್ಲ ಏನು ಮಾಡ್ತಾಳ ಉಳದರೇ.. ಚುಲೋ ಸಾವು' ಅನ್ನೊಂತ ತನ್ನ ಅಂಗಡಿ ಕಡಿ ನಡದ.

ಶಿವರಾಯ ಏನೂ ನಡದೇ ಇಲ್ಲ ಅನ್ನೂವಂಗ ಅಂಗಡಿ ಬಾಗಿಲ ತಗೀತಿದ್ದ. ಆ ನಾಯಿ ಕುನ್ನಿ ಇನ್ನೂ ಮುದುಕೀ ಹಾಸಗೀ ಯೊಳಗೇ ಕುತಗೊಂಡಿತ್ತು. ❖

# ಅಜಿತುಗೆ ಅಸ್ತಮಾ ಅಟ್ಯಾಕ್ ಆದಾಗ

ಡೆಕ್ಸಿಡೆಂಟ್ ಆದನಂತರ ಅಜಿತು ತುಂಬಾ ಖಿನ್ನನಾದ. ಆತನಿಗೆ ಪ್ರಿಯವಾದ ಕ್ರಿಕೆಟ್ ಆಡುವಂತಿರಲಿಲ್ಲ, ಒಂದು ವರ್ಷ ಕಾಲೇಜ್‌ಗೆ ಹೋಗುವಂತಿಲ್ಲ, ಅವನ ಜೀವನದ ದಾರಿಯೇ ಬೇರೆ ಆಗಿಹೋಯಿತು. ಅವನ ಸ್ನೇಹಿತರೆಲ್ಲ ಅವನಿಗಿಂತ ಮುಂದೆ ಹೋದರು. ಅಜಿತುಗೆ ಮತ್ತೆ ಅದೇ ಕಾಲೇಜಿಗೆ ಹೋಗಿ ತನ್ನ ಸ್ನೇಹಿತರಿಗಿಂತ ಜೂನಿಯರ್ ಆಗುವ ಇಷ್ಟವಿರಲಿಲ್ಲ, ಓದಿನಲ್ಲೂ ಭಾಗಶಃ ಆಸಕ್ತಿ ಕಡಿಮೆ ಆಯಿತು. ಆಗ ಆತ ಕಾಲೇಜು ತೊರೆದು ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್ ಸೇರಿಕೊಂಡು ಅದರಲ್ಲೇ ಡಿಪ್ಲೋಮಾ ಮಾಡಿದ.

* * * * * * *

ಸಾಧ್ಯವಾದಾಗಲೆಲ್ಲ ಬೇಬಿ ಅಂಗಡಿಗೆ ಬಂದು ನನಗೆ ಸಹಾಯ ಮಾಡುತ್ತಿದ್ದಳು. ನನ್ನ ಅಂಗಡಿಯಲ್ಲಿ ಕೆಲವು ಗ್ರಾಹಕರಿಗೆ ತಿಂಗಳ ಕಂತುಗಳ ಮೇಲೆ ಸೀರೆಗಳನ್ನು ಕೊಡುತ್ತಿದ್ದೆ. ಆದರೆ ಅಂತಹವರಲ್ಲಿ ಕೆಲವರು ಸರಿಯಾಗಿ ಕಂತುಗಳನ್ನು ಕಟ್ಟದೆ ಬಾಕಿ ಉಳಿಸಿಕೊಂಡಿದ್ದರು. ಇನ್ನು ಮುಂದೆ ಅಂಥವರಿಗೆ ಸಾಲ ಕೊಡಕೂಡದೆಂದು ಅವರ ಹೆಸರುಗಳನ್ನು ಒಂದು ಪುಸ್ತಕದಲ್ಲಿ ಪಟ್ಟಿ ಮಾಡಿ ಇಟ್ಟಿದ್ದೆ.

ಒಮ್ಮೆ ಬೇಬಿ ಅಂಗಡಿಯಲ್ಲಿದ್ದಾಗ ಆ ಪಟ್ಟಿಯಲ್ಲಿದ್ದ ಒಬ್ಬರು ಅಂಗಡಿಗೆ ಬಂದು ಸೀರೆಯನ್ನು ಸೆಲೆಕ್ಟ್ ಮಾಡಿ ಅದನ್ನು ಸಾಲದ ಮೇಲೆ ಕೊಡಲು ಬೇಬಿಯನ್ನು ಕೇಳಿದರು. ಆಗ ನಾನು ಮೇಲಿನ ಅಂಗಡಿಯಲ್ಲಿದ್ದೆ. ಆದರೆ ಅವರ ಹೆಸರು ಸಾಲ ಉಳಿಸಿಕೊಂಡಿದ್ದವರ ಪಟ್ಟಿಯಲ್ಲಿದ್ದಿದ್ದರಿಂದ ಬೇಬಿ ಸಾಲ ಕೊಡಲು ನಿರಾಕರಿಸಿದಳು.

ಅವರು ನಾನಿದ್ದಲ್ಲಿಗೆ ಬಂದು "ಹೋದ ಸಲ ಏನೋ ತೊಂದರೆ ಇತ್ತು, ಈ ಬಾರಿ ಬೇಕಿದ್ದರೆ ಚೆಕ್ ಕೊಡುತ್ತೇನೆ" ಎಂದು ನನ್ನನ್ನು ಕೇಳಿದರು. ಆಗ ನಾನು ಬೇಬಿಗೆ "ಸಾಲ ಕೊಡು ಪರವಾಗಿಲ್ಲ" ಎಂದು ಹೇಳಿದೆ. ಅದನ್ನು ಕೇಳಿ ಬೇಬಿಗೆ ತುಂಬಾ ಸಿಟ್ಟು ಬಂತು. "ಅವರಿಗೆ ಸಾಲ ಕೊಡುವುದಿದ್ದರೆ ಅವರ ಹೆಸರನ್ನೇಕೆ ಪುಸ್ತಕದಲ್ಲಿ ಬರೆದಿಟ್ಟೆ. ನೀನೂ ಬೇಡ ನಿನ್ನ ಅಂಗಡಿನೂ ಬೇಡ" ಅಂತ ಆಕೆ ಅಂಗಡಿಯಿಂದ ಹೊರಟುಹೋದಳು.

ಅದರಿಂದ ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು ಎಂದು ಈಗ ಅನ್ನಿಸುತ್ತೆ. ಯಾಕೆಂದರೆ ಅವಳು ಅಂಗಡಿಯಲ್ಲಿದ್ದರೆ ಇವತ್ತು ನಮ್ಮ ಬೇಬಿ ಖ್ಯಾತ ಸಿನಿಮಾ ನಿರ್ದೇಶಕಿ ಆಗುತ್ತಿರಲಿಲ್ಲವೇನೋ!

* * * * * * *

ಡಿಗ್ರಿ ಮುಗಿಸಿದ ಬೇಬಿ ತನ್ನ ಕಾಲ ಮೇಲೆ ನಿಲ್ಲಲು ಯಾವುದೋ ಕಂಪ್ಯೂಟರ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದಳು. ಆಗ ಆಕೆಗೆ ಅವರು ಕೊಡುತ್ತಿದ್ದದ್ದು ತಿಂಗಳಿಗೆ ಕೇವಲ 250 ರೂಪಾಯಿ ಸಂಬಳ. ಆದರೂ ಆಕೆ ಬೆಂಗಳೂರನ್ನೆಲ್ಲ ಸುತ್ತಿ ಕಂಪನಿಗೆ ಗ್ರಾಹಕರನ್ನು ತರುತ್ತಿದ್ದಳು. ಅವರು ಕೊಡುತ್ತಿದ್ದ ಸಂಬಳ ಆಕೆಯ ಮೋಟಾರ್ ಸೈಕಲ್‌ನ ಪೆಟ್ರೋಲ್‌ಗೆ ಸಾಕಾಗುತ್ತಿರಲಿಲ್ಲ, ಆಕೆ ಎಲ್ಲೆಡೆ ಸುತ್ತುತ್ತಿದ್ದರಿಂದ ಆಕೆಯ ಮುಖ ಕಪ್ಪಗಾಗಿತ್ತು.

ಸ್ವಲ್ಪ ದಿನಗಳ ನಂತರ ಆಕೆ ಆ ಕಂಪ್ಯೂಟರ್ ಕಂಪನಿಯನ್ನು ತೊರೆದು ಒಂದು ಪುಟ್ಟ ಜಾಹೀರಾತು ಕಂಪನಿಯಲ್ಲಿ ಕೆಲಸಕ್ಕೆ ಸೇರಿದಳು. ಆಕೆ ಹೊತ್ತಿಗೆ ಸರಿಯಾಗಿ ಕೆಲಸಕ್ಕೆ ಹೋಗುತ್ತಿದ್ದಳು. ಚೆನ್ನಾಗಿ ಕೆಲಸ ಮಾಡುತ್ತಿದ್ದಳು. ಆ ಕಂಪನಿಯವರು ಬ್ಯಾಂಕ್‌ಗೆ ದುಡ್ಡು ಕಟ್ಟಲು ಬೇಬಿಯನ್ನು ಕಳುಹಿಸುತ್ತಿದ್ದರು. ಆಗ "ನಮ್ಮ ಅಮ್ಮನ ಅಂಗಡಿಯಲ್ಲಿ ಇಂತಹ ಕೆಲಸಕ್ಕೆಲ್ಲಾ ಅಂಗಡಿ ಹುಡುಗಿಯರನ್ನು ಕಳುಹಿಸುತ್ತೆ. ಆದರೆ ನಾನು ಇಲ್ಲಿ ಬೇರೆಯವರ ಕಂಪನಿಯಲ್ಲಿ ಈ ಕೆಲಸ ಮಾಡುತ್ತಿದ್ದೇನೆ. ಈ ಕೆಲಸವನ್ನು ನಾನು ಅಮ್ಮನ ಅಂಗಡಿಯಲ್ಲೇ ಮಾಡಬಹುದಲ್ಲಾ" ಎನ್ನಿಸುತ್ತಿತ್ತಂತೆ ಆಕೆಗೆ.

ಕೆಲ ಸಮಯದ ನಂತರ ಆ ಕಂಪನಿಯನ್ನು ತೊರೆದ ಬೇಬಿ ತನ್ನದೇ ಆದ ಜಾಹೀರಾತು ಕಂಪನಿಯನ್ನು ಪ್ರಾರಂಭಿಸಿದಳು. ಬಸವನಗುಡಿಯಲ್ಲಿದ್ದ ಲಂಕೇಶ್ ಪತ್ರಿಕೆಯ ಕಚೇರಿಯ ಎರಡನೆ ಮಹಡಿಯಲ್ಲಿದ್ದ ಕೊಠಡಿ (ಅಂದರೆ ಈ ಹಿಂದೆ ಪತ್ರಿಕೆ ಪ್ರಾರಂಭವಾಗಿದ್ದ ಕೊಠಡಿಯಲ್ಲಿ) ತನ್ನ ಆಫೀಸನ್ನು ತೆರೆದಳು. ಆಕೆ ತುಂಬಾ ಶ್ರಮಜೀವಿ. ದಿನಕ್ಕೆ 100 ರಿಂದ 150 ಕಿಲೋ ಮೀಟರ್ ಬೈಕ್‌ನಲ್ಲೇ ಸುತ್ತಿ ಕಾಂಟ್ರಾಕ್ಟುಗಳನ್ನು ಪಡೆಯುತ್ತಿದ್ದಳು. ಯಾರನ್ನೇ ಆಗಲಿ ಯಾವ ಅಳುಕು ಅಂಜಿಕೆ ಇಲ್ಲದೇ ಹೋಗಿ ಮಾತಾಡಿಸುತ್ತಿದ್ದಳು. ಸರ್ಕಾರಿ ಕೆಲಸಗಳನ್ನು ಹಿಡಿಯುತ್ತಿದ್ದಳು. ತನ್ನ ಸಂಸ್ಥೆಯಲ್ಲಿ ಆರ್ಟ್‌ವರ್ಕ್‌ಗೆ ಅಂತ ಇಬ್ಬರನ್ನು ನೇಮಿಸಿಕೊಂಡಳು. ಮೊದಮೊದಲು ಆದಾಯ ಕಮ್ಮಿ ಇತ್ತು, ನಂತರ ಉದ್ಧಾರ ಆದಳು.



* * * * * * *

ಲಂಕೇಶರಿಗೆ ಶುಗರ್ ಜಾಸ್ತಿ ಆಗಲಾರಂಭಿಸಿತು. ಪ್ರತಿದಿನವೂ ಇನ್ಸುಲಿನ್ ಇಂಜೆಕ್ಷನ್ ತೆಗೆದುಕೊಳ್ಳಲು ಶುರುಮಾಡಿದರು. ಈ ಹಿಂದೆ ಒಂದು ಇಂಜೆಕ್ಷನ್ ತೆಗೆದುಕೊಳ್ಳಲು ಹೆದರುತ್ತಿದ್ದ ಲಂಕೇಶರು ಈಗ ಅವರೇ ತಮ್ಮ ದೇಹವನ್ನು ಇಂಜೆಕ್ಟ್ ಮಾಡಿಕೊಳ್ಳುವುದನ್ನು ನೋಡಿದರೆ ಪಾಪ ಅನ್ನಿಸುತ್ತಿತ್ತು.

ಶುಗರ್ ಜಾಸ್ತಿ ಆಗಿದ್ದರಿಂದ ನಿಧಾನವಾಗಿ ಅವರ ಒಂದು ಕಣ್ಣಿನಲ್ಲಿ ತೊಂದರೆ ಕಾಣಿಸಿಕೊಂಡಿತು. ಆದರೆ ಅದರ ಬಗ್ಗೆ ಲಂಕೇಶರು ಯಾರಿಗೂ ಹೇಳದಿದ್ದರಿಂದ ಆರಂಭದಲ್ಲಿ ಆ ಸಮಸ್ಯೆ ಬಗ್ಗೆ ಯಾರಿಗೂ ಗೊತ್ತಾಗಲಿಲ್ಲ.

ಆ ಕಣ್ಣಿನ ಸಮಸ್ಯೆಯ ನಡುವೆಯೇ ಅವರು ತಮ್ಮ ಪತ್ರಿಕೆ ಕೆಲಸ, ಬರವಣಿಗೆ, ತೋಟ ಎಲ್ಲವನ್ನು ತಪ್ಪದೆ ಮಾಡುತ್ತಿದ್ದರು.

* * * * * * *


ಮದುವೆಯಾದ ನಂತರ ಗೌರಿ ಮತ್ತು ಚಿದು ನಮ್ಮ ಮನೆಯ ಹತ್ತಿರವೇ ಬಾಡಿಗೆಮನೆ ಹಿಡಿದಿದ್ದರು. ಇದರ ಬಗ್ಗೆ ಚಿದುನ ಅಪ್ಪ ಮತ್ತು ಅಮ್ಮನಿಗೆ ಬೇಸರವಾಗಿದ್ದರೂ ತಾನು ತನ್ನ ಅಪ್ಪ-ಅಮ್ಮ-ತಂಗಿ-ತಮ್ಮನ ಹತ್ತಿರ ಇದ್ದಿದ್ದರಿಂದ ಗೌರಿಗೆ ನೆಮ್ಮದಿ ಇತ್ತು, ಲಂಕೇಶರು ಬೆಳಗ್ಗೆ ವಾಕಿಂಗ್ ಹೋದಾಗ ಕೆಲವೊಮ್ಮೆ ಮಗಳು ಮತ್ತು ಅಳಿಯನ ಮನೆಗೆ ಭೇಟಿ ನೀಡುತ್ತಿದ್ದರು. ಆಗ ಅವರಿಬ್ಬರದ್ದು ಹೊಸ ಸಂಸಾರವಾದ್ದರಿಂದ ಮನೆಯಲ್ಲಿ ಅಗತ್ಯವಾದ ಎಲ್ಲ ಸಾಮಾನುಗಳು ಇರಲಿಲ್ಲ, ಇಬ್ಬರೂ ನೆಲದಮೇಲೆ ಹಾಸಿಗೆ ಹಾಸಿಕೊಂಡು ಮಲಗುತ್ತಿದ್ದರು.

ಒಮ್ಮೆ ಲಂಕೇಶರು "ಆಫೀಸಿಗೆ ಹೋಗುವಾಗ ನಿನ್ನ ಮನೆಯ ಬೀಗದ ಕೀಲಿಅನ್ನು ನನ್ನ ಆಫೀಸಿನಲ್ಲಿ ಬಿಟ್ಟುಹೋಗು" ಎಂದು ಗೌರಿಗೆ ಹೇಳಿದರು. "ಯಾಕೆ?" ಎಂದು ಆಕೆ ಕೇಳಿದಾಗ "ಸುಮ್ಮನೆ ಕೊಟ್ಟು ಹೋಗು" ಅಂದರು ಆಕೆಯ ಅಪ್ಪ, ಗೌರಿ ಮತ್ತು ಚಿದು ಕೆಲಸ ಮುಗಿಸಿ ರಾತ್ರಿ ಮನೆಗೆ ಬರುವ ಮುನ್ನ ಲಂಕೇಶರ ಆಫೀಸಿಗೆ ಹೋಗಿ ತಮ್ಮ ಮನೆಯ ಕೀಲಿಅನ್ನು ಪಡೆದು ಬಂದು ನೋಡಿದರೆ, ಮನೆಯ ಹಾಲ್‌ನಲ್ಲಿ ಎರಡು ಹೊಸ ಮಂಚಗಳು ಇದ್ದವು. ಏನಾಗಿತ್ತೆಂದರೆ ಲಂಕೇಶರು ತಮ್ಮ ಸಹಾಯಕರಿಗೆ ದುಡ್ಡು ಕೊಟ್ಟು, ಮಂಚಗಳನ್ನು ಖರೀದಿಸಿ, ಗೌರಿಯ ಮನೆಯಲ್ಲಿ ಅದನ್ನು ಇಟ್ಟುಬರಲು ಹೇಳಿದ್ದರು. ಅವರು ಹಾಗೆಯೇ ಮಾಡಿದ್ದರು. ಮರುದಿನ ಮಗಳ ಮನೆಗೆ ಹೋದ ಲಂಕೇಶರು ಸುಮ್ಮನೆ "ಮೀಯಾಂವ್" ಎಂದು ವಾಪಸ್ ಬಂದಿದ್ದರು.

* * * * * * *

ಒಮ್ಮೆ ಕೈಗಾ ಅಣುಸ್ಥಾವರ ಕುರಿತು ವರದಿ ಬರೆಯಲು ಹೋದ ಚಿದು ತನ್ನ ಜೊತೆ ಬೇಬಿಯನ್ನು ಕರೆದುಕೊಂಡು ಹೋಗಿದ್ದ. ಆಗ ಗೌರಿ ತನ್ನ ಮನೆಯಲ್ಲಿ ಒಬ್ಬಳೇ ಇರುವುದು ಬೇಡವೆಂದು ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದಳು. ಅವತ್ತು ರಾತ್ರಿ ಅಜಿತುಗೆ ಇದ್ದಕ್ಕಿದ್ದಂತೆ ಅಸ್ತಮಾ ಅಟ್ಯಾಕ್ ಆಯಿತು. ಅದು ಹೇಗೋ ತನ್ನ ಪಕ್ಕದ ರೂಮಿನಲ್ಲಿ ಮಲಗಿಕೊಂಡಿದ್ದ ಗೌರಿಯನ್ನು ಎಬ್ಬಿಸಿದ ಅಜಿತು ಮತ್ತೆ ತನ್ನ ಕೊಠಡಿಗೆ ಹೋಗಿ ಮಂಚದಮೇಲೆ ಮುದುಡಿಕೊಂಡು ಬಿದ್ದಿದ್ದ. ಆತನಿಗೆ ಉಸಿರಾಡುವುದೂ ಕಷ್ಟವಾಗಿ ಬೆವರುತ್ತಿದ್ದ. ಗೌರಿ ನನ್ನನ್ನು ಮತ್ತು ತನ್ನ ಅಪ್ಪನನ್ನು ಎದ್ದೇಳಿಸಿ ನರ್ಸಿಂಗ್ ಹೋಮಿಗೆ ಫೋನ್ ಮಾಡಿ ಅಜಿತುನನ್ನು ನರ್ಸಿಂಗ್ ಹೋಮಿಗೆ ಕರೆದುಕೊಂಡು ಹೋಗಲು ತಯಾರಿ ಮಾಡಲಾರಂಭಿಸಿದಳು.

ಅಜಿತು ರೂಮಿಗೆ ನಾನು ಮತ್ತು ಲಂಕೇಶರು ಧಾವಿಸಿದೆವು. ಅಲ್ಲಿ ಅಜಿತು ಇದ್ದ ಸ್ಥಿತಿಯನ್ನು ಕಂಡು ನಾನು ಜೋರಗಿ ಅಳಲಾರಂಭಿಸಿದೆ. ಲಂಕೇಶರಿಗೆ ಏನು ಮಾಡುವುದೆಂದು ತೋಚದೆ ತಬ್ಬಿಬ್ಬಾದರು. ನಮ್ಮಿಬ್ಬರದ್ದು ಹೆತ್ತವರ ನೋವು. ನಾನಾದರೂ ನನ್ನ ಮಗನನ್ನು ನನ್ನ ತೊಡೆಯ ಮೇಲೆ ಹಾಕಿಕೊಂಡು ಕಣ್ಣೀರಿಡುವ ಮೂಲಕ ನನ್ನ ನೋವನ್ನು ವ್ಯಕ್ತಪಡಿಸುತ್ತಿದ್ದೆ. ಆದರೆ ಲಂಕೇಶರಿಗೆ ಬೇಸರ, ಆತಂಕ, ಕೋಪ ಎಲ್ಲವೂ ಒಮ್ಮೆಗೆ ಮೂಡಿ ನನ್ನನ್ನು ಬಯ್ಯಲು ಶುರುಮಾಡಿದರು. "ನೀನು ನಿನ್ನ ಅಂಗಡಿ ಅಂಗಡಿ ಅಂತ ಸಾಯುತ್ತಾ ನನ್ನ ಮಗನನ್ನು ನೀನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ. ಅದಕ್ಕೇ ಅವನಿಗೆ ಹೀಗೆ ಆಗಿದೆ" ಎಂದೆಲ್ಲಾ ಜೋರಾಗಿ ಬೈದರು.




ಅದನ್ನು ಕೇಳಿ ನನ್ನ ನೋವು ಇಮ್ಮಡಿ ಆಯಿತು. ನನ್ನ ಬದುಕಿನಲ್ಲಿ ಒಂದಿಷ್ಟು ಉತ್ಸಾಹ ಮೂಡಿಸಿದ್ದ ನನ್ನ ಅಂಗಡಿ; ನನಗೆ ನೆಮ್ಮದಿ ತಂದಿದ್ದ ಅಂಗಡಿ; ಲಂಕೇಶರಿಗೆ ಉದ್ಯೋಗ ಇಲ್ಲದಿದ್ದಾಗ ನಮ್ಮ ಮನೆತನಕ್ಕೆ ಬೆನ್ನೆಲುಬಾಗಿದ್ದ ಅಂಗಡಿ; ನನ್ನ ಎಲ್ಲ ಕಷ್ಟಗಳ ನಡುವೆಯೂ ಮನೆ ಮತ್ತು ಮಕ್ಕಳನ್ನು ನಾನು ನೋಡಿಕೊಳ್ಳುತ್ತಿದ್ದರೂ ಲಂಕೇಶರು ನನ್ನ... ನನ್ನ ಅಂಗಡಿಯನ್ನೇ ನಮ್ಮ ಮಗನ ಅನಾರೋ... ದೂಷಿಸಿದ್ದನ್ನು ಕೇಳಿ ನನಗೆ ಇನ್ನಷ್ಟು ನೋವಾಯಿತು... ಇನ್ನೂ ಜೋರಾಗಿ ಅಳಲು ಆರಂಭಿಸಿದೆ. ಅಷ್ಟು... ಎಲ್ಲ ಸಿದ್ಧತೆಯನ್ನು ಮಾಡಿದ್ದ ಗೌರಿ ನಮ್ಮಿಬ್ಬರ ಜಗ... ನಿಲ್ಲಿಸಿ ಕಾರಿನಲ್ಲಿ ತನ್ನ ತಮ್ಮನನ್ನು ಕರೆದುಕೊಂಡು ನ... ಹೋಮ್‌ಗೆ ಹೋಗಿ ಆತನಿಗೆ ಚಿಕಿತ್ಸೆ ಕೊಡಿಸಿಕ... ಬಂದಳು.

ಮಾರನೆ ದಿನ ಬೆಳಗ್ಗೆ ಲಂಕೇಶರು ಆಫೀಸಿಗೆ ಹೋ... ಮುನ್ನ ತಿಂಡಿ ತಿನ್ನುತ್ತಿರುವಾಗ ಗೌರಿಗೆ ಅದೆಲ್ಲಿಂದ ಬ... ಕೋಪ. "ಇನ್ನು ಮುಂದೆ ನೀನು ಅಮ್ಮನಿಗೆ ಹಾಗೆಲ್ಲ... ಕೂಡದು. ನೀನು ಮತ್ತೊಮ್ಮೆ ಅಮ್ಮನನ್ನು ಬೈದರೆ... ಅಮ್ಮನನ್ನು ಲಾಯರ್ ಹತ್ತಿರ ಕರೆದುಕೊಂಡು ಹೋಗಿ... ಡೈವೋರ್ಸ್ ಕೊಡಿಸುತ್ತೇನೆ" ಎಂದಳು.

ಲಂಕೇಶರಿಗೆ ಅದನ್ನು ಕೇಳಿ ಶಾಕ್ ಆಯಿತು. ... ಮರುಮಾತಿಲ್ಲದೆ ಆಫೀಸಿಗೆ ಹೋದರು. ಎರಡು ದಿನ ... ಗೌರಿಯನ್ನು ಮಾತನಾಡಿಸಲಿಲ್ಲ, ಆಕೆಯೂ ಸುಮ್ಮನೆ ... ಆದರೆ ಮೂರನೆ ದಿನ ಲಂಕೇಶರು ಮನೆಗೆ ವಾಪಸ್ ಬ... ಗೌರಿ ಹಾಲಿನಲ್ಲಿ ಟಿವಿ ನೋಡುತ್ತ ಕೂತಿದ್ದಳು. ಲಂ... ಗೌರಿಯ ಗಲ್ಲ ಸವರಿ "ಸಾರಿ" ಎಂದರು. ಆನಂತರ ... ಬದುಕಿದ್ದಷ್ಟೂ ದಿನ ಮತ್ತೆ ಎಂದೂ ನನ್ನನ್ನು ಯಾ... ಕಾರಣಕ್ಕೂ ಬೈಯಲಿಲ್ಲ, ಜೋರಾದ ದನಿ... ಮಾತನಾಡಿಸಲಿಲ್ಲ...

* * * * * * *

ನಾನು ಭಾವಸಾರ್ ಚಿಟ್ ಫಂಡ್‌ನಲ್ಲಿ ಚೀಟಿ ಕಟ್ಟ... ಪ್ರತಿಬಾರಿ ಚೀಟಿ ಮುಗಿದ ನಂತರ ನನ್ನ ಕೈಗೆ 50 ... ಅಥವಾ ಒಂದು ಲಕ್ಷ ರೂಪಾಯಿ ಸೇರುತ್ತಿತ್ತು. ಹಾಗೆ... ದುಡ್ಡನ್ನೆಲ್ಲ ಸಂಗ್ರಹಿಸಿ ಆಗಿನ್ನೂ ದುರ್ಗಮ ಪ್ರದೇಶದ... ರಾಜರಾಜೇಶ್ವರಿ ನಗರದಲ್ಲಿ ಒಂದು ಸೈಟು ಕೊಂಡುಕೊ... ಆ ಸೈಟಿನಲ್ಲಿ ಒಂದು ಪುಟ್ಟ ಮನೆ ಕಟ್ಟಬೇಕೆನ್ನುವ ಆಸೆ ನ... ಅದಕ್ಕೆ ಅಗತ್ಯವಾದ ದುಡ್ಡನ್ನೂ ಕೂಡಿಟ್ಟೆ.

ಹೀಗೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡನಂತರ ... ಬ್ಬರು ಇಂಜಿನಿಯರ್‌ಗಳನ್ನು ಸಂಪರ್ಕಿಸಿದೆ. ಮನೆ ಕ... ಕೆಲಸ ಪ್ರಾರಂಭಿಸುವ ಮುನ್ನ ಸೈಟನ್ನು ಅಳತೆ ಮಾಡಿ... ದಾಖಲೆಗಳ ಪ್ರಕಾರ ಸೈಟಿನ ಅಳತೆ ಒಂದು ಕಡೆ 5... ಮತ್ತು ಇನ್ನೊಂದು ಕಡೆ 50x69 ಇರಬೇಕಿತ್ತು. ಆದ... ಹಿಂದೆ ಇದ್ದು ಒಂದು ದೊಡ್ಡ ಸೈಟನ್ನೇ ಐಡಿಯಲ್ ಹೌ... ಸೊಸೈಟಿಯವರು ನಾಲ್ಕು ಭಾಗಗಳಾಗಿ ವಿಂಗಡಿಸಿ... ನನ್ನ ಸೈಟಿನ ಭಾಗವಾಗಿ ಏಳು ಅಡಿ ಹೆಚ್ಚಿನ ಜಾಗ... ಸಿಕ್ಕಿತ್ತು. ಆಗ ಸೊಸೈಟಿಯವರು "ನೀವು ಆ ಏಳು... ಜಾಗವನ್ನು ಉಪಯೋಗಿಸಿಕೊಂಡು ಮನೆ ಕಟ್ಟಿಸಿರಿ. ಮ... ನೀವು ಆ ಏಳು ಅಡಿ ... ಹೆಚ್ಚು ಹಣ ಕಟ್ಟಬಹುದು" ಎಂದರು. ಹಾಗೆ ಮಾ... ಯಾರಾದರೂ ತಪ್ಪು ಕಲ್ಪಿಸಿಕೊಂಡು ಲಂಕೇಶರ ಹ... ಕಾನೂನುಬಾಹಿರವಾದ ಕೆಲಸ ಮಾಡಿದ್ದಾಳೆ ಎಂದು ಆ... ಸಿದರೆ? ಅಂತಹ ಯಾವುದರ ಉಸಾಬರಿಯೂ ಬೇಡ ... ಆ ಏಳು ಅಡಿಗಳನ್ನು ಹಾಗೆ ಬಿಟ್ಟು ಮನೆ ಕಟ್ಟಿಸಿದೆ.

ನಾನು ಮನೆ ಕಟ್ಟಿಸುತ್ತಿರುವ ವಿಚಾರವನ್ನು ನನ್ನ ... ಹೆಣ್ಣುಮಕ್ಕಳನ್ನು ಬಿಟ್ಟರೆ ಬೇರೆ ಯಾರಿಗೂ ... ಹೇಳಿರಲಿಲ್ಲ, ಆದರೆ ನನ್ನ ಮನೆಯ ಆರ್ಕಿಟೆಕ್ಟ್ ಅವರ ... ಪರಿಚಯ ನನ್ನ ಮಗನಿಗೆ ಇತ್ತಂತೆ. ಒಂದು ದಿನ ಆ ... ಅಜಿತುನನ್ನು "ನೀವು ರಾಜರಾಜೇಶ್ವರಿ ನಗರದಲ್ಲಿ ... ಕಟ್ಟುತ್ತಿದ್ದೀರಾ?" ಅಂತ ಕೇಳಿದನಂತೆ. ಆಗ ಅಜಿ... ಗೊತ್ತಾಗಿ ನಾನು ಕಟ್ಟಿಸುತ್ತಿರುವ ಮನೆಯನ್ನು ನೋ... ಬಂದ.

ಅದೊಂದು ಪುಟ್ಟ ಮನೆ. ಒಂದು ಹಾಲ್, ಡೈ... ರೂಮ್, ಅಡುಗೆ ಮನೆ ಮತ್ತು ಒಂದು ಬೆಡ್‌ರೂಮ್ ... ಇತ್ತು. ಆಗ ಅಜಿತು "ಅಕಸ್ಮಾತ್ ಯಾರಾದರು ಬ... ಅವರು ಉಳಿದುಕೊಳ್ಳಲು ಇನ್ನೊಂದು ರೂಮ್ ... ಎಂದ. ಅದಕ್ಕೆ ಒಪ್ಪಿದ ನಾನು ಮೊದಲನೆ ಮಹಡಿ... ಒಂದು ಪುಟ್ಟ ರೂಮ್ ಕಟ್ಟಿಸಿದೆ.

ಮನೆ ಕಟ್ಟಿಸಿದ ನಂತರ ನನ್ನ ಮಕ್ಕಳಿಗೆ ಅದು ತ... ಇಷ್ಟವಾಯಿತು. ನನ್ನ ಅಪ್ಪಯ್ಯನಂತೂ "ತುಂಬಾ ಚೆನ... ರೆಸಾರ್ಟ್ ಥರ ಇದೆ" ಎಂದು ಸಂತೋಷ ಪಟ್ಟಿದ್ದರು. ... ಬಹಳ ವರ್ಷಗಳ ಕಾಲ ಲಂಕೇಶರಿಗೆ ನಾನು ಒಂದು ... ಕಟ್ಟಿಸಿದ್ದರ ವಿಷಯ ಗೊತ್ತೇ ಇರಲಿಲ್ಲ, ಒಮ್ಮೆ ಗೌ... ಅಪ್ಪನನ್ನು ಕರೆದುಕೊಂಡು ಹೋಗಿ ಆ ಮನೆ... ತೋರಿಸಿದ್ದಳು. ಲಂಕೇಶರು ಅದನ್ನು ನೋಡಿ "ಬ್ಯೂಟಿ... ಹೌಸ್" ಎಂದು ಸಂತೋಷ ಪಟ್ಟಿದ್ದರು...

(ಮುಂದುವರೆಯುವುದು)

## ಕವಿ ಪುಂಗವನ ಪುರಾಣ



ಸಿಂಗನ ಹಳ್ಳಿಯವ ಚಂಗನೆ ಜಿಗಿಯುತ ಕವಿಯಾದ
ಕಥೆ ಕವನ ಕಾದಂಬರಿ ಬರೆಯುತ ಮೋಡದಂತೆ ಎಲ್ಲೆಡೆ ಕವಿದ

ಒಲವಿನೋಲೆಯ ತರುಣಿಗೆ ಬರೆದು ಬಲೆಯ ಬೀಸಿ ಮದುವೆಯ
ಆದ
ಬರೆಯುವ ಕಲೆಯನು ಅವಳಿಗೂ ಕಲಿಸಿ ಕರೆದುಕೊಂಡು ಎಲ್ಲೆಡೆ
ಅಲೆದ

ಹಿಂದಿನ ವರ್ಷ ತನ್ನಯ ಪಾಲು ಇಂದಿನ ವರ್ಷ ಸತಿ ಪಾಲು
ಮುಂದಿನ ವರ್ಷವು ತನಗೆ ಶಾಲು ಪ್ರತಿ ವರ್ಷವು ಇದೆ ಕೆಲಸವು

ಸಮ್ಮೇಳನದ ವೇದಿಕೆ ಏರಲು ಸಚಿವರ ಚೇಲಗೆ ದುಂಬಾಲು
ಕಾಯುತಲಿಹನು ಅಧ್ಯಕ್ಷ ಪದವಿಗೆ ಚಾತಕ ಪಕ್ಷಿಯ ರೀತಿಯೊಳು

ಗುಂಪಿನ ಹೂಟ ಜಾತಿಯ ಕೂಟ ಕೋತಿಯ ಆಟ ಆಡುವನು
ಕಥೆ ಕವನದಿ ನಾನೇ ದೊಡ್ಡವ ಎನ್ನುತ ಅಡ್ಡಡ್ಡ ಸೆಟೆಯುವನು

ತನ್ನ ಗೆಳೆಯರ ಪುಸ್ತಕ ಹುಡುಕಿ ವಿಮರ್ಶೆ ಮಾಡುತ ಮರೆಸುವನು
ಚುಟುಕು ಕಟಕಿ ನವ್ಯ ನಾಟಕ ಗಪದ್ಯ ರಚಿಸುತ ಕೊರೆಯುವನು

ನೀ ನನಗಾದರೆ ನಾ ನಿನಗಾಗುವೆ ಎನ್ನುವ ಹಂಚಿಕೆ ಹೂಡುವನು
ಠಕ್ಕ ನರಿಯಂತೆ ಜಪ್ಪಿಸಿ ಕುಳಿತು ಪ್ರಶಸ್ತಿ ಬೇಟೆಯ ಕೆಡಹುವನು

ನಂದೀ ಗೋಷ್ಠಿ ನಿಂದ್ಯಾಗೋಷ್ಠಿ? ಎನ್ನುತ ಸ್ವಾಷ್ಠಿಯ ಮಾಡುವನು
ಜನಪದ ವಿದ್ವಾಂಸ ಎನಿಸಿಕೊಳ್ಳುತ ಸೋಬಾನ ಪದಗಳ ಹಾಡುವನು

ಅಕ್ಯಾಡೆಮಿಗಳ ಸದಸ್ಯನಾಗಲು ಕಪ್ಪೆಯಂತೆ ಸದಾ ಜಿಗಿಯುವನು
ಮೀಟಿಂಗು ಈಟಿಂಗು ಕಟಿಂಗು ಮಾಡುತ ಬೇರೆ ಅಕ್ಯಾಡೆಮಿಗೆ
ನೆಗೆಯುವನು


ಅಕ್ಕನ ಮಾವನ ಮನೆಗೆ ಹೋಗಲು ಮಕ್ಕಳಂತೆ ಹಠ ಹಿಡಿಯುವನು
ಹೆಂಡತಿಯೊಡನೆ ಪುಕ್ಕಟೆ ಹಾರಿ ಇಂಗ್ಲೆಂಡು ಅಮೆರಿಕಾ ನೋಡುವನು

ನೆಹರು ಜುಬ್ಬಾ ಬಿಳಿ ಪೈಜಾಮು ಬಗಲ ಚೀಲವು ಮೆಚ್ಚಂತೆ
ಹಗಲು ರಾತ್ರಿ ಇವನಿಗೆ ಭಾಷಣ ಮಾಡುವ ಹುಚ್ಚಂತೆ

• ಎಂ.ಡಿ. ಗೋಗೇರಿ

# ಬಿಜೆಪಿ ರಾಜಕೀಯ ಆಕಾಶದಲ್ಲಿ ಎಡ್ಯೂರಪ್ಪ ಧ್ರುವತಾರೆ!

...ಗೆಲಸ ಮುಗಿದುಹೋಗಿತ್ತು. ಅದರ ಕುರುಹಾಗಿ ...ಬ್ಬಲು ಪುದಿ ಹುಲ್ಲು ಊರ ಸುತ್ತ ಇಟ್ಕಾಡುತ್ತಿತ್ತು. ...ದ ಬಂಗದ ಕತೆಯನ್ನು ಸಾರುತ್ತಿತ್ತು. ವಾತಾವರಣದಲ್ಲಿ ...ಲ್ಲದ ಕಾರಣ ಹುಲ್ಲು ಬಡಿದ ಎಲ್ಲರ ಮುಖಗಳು ... ರೋಗಿಷ್ಠರ ಮುಖದಂತಾಗಿದ್ದವು. ಜುಮ್ಮಿ ಕೂಡ ...ಕ್ಕಸಂತಾಗಿದ್ದಳು. ಇದನ್ನು ಗ್ರಹಿಸಿದ ಕಾಳಮಾವ,




...ಎಷ್ಟಾಯಿತ್ಲೆ ರಾಗಿ?" ಎಂದ.

...ಯಲ್ಲ ಒಟ್ಟು ಹತ್ತು ಪಲ್ಲಾಯ್ತು ಕಣಮಾವ."

...ಯಲ್ಲ ಒಟ್ಟು ಅಂದ್ರೆ?"

...ಅಂದರೆ ವಲುದ್ದು ಐದು ಪಲ್ಲಾಯ್ತು, ಬಾರೆ ವಲದ್ದು ... ಪಲ್ಲ, ಕಣದೊಲದ್ದು ಒಂದು ಪಲ್ಲಾಯ್ತು. ಗ್ವಬ್ಬರನೆ ...ದ್ರೆ ಇಪ್ಪತ್ತು ಪಲ್ಲಾಗದು."

..."ನಿನ್ನ ಕಣದೊಲದಲ್ಲಿ ಊರ್‍ಯಲ್ಲ ಯರಡುಕ್ಕೋಯ್ತದೆ. ...ರಾಗಿ ಬೀಳಬೇಕಿತ್ತಲ್ಲಾ?" ಎಂದು ಸೀರ ನಕ್ಕ.

"ಅದೇನು ಸೀಮೆ ಗ್ವಬ್ಬರವೇನೊ ಅಂಗಂತಿಯಲ್ಲಾ."

"ಸೀಮೆ ಗೊಬ್ಬರಕ್ಕಿಂತ ಮೇಲಾದ ಗೊಬ್ಬರ ಅಂತ ರೈತ ...ದ ಕಡಿದಾಳು ಶಾಮಣ್ಣಾರು ಪತ್ತೆ ಮಾಡ್ಯವುರೆ ಕಣೆ" ...ಏ ಉಗ್ರಿ ನಕ್ಕ.

"ಅಂಗಾದ್ರೆ ನನ್ನ ವಲ ಬ್ಯಳದು ಬಿದ್ದೋಗಬೇಕಾಗಿತ್ತಪ್ಪ. ...ರಿಯೋರ್‍ಯಲ್ಲ ಹೋಯ್ತರೆ ನನ್ನ ವಲಕೆ."

"ಹೋದ್ರುವೆ ಇಲಿ ಯಗಣೇನು ಒಸಿಯಿದ್ದವೇನ್ಲೆ. ...ಕ್ಯಲ್ಲ ಆಹಾರ ಎಲ್ಲಿಂದ ಬರಬೇಕು?" ಎಂದ ಕಾಳಮಾವ.

"ನೀನೇಳದು ನಿಜ ಕಣಮಾವ. ಇವತ್ತಿನ ದಿವುಸದಲ್ಲಿ ...ಪ್ರಾಣಿಗಳಿಗೆ ತಿನ್ನಕ್ಕೆ ಏನೂ ಸಿಗದೆ, ಊರು ಕಡಿಕೆ ಬತ್ತಾ ... ಕಿರುಬ, ಆನೆ ಯಾವುಕು ಕಾಡಲ್ಲಿ ಏನೂ ಸಿಗತಾಯಿಲ್ಲ" ...ದ ಉಗ್ರಿ.

"ಯಂಗೆ ಸಿಗಬೇಕು ಉಗುರಿ? ಈಗ ಕಾಡಲ್ಲಿ ಏನದೆ? ...ಸ್ಟಾ ಖಲಾಸ್" ಎಂದುಕೊಂಡು ಲತೀಫ ಬಂದ.

"ಕಾಡುಕಡಿಯೋರು ನಿಮ್ಮೊರೆ ಅಲವೇನ್ಲ?" ಎಂದ ...

"ಮದ್ಲಿಗೆ ನವ್ಮೋರು, ಈಗ ನಿವ್ಮೊರು ...ಕ್ಕಂಬುಟ್ಟದಾರೆ ಶೀರಪ್ಪಾ. ಈಗ ಯಲ್ಲಾರು ಯಲ್ಲಾ ...ನೂ ಮಾಡ್ತ ಇದಾರೆ."

"ಅದೇನೊ ನಿಜ ಬುಡು. ಹಿಂದೂಗಳು ಪಾಕಿಸ್ತಾನದ ಭಾವುಟ ಆರುಸ್ತರೆ ಅಂದ್ರೆ, ಆ ನನಮಕ್ಕಳು ಪಾಕಿಸ್ತಾನದ ಸಾಬರಿಗೇ ಹುಟ್ಟಿರಬೇಕು."

"ಅದ್ಯಾರ್‍ಲ ಉಗ್ರಿ ಅಂತ ಕ್ಯಲಸ ಮಾಡಿದೋರು?"

"ಶ್ರೀರಾಮ ಸೇನ್ಯೊರು, ಆರೆಸೆಸ್‌ನೋರು ಸೇರಿಕೊಂಡು ಸಿಂದಗಿಲಿ ಪಾಕಿಸ್ತಾನದ ಬಾವುಟ ಹಾರಿಸಿದ್ರಂತೆ ಕಣಮಾವ."

"ಅಂಥಾ ಕ್ಯಲಸ ಮಾಡಿದ್ರೆ?"

"ತಮಾಸಿಯಲ್ಲ ಕಾಳೇಗೌಡ್ರೆ. ಸುವ್ವರ್‌ದು ಮಕ್ಕಳು ಹೊಟ್ಟೆಗೆ ಏನ್ ತಿಂತರೆ ಹೇಳಿ. ಬಾವುಟ ಹಾರಿಸಿದ್ದು ಅವುರೆ. ಬೆಳಿಗ್ಗೆ ಎದ್ದಿ ಎಲ್ಲಾರೆ ಕರದಿ ತೋರಸದ್ದು, ಬಸ್‌ಗೆ, ಟ್ಯಾಕ್ಸಿಗೆ, ಅಂಗಡಿಗೆ ಕಲ್ಲು ವಡಿಯೋದು, ಬೆಂಕಿಗೆ ಹಚ್ಚೋದು ಕೆಲ್ಸ ಮಾಡ್ತರೆ ಅಂದ್ರೆ, ಸಾಬರದು ಕತೆ ಏನಾಗಬೇಕು ಕಾಳೇಗೌಡ್ರೆ? ಇದು ಮನಸುರ್‌ದು ಕೆಲ್ಸ ಅಲ್ಲ, ಸೈತಾನ್‌ಗಳದು ಕೆಲ್ಸ" ಎಂದ ಲತೀಫ.

"ಆ ಹಾದರಕುಟ್ಟದ ನನಮಕ್ಕಳ ಹಿಡುದು ಜೈಲಿಗಾಗಬೇಕು ಕಂಡ್ಯ."

"ಹಾಕ್ಯವುರೆ. ಆದ್ರು ಪೊಲೀಸ್‌ನೋರು ಬುದ್ಧಿ ಓಡಿಸ್ಯವುರೆ."

"ಆ ನನಮಕ್ಕಳು ಸಿಕ್ಕಿದ್ದೇಳೂ" ಎಂದ ಸೀರ.

"ರಾತ್ರೆ ಒಂದು ಗಂಟೆಲಿ ಒಂದು ಬೈಕ್ ಹೋಯ್ತಂತೆ. ಅದರ ನಂಬರ್ರ ಪೊಲೀಸ್‌ನೋರು ಗೆಪ್ತಿ ಮಡಿಕಂಡ್ರು. ವತ್ತರಿಕ್ಯಾವಾಗ ಹಿಂಗಾಯ್ತೊ ಇಡೀ ಸರಕಾರದೊರು ಇದು ಮುಸ್ಲಿಮರ ಕ್ಯಲಸ ಅಂತ ಏಕದಂ ತಿಳಕಂಡುಬುಟ್ರು. ಜನಗಳು ಅಂಗೆ ತಿಳಕಂಡ್ರು."

"ತಿಳಕಳದಿಲವ ಉಗುರಿ? ಮದ್ಲೆ ಸಾಬರ ಮೇಲೆ ಡೌಟು. ಇನ್ನ ಪಾಕಿಸ್ತಾನದ್ದು ಬಾವುಟ ಹಾರತದೆ ಅಂದ್ರೆ ಡೌಟು ಕ್ಲಿಯರ್ ಅಲವಾ."

"ಇರೊ ಹೇಳ್ತಿನಿ. ಆ ಬೈಕಿನ ನಂಬರ್ ಮುಖಾಂತರ ಹಿಡದಾಗ ಸಿಕಿದ್ರು ನೋಡಪ್ಪ, ಯಲ್ಲಾರು ಶ್ರೀರಾಮಸೇನೆ ಹುಡುಗ್ರು. ಅದರಲ್ಲಿ ಒಂದಿಬ್ರು ಆರೆಸ್ಸಿನೋರಂತೆ. ಪೊಲೀಸ್‌ನೋರೇನಾದ್ರು ಮದಲೆ ಸದಾನಂದ ಗೌಡನಿಗೊ, ಅಶೋಕನಿಗೊ, ಆಚಾರಿಗೋ ಹೇಳಿದ್ರೆ ಯಾವುದೇ ಕಾರಣಕ್ಕೂ ಗುಟ್ಟ ಬುಟ್ಟುಕೊಂಡಂಗೆ ಮಾಡೋರು. ಆದ್ರೆ ಅವುರೇನು ಮಾಡಿದ್ರು ಅಂದ್ರೆ ದೇಶದ್ರೋಹಿಗಳು ಸಿಕ್ಕಿದೇಟಿಗೆ ವಳಿಕಾಕಿದ್ರು ಕಣಮಾವ. ಇಲ್ಲ ಅಂದ್ರೆ ಇಂತ ಸರಕಾರದಲ್ಲಿ ಅಂತ ಕ್ಯಟ್ಟ ಕ್ಯಲಸ ಮಾಡಿದೋರು ಸಿಗದು ಕಷ್ಟ."

"ಚಿಕ್ಕಮಗಳೂರಲ್ಲಿ ಹಿಂಗೇ ಆಗಿದೆ ಉಗುರೀ. ದೇವುಸ್ಥಾನದ್ದು ಮೇಲೆ ಹತ್ತಿ ಯಾರೊ ಶ್ರೀರಾಮುನ್ನು ಭಕ್ತ ಚಪ್ಪಲಿ ಕಟ್ಟಿಬಿಟ್ಟಿದ್ದಾನೆ. ಮಾರನೆ ದಿವುಸ ಕಮ್ಯುನಲ್ ಕ್ಲ್ಯಾಶ್ ಆಗೋಯ್ತು, ಮುಸ್ಲಿಂದು ಮನೆ, ಅಂಗಡಿಯೆಲ್ಲಾ ಉಡೀಸ್ ಆಯ್ತು. ಆದ್ರೆ ಪೊಲೀಸ್‌ರು ಇವತ್ತಿನವರೆಗೂ ಚಪ್ಪಲಿ ಮಾಲೀಕನಿಗೆ ಹಿಡದಿಲ್ಲ."

"ಸಿಂದಗಿಲಿ ಸಿಕ್ಕಿದ ಅಪರಾಧಿಗಳ ಪೈಕಿ ಒಬ್ಬ ರಾಕೇಶ್ ಸಿದ್ಧರಾಮಯ್ಯ ಅಂತ ಇದ್ದ ಕಣಮಾವ. ನಾನು ಇವುನ್ಯಾಕಪ್ಪ ಅಲ್ಲಿಗೋದ ಅನ್ನಕಂಡೆ. ಯಾಕೆ ಅಂದ್ರೆ ಈ ಸಿದ್ದರಾಮಯ್ಯನ ಮಗನೆಸರೂ ರಾಕೇಶ ಅಂತ."


"ಅದೇನ್ಲಾ ಅಂಗೆಸರು ಕಟ್ಟಿಗತ್ತವೆ? ಆ ಕುಮಾರಸ್ವಾಮಿ ಮಗನೆಸುರು ನಿಕಿಲನಂತೆ. ಏನ್ಲ ಅಂಗಂದ್ರೆ" ಎಂದಳು ಜುಮ್ಮಿ.

"ನಿನ್ನೆಸರನೂ ಅವುರು ಅಂಗೆ ಆಡಿಕತ್ತವೆ ಕಣೆ. ಏನೊ ಹೆತ್ತೋರು, ಹುಟ್ಟಸಿದೋರು ಪ್ರೀತಿಗೆ ಕಟ್ಟಿಗತ್ತರೆ ಬುಡು."

"ಯಲ್ಲಾರ್‍ದು ಹೆಸರಿಗಿಂತ ನಮ್ದು ವಾಟಿಸ್ಸೆ ಹೆಸರು ಹೈಕ್ಲಾಸ್."

"ಅವುನೆಸರು ಪುಟ್ಟರಾಜ ಕಣೊ ಲತೀಫಾ. ಆಗೊ ನೋಡವುನೆ ಬಂದ."

"ಆಗ್ಲಿ ಇಲ್ಲಿ ಅವುನ್ದೆ ಸಣ್ಣದು ರಾಜ್ಯ, ಇಲ್ಲಿಗೆ ಅವುನೆ ರಾಜ. ನನಗೆ ವಾಟಿಸ್ಸೆ ಕಂಡ್ರೆ ಭಾಳ ಇಷ್ಟ."



"ನನಿಗೂ ಅಷ್ಟೆ ಕಣೊ ಲತೀಫ. ನೀನು ಅಂದ್ರೆ ಐ ಲೈಕ್ ಯು" ಎಂದು ವಾಟಿಸ್ಸೆ ಬಂದ.

"ಕೇಳಿದಾಗ್ಯಲ್ಲ ದುಡ್ಡು ಕೊಡ್ತನಲ್ಲ ಅದ್ಕೇನೊ" ಎಂದಳು ಜುಮ್ಮಿ.

"ದುಡ್ಡು ಕೊಡೋರ್‍ಯಲ್ಲ ಗುಡ್ ಪರಸನ್ನು ಅಂತ ನಾನ್ಯಾವತ್ತೂ ಅಂದಿಲ್ಲ ಕಣಕ್ಕ. ಕೆಲುವುರು ಹುಟ್ಟತನೆ ವಳ್ಳೆ ಮನುಸರಾಗಿರತರೆ. ಆ ಪೈಕಿ ಇವುನೊಬ್ಬ."

"ನಿಂದು ಹೊಗಳಿಕೆ ನೋಡಿದ್ರೆ ಡವುಟಾಯ್ತಾ ಅದೆ ವಾಟಿಸ್ಸೆ."

"ಛೀ, ಕಾಲ ಎಷ್ಟು ಕೆಟ್ಟದೆ ಅಂದ್ರೆ, ಪ್ರಾಮಾಣಿಕವಾಗಿ ಹೊಗಳಿದ್ರೂ ಜನ ಡವುಟು ಮಾಡ್ತರಲ್ಲಯ್ಯಾ."

"ಅದು ಮದ್ಲು ಇರಲಿಲ್ಲ ಕಣೊ. ಬಿಜೆಪಿಗಳು ಬಂದಮ್ಯಾಲೆ ಅಂಗಾಯ್ತು."

"ಹಂಡ್ರೆಡ್ ಪರಸೆಂಟ್ ನಿಜಕಣೊ ಉಗ್ರಿ. ಆ ಈಶ್ವರಪ್ಪ ಎಡೂರಪ್ಪನ್ನ ಹೊಗಳತಿದ್ದ, ರೇಣುಕಾಚಾರಿ, ಸೋಮಣ್ಣ ಇವುರ್‍ಯಲ್ಲ ಹೊಗಳತರೆ. ಆದ್ರೂ ಎಡೂರಪ್ಪ ಬ್ಯಾರೆನೆ ಅವುನೆ."

"ಏನಾಯಿತ್ಲ ಎಡೂರಪ್ಪನ ಕತೆ?"

"ಅವುಂದು ಕತೆ ಸನಾವುಲ್ಲಾ ಸಾಬರ ಕುದುರೆ ಕತೆ ಆಯ್ತು ಕಾಳೇಗೌಡ್ರೆ. ಸನಾವುಲ್ಲಾ ಸಾಬ್ರು ತಮ್ಮದು ಕುದುರೆಗೆ ವಯಿಸಾಯ್ತು ಅಂತ ಹಳೆ ಕುದುರೆಗೆ ಬಿಟ್ಟ, ಹೊಸ ಕುದ್ರೆ ತಂದು ಇಟ್ಟುಗೊಂಡಿದಾರೆ. ಹಳೆಕುದ್ರೆಗೆ ಹೇಳೊರಿಲ್ಲ ಕೇಳೊರಿಲ್ಲ, ಎಲ್ಲಾರದು ಕೇರಿಲಿ ವಾಕಿಂಗ್ ಮಾಡಿಕೊಂಡು ಆರಾಮಾಗ್ಯೆತಿ. ಅಂಗೆ ಎಡೂರಪ್ಪಂದು ಸವಾರಿ ಉತ್ತರ ಕರ್ನಾಟಕದಲ್ಲಿ ಚಲ್ತಾ ಹೈ. ಅಲವೇನೊ ವಾಟಿಸ್ಸೆ" ಎಂದ ಲತೀಫ.

"ಮಿಸ್ಟರ್ ಲತೀಫ್, ನಮ್ಮ ಎಡೂರಪ್ಪನ ಬಗ್ಗೆ ಹಗುರವಾಗಿ ಮಾತಾಡಬೇಡ. ಅವುನು ನಿಮ್ಮ ಸನಾವುಲ್ಲ ಸಾಬರ ಕುದುರೆ ಅಲ್ಲ, ಯಾಗದ ಕುದುರೆ. ಆ ಕುದುರೆಯ ಹಿಡುದು ಕಟ್ಟಾಕಿದಾಗ ಯುದ್ಧ ಆಗುತ್ತೆ. ಕಟ್ಟಾಕಿದೋರು ರಾಜ್ಯ ಕಳಕಂಡು ಸೋತೋಯ್ತರೆ. ಜೊತೆಗೆ ಯಾಗದ ಕುದುರೆನೂ ಹಾಳಾಯ್ತದೆ" ಎಂದ ವಾಟಿಸ್ಸೆ.

"ಅದೇ ಕಣೊ ವಾಟಿಸ್ಸೆ ನಾನು ಹೇಳಿದ್ದೂ, ಸನಾವುಲ್ಲಾ ಸಾಬರು ತಿರಿಗಿ ಹಳೆ ಕುದುರೆನ ಗಾಡೀಗೆ ಕಟ್ಟಲ್ಲ, ಅಂದ್ರೆ ಅದರದ್ದು ಸ್ಟೋರಿ ಮುಗಿತಲ್ವ."

"ಮುಗುದ್ರು ಅವುನು ಬಿಜೆಪಿ ರಾಜಕೀಯದಾಕಾಶದಲ್ಲಿ ಧ್ರುವತಾರೆ ಕಣೊ. ಅವುನೇ ಹೇಳಿಕೊಂಡವುನೆ ನಾನೇ ತಾರೇ ಅಂತ. ನಾನು ಅಂಗೇ ತಿಂಕ್ ಮಾಡಿದಾಗ, ಏನು ಹೊಳಿತಪ್ಪಾ ಅಂದ್ರೇ, ಕೃಷ್ಣ ಕೌರವನಿಗೆ ಒಂದು ಮಾತೇಳತನೆ. ಏನಂದ್ರೆ, ಭಾರತ ವರ್ಷದ ಚರಿತ್ರಾಕಾಶದಲ್ಲಿ ನೀನು ಹೊಳೆಯುವ ನಕ್ಷತ್ರ. ಪಾಂಡವರು ಗ್ರಹಗಳು ಅಂತ. ಆದ್ರಿಂದ ಇಂತ ಭಯಾನಕವಾದ ಮುಖ್ಯಮಂತ್ರಿ ಬಿಜೆಪಿ ರಾಜಕಾರಣದಾಕಾಶದಲ್ಲಿ ನಿಜಕ್ಕೂ ಧ್ರುವತಾರೆ ಇದ್ದಂಗೆ. ಅಂತೂ ಸಾಕಪ್ಪ ಇವುನ ರಾಜಕಾರಣ."

## ...ತಮಾಷೆ ಹುಡುಗಿಯನ್ನು ಕುರಿತು...

...ನಿಮಗೆ ಆಗಿದ್ದು ನೋಡಿ ನಿಮಗೇ ಶಾಕ್ ಆಗುತ್ತದೆ. ನಿಮ್ಮ ಬಗ್ಗೆ ನೀವು ತಿಳಿದುಕೊಂಡದ್ದು ಎಷ್ಟು ಹಾಸ್ಯಾಸ್ಪದ ಅನ್ನಿಸಿ ...ಕೆ ಪಟ್ಟುಕೊಳ್ಳುತ್ತೀರಿ. ನೀವು ಚಿಕ್ಕವರಾಗಿದ್ದಾಗ ಸಭೆಯಲ್ಲಿ ಮಾತಾಡಿದ್ದು, ಯಾವುದೋ ಹುಡುಗಿ ಗೇಲಿ ಮಾಡಿದ್ದು ...ವನೋ ಸ್ವಾಮಿಯ ಕಾಲಿಗೆ ಬಿದ್ದದ್ದು ಚಿತ್ರದೊಂದಿಗೆ ಈಗ ನಿಮಗೆ ದೊರೆತರೆ.... ಎಷ್ಟು ಮುಜುಗರವಾಗುತ್ತದೆ. ಆ ...ದಲ್ಲಿ ಅದು ಸಹಜ ಅಂತ ಮನಸ್ಸು ಸಮರ್ಥಿಸಿಕೊಳ್ಳಲು ಯತ್ನಿಸಿದರೂ 'ನಾನು ಹೀಗೆ ಮಾಡಲು ಸಾಧ್ಯವೇ' ಎಂದು ...ಗುಡಗೊಳ್ಳುತ್ತೀರಿ. ಇದರಿಂದಾಗಿ ಈಗಲಾದರೂ ಹೆಚ್ಚು ನಾಟಕೀಯವಾಗದೆ, ಹುಂಬ ಕೆಲಸ ಮಾಡದೆ ಸುಮ್ಮನೆ, ...ಸಗಿಯಾಗಿ ಇದ್ದುಬಿಡುವುದು ಮೇಲು ಎಂದು ತೀರ್ಮಾನಿಸುತ್ತೀರಿ. ಅದು ನಿಮ್ಮ ಸಂಕೋಚದ ಮೂಲ. ಹಾಗೇನೇ ...ಕ ನಿರಾಶೆಗಳೂ, ಭ್ರಮನಿರಸನಗಳೂ ನಿಮ್ಮನ್ನು ಚಿಂತೆಗೆ ಹಚ್ಚುತ್ತವೆ. ನಿಮ್ಮ ಹಿಂಜರಿಕೆ, ಸಂಶಯ ಜಾಸ್ತಿಯಾಗುತ್ತದೆ. ...ು ಸುಮಾರು ಹತ್ತು ವರ್ಷದ ಹಿಂದೆ ಮಾಡಿದ ಭಾಷಣದ ವೀಡಿಯೋವನ್ನು ನೋಡಿ ಆಘಾತಗೊಂಡೆ. ನೋಡಿದ್ದು ...ವು ವರ್ಷಗಳ ಹಿಂದೆ. ಮಾತುಗಳನ್ನು ಸ್ಪಷ್ಟವಾಗಿ ಆಡದಿರುವುದು, ಆತುರದಿಂದ ಆಡಿ ಎಲ್ಲರಿಗೆ ಗೊತ್ತಾದಂತೆ ಬೀಗುವುದು, ...ಗಿಕೊಳ್ಳುವುದು... ಎಲ್ಲ ನೋಡಿದ ಮೇಲೆ ಮತ್ತೆ ವೇದಿಕೆಯ ಮೇಲೆ ನಿಂತಾಗ ಸಣ್ಣ ಕಂಪನ ಶುರುವಾಯಿತು. ನಾನು ...ದ ಈ ಜನಕ್ಕೆ ಹೇಗೆ ಕಾಣಿಸುತ್ತಿರಬಹುದು? ಮಾತಾಡಿದರೆ ಎಷ್ಟು ಹಾಸ್ಯಾಸ್ಪದನಾಗಬಹುದು! ...ಗೆಂದುಕೊಳ್ಳುತ್ತಿದ್ದಂತೆ ಮಾತಾಡಲು ಹೆಚ್ಚುಹೆಚ್ಚು ಹಿಂಜರಿಕೆಯಾಗಿ ಒಂದೆರಡು ಮಾತಾಡುವಲ್ಲಿ, ಇಲ್ಲಿಂದ ...ರಟುಹೋಗಿ ಪುಸ್ತಕವೊಂದನ್ನು ಓದುತ್ತಾ ಕೂರುವುದು ಎಷ್ಟು ಸಂತೋಷಕರ ಅನ್ನಿಸಿ ಸುಮ್ಮನೆ ಕೂತುಬಿಟ್ಟೆ. ...ಗ ನಾನು ಹೇಳುವುದನ್ನು ಚೆನ್ನಾಗಿ ಯೋಚಿಸಿದ್ದೇನೆಯೆ? ಹೇಳಲೇ ಬೇಕೇ? ಹೇಳದಿದ್ದರೆ ಏನು ನಷ್ಟ? ಯಾಕಿದೆಲ್ಲ ...ಳು? ಎಂದೆಲ್ಲ ಚಿಂತೆಯಾಗತೊಡಗಿತು. ಮೌನವಾಗಿ ಇರುವುದನ್ನು ಕಲಿಯತೊಡಗಿದೆ. ಈಗಲೂ ...ದಿಕೆಗೆ ಹೋಗಲು ಹಿಂಜರಿಕೆ. ದೊಡ್ಡದಾಗಿ ಘೋಷಿಸಲು ಅನುಮಾನ. ಯಾರಿಗಾದರೂ ಸಂದರ್ಶನ ...ಟ್ಟರೆ ಸುಳ್ಳು ಹೇಳುತ್ತಿದ್ದೇನೆ ಎಂಬ ಹೆದರಿಕೆ. ಈ ಬಗೆಯ ದಿಗಿಲಿನಿಂದ ಖ್ಯಾತಿಗಾಗಿ, ಸ್ಥಾನಮಾನಕ್ಕಾಗಿ ...ರಾಡಲು ಆಗದೆ ತೊಂದರೆಯಾಗಬಹುದು ಅನ್ನಿಸಿದರೂ ಈ ಬಗೆಯ ಹಿಂಜರಿಕೆ ನೀಡುವ ನೆಮ್ಮದಿ ...ಬ ಲಾಭದಾಯಕ. ಏನಿಲ್ಲೆಂದರೂ ಇದರಿಂದ ನಮ್ಮ ಶಕ್ತಿ ವೇಳೆ ಉಳಿಯುತ್ತವೆ; ಎಲ್ಲವನ್ನೂ ಹೊಸ ...ಯಲ್ಲಿ ನೋಡುವ ಅವಕಾಶ ದೊರೆಯುತ್ತದೆ.

...ಗೆಂದುಕೊಂಡು ನನ್ನ ಹಿಂಜರಿಕೆ ಮತ್ತು ಚುರುಕಾಗಿ ಓಡಾಡಲಾಗದ ಸ್ಥಿತಿ ಕುರಿತು ಮೌನವಾಗಿದ್ದೆ. ...ನೋ ಓದುತ್ತಿದ್ದಾಗ ಈ ಪುಟ್ಟ ನಟಿಯ ಬಗ್ಗೆ ಓದಿ ನಗತೊಡಗಿದೆ. ಅವಳ ಹೆಸರು ಜೇನೀನ್ ...ಫಾಲೋ. ಅಮೆರಿಕಾದ ನ್ಯೂಜೆರ್ಸಿಯಲ್ಲಿ 31 ವರ್ಷದ ಹಿಂದೆ ಜನಿಸಿದ ಈ ಹುಡುಗಿಯ ಹೆಸರು ...ಗ ಎಲ್ಲಿಯಾದ್ರೂ ಕೇಳಿಬರುತ್ತಿದೆ. ಮೊನ್ನೆ ಇವಳನ್ನು ಹಾಕಿಕೊಂಡು 'ಬೆಕ್ಕು ಮತ್ತು ನಾಯಿಗಳನ್ನು ಕುರಿತ ಸತ್ಯ' ...ಬ ಚಿತ್ರ ಮಾಡಿದರು. ಈ ಹುಡುಗಿಯದು ಬೆಕ್ಕು ನಾಯಿಗಳ ಬಗ್ಗೆ ಅವುಗಳನ್ನು ಸಾಕುವವರಿಗೆ ಮಾರ್ಗದರ್ಶನ ...ಡುವ ಪಾರ್ಟ್. ಆಕೆ ಆ ಪಾತ್ರವನ್ನು ಎಷ್ಟು ತಮಾಷೆಯಾಗಿ ಮಾಡಿದಳೆಂದರೆ ಇವಳ ಜೊತೆಯವರು ...ವಾಗಿ ಕಾಣತೊಡಗಿದರು. ಗಾರ್ಫಾಲೋ ಪ್ರಸಿದ್ಧಳಾಗತೊಡಗಿದಳು. ಈ ಪ್ರಸಿದ್ಧಿ ಕಂಡು ಆಕೆಗೆ ಭಯ ಮತ್ತು ಸಂಶಯ. ಆಕೆ ಪ್ರಸಿದ್ಧ ನಟಿಯೆಂದು ಆಕೆಯನ್ನು ಬೆಕ್ಕು ಮತ್ತು ನಾಯಿಯ ಬಗ್ಗೆ ಜನ ಕೇಳಿದರೆ, 'ನನಗೆ ಏನೇನೂ ಗೊತ್ತಿಲ್ಲ. ಡೈರೆಕ್ಟರ್ ಹೇಳಿದಂತೆ ನಟಿಸಿಬಿಟ್ಟಿದ್ದೇನೆ' ಎಂದು ತಪ್ಪಿಸಿಕೊಂಡಳು. ತನ್ನ ಅಭಿಪ್ರಾಯವನ್ನು ನಂಬಿದವರು ಕೆಟ್ಟರು ಎಂದು ತಮಾಷೆ ಮಾಡಿದರು. ಆಕೆಯನ್ನು ಚಿತ್ರದ ಆರಂಭೋತ್ಸವಕ್ಕೆ ಕರೆದರೆ 'ನನ್ನಿಂದ ಆಗುವುದಿಲ್ಲ' ಅಂದಳು. 'ಯಾಕೆ?' ಅಂದರೆ 'ನನ್ನ ಸಿನಿಮಾ ನನಗೆ ನೋಡುವುದು ಅಸಹ್ಯ' ಎಂದು ತಪ್ಪಿಸಿಕೊಳ್ಳಲು ಯತ್ನಿಸಿದಳು. ಬಲಾತ್ಕಾರವಾಗಿ ಕರೆದೊಯ್ದರು. ಆಗ ಆಕೆ ಅಲ್ಲಿ ಮುಖ ತೋರಿಸಿ ಟಾಯ್ಲೆಟ್‌ಗೆ ಹೋಗಿ ನಾಲ್ಕೈದು ಸಿಗರೇಟು ಸೇದಿ ಓಡಿಹೋದಳು. ಹಾಗೆಯೇ ಆಕೆಯ ಖ್ಯಾತಿಗಾಗಿ ಸೀರಿಯಲ್ ಒಂದರಲ್ಲಿ ನಟಿಸಲು ಸೇರಿಸಿಕೊಂಡರು. ನಟಿಸುವುದೇ ಅವಳ ವೃತ್ತಿಯಾದ್ದರಿಂದ ಒಪ್ಪಿಕೊಂಡರೂ "ಅದೊಂದು ಭಯಂಕರ ಕೆಟ್ಟ ಚಿತ್ರ" ಎಂದು ಹೇಳಿದಳು. ಹಾಗೇಕೆ ಮಾತಾಡಿದೆ ಅಂದರೆ, "ನನಗೆ ಇಷ್ಟವಾಗದಿದ್ದರೆ ಇಷ್ಟವಾಗಿದೆ ಎಂದು ಹೇಳಲಾರೆ" ಎಂದು ಗೊಣಗಿದಳು ಮತ್ತು ಆ ಸರಣಿಯಲ್ಲಿ ಮುಂದುವರಿಯಲು ನಿರಾಕರಿಸಿದಳು. ಆಕೆಗೆ ಖಾಸಗಿಯಾಗಿ ಇದ್ದು ಬಿಡುವುದೇ ಸುಖ, ಅದರಲ್ಲಿ ಯಾವ ಪ್ರದರ್ಶನವೂ ಇಲ್ಲ.







ಸಂಕೋಚವನ್ನು ಕೂಡ ಕೃತಕವಾಗಿ ರೂಢಿಸಿಕೊಂಡು ವಂಚಿಸುವವರು ಇರಬಹುದು. ಸಂಕೋಚವೆಂದು ನಟಿಸುತ್ತಾ ಆ ಬಗ್ಗೆಯೇ ಸಂಕೋಚಪಡುವಂತೆ ಅಭಿನಯಿಸುತ್ತಾ ಆತ್ಮವಂಚನೆಯಲ್ಲಿ ಮುಳುಗಿರುವವರು... ಆದರೆ ಇವರಿಗೆ ಖಾಸಗಿತನದ ಸೌರಭ ದಕ್ಕಲಾರದು. ನಿಜಕ್ಕೂ ಒಬ್ಬಂಟಿಯಾಗಿದ್ದವನಿಗೆ, ಮೌನವಾಗಿದ್ದವನಿಗೆ ಮಾತ್ರ ಕೆಲವು ಸಂಗತಿಗಳು ಹೊಳೆಯುತ್ತವೆ. ಇದು ಧ್ಯಾನ ಅಥವಾ ತಪಸ್ಸು ಅಲ್ಲ, ಇದು ಹಠಯೋಗವಲ್ಲ, ಹುಂಬನಾಗದೆ ಇರುವ, ನಾಟಕೀಯವಾಗದೆ ಇರುವ, ಸುಳ್ಳು ಹೇಳುತ್ತಾ ಸತ್ಯ ಎಂದು ತಿಳಿದುಕೊಳ್ಳದಿರುವ ಮುತ್ಸದ್ದಿಯಾಗಿರುತ್ತಾ ಸಜ್ಜನನೆಂದು ನಂಬಿಕೊಳ್ಳದಿರುವ ಕಲ್ಯಾಣಗುಣ. ಮನುಷ್ಯ ಎಷ್ಟು ಜಟಿಲ ಅಂದರೆ ಆತ್ಮನಿರೀಕ್ಷೆಯಲ್ಲೂ ವಂಚಿಸಿಕೊಳ್ಳುತ್ತಿರುತ್ತಾನೆ. ಉದಾಹರಣೆಗೆ, ಜಪಾನೀಯರಿಗೆ ನಾವು "ಪ್ರಜಾಪ್ರಭುತ್ವಕ್ಕೆ ಹಾಸ್ಯ ಪ್ರಜ್ಞೆ ಬೇಕು" ಎಂದು ಹೇಳಿದೆವೆನ್ನಿ. ತೀರಾ ಗಂಭೀರಗುಣದ ಈ ಜಪಾನೀಯರು ಹಾಸ್ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಆ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಿಬಿಡುತ್ತಾರೆ. ತರಬೇತಿ ಶಿಬಿರ, ಕಮ್ಮಟ ನಡೆಸುತ್ತಾರೆ... ಹೀಗೆ ಒಮ್ಮೆ ಜಪಾನೀಯರ ಬಗ್ಗೆ ಒಬ್ಬ ತಮಾಷೆ ಮಾಡಿದ.

ಮೇ 15, 1996

# ಲಂಕೇಶ್‌ಗೆ ಹುಚ್ಚು ಹಿಡಿದಿದೆಯಂತೆ!

ಊರುಗಳ ಹೆಸರು ಕುತೂಹಲ ಕೆರಳಿಸುತ್ತವೆ. ಮಂಡ್ಯದ ಸುತ್ತಮುತ್ತ 'ಹಳ್ಳಿ'ಗಳೇ ತುಂಬಿವೆ. ಮೈಸೂರನ್ನು 'ಹುಂಡಿ'ಗಳೇ ಆವರಿಸಿವೆ. ಸಾಗರದ ಬಳಿ 'ಕೋಣೆ'ಗಳದ್ದೇ ಮೆರೆದಾಟ. ಕೆಲವು ಪ್ರದೇಶಗಳಲ್ಲಿ 'ದೊಡ್ಡಿ'ಗಳದ್ದೇ ದರ್ಬಾರು. ಕೇವಲ ಪ್ರದೇಶಕ್ಕೆ ಮಾತ್ರ ಇವು ಸೀಮಿತವಾಗಿರಲು ಸಾಮಾಜಿಕ, ಸಾಂಸ್ಕೃತಿಕ ಕಾರಣ ಇರಬಹುದು. ಏನೇ ಆಗಲಿ ಇವೆಲ್ಲವೂ ಗ್ರಾಮಗಳೇ ನಿಜ. ಆದರೂ ಹೆಚ್ಚು ಪ್ರಚಲಿತದಲ್ಲಿರುವುದು ಹಳ್ಳಿಯೇ ಎಂಬುದು ಕುತೂಹಲಕಾರಿ ಸಂಗತಿ. ಹಳ್ಳಿಗ ಎನ್ನುತ್ತೇವೆ. ದೊಡ್ಡಿಗ, ಹುಂಡಿಗ, ಕೋಣೆಗ ಎನ್ನುವುದಿಲ್ಲ! ಭೀಮನ ಕೋಣೆಗೆ ಚರಕ ಉತ್ಸವಕ್ಕಾಗಿ ಹೋಗಿದ್ದಾಗ ಮನಸ್ಸಿನಲ್ಲಿ ಅಡ್ಡಾಡಿದ ಚಿತ್ರ ಇದು.




ಲಂಕೇಶ್ ಮತ್ತು ನಾಡು-ನುಡಿ ಕುರಿತ ವಿಚಾರ ಸಂಕಿರಣ. ಬಹಳ ದಿನಗಳ ನಂತರ ಗೆಳೆಯರನ್ನು ಕಾಣುವ, ಒಟ್ಟಿಗೆ ಇರುವ ಸಂದರ್ಭ ಒದಗಿಸಿತ್ತು. ಆಶ್ಚರ್ಯವೆಂಬಂತೆ 'ಪಾನ'ಗಳ ಒಡೆಯರೇ ಆಗಿದ್ದಂತಹವರು, ಮದ್ಯಪಾನ, ಧೂಮಪಾನವನ್ನು ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸುತ್ತಿದ್ದವರು; 'ಸಾರಾಯಿ ಸಹವಾಸ ಹೆಂಡತಿಮಕ್ಕಳ ಉಪವಾಸ' ಎಂಬ ಜಾಹೀರಾತಿನ ಮಾತನ್ನೇ ಗಂಭೀರವಾಗಿ ಪರಿಗಣಿಸಿದವರಂತೆ; 'ಧೂಮಪಾನ ಸಾವಿಗೆ ಆಹ್ವಾನ' ಎಂಬ ಮಾತುಗಳನ್ನು ಅಕ್ಷರಶಃ ನಂಬಿದವರಂತೆ ಆಗಿದ್ದರು! ಅವರ ಸಭ್ಯತೆ, ಸನ್ನಡತೆ ಆತಂಕ ಮೂಡಿಸಿತು. ಮನುಷ್ಯರೆಲ್ಲರೂ ಒಳ್ಳೆಯವರೇ ಆದರೆ ಆಗುವ ಅಪಾಯದ ಗಂಟೆ ಬಾರಿಸಿದಂತಿತ್ತು. ಆದರೆ ಎಲ್ಲರೂ ಹಾಗೆ ಆಗಿರಲಿಲ್ಲ, ಅದೇ ಸಮಾಧಾನಕರ ಸಂಗತಿ!

ಲಂಕೇಶರನ್ನು ನಾನು ಮೊದಲು ನೋಡಿದ್ದು 1968ರ ಡಿಸೆಂಬರ್ ತಿಂಗಳಿನಲ್ಲಿ. ಆಗ ನಾನು ಮಂಡ್ಯದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದೆ. ಕಾಲೇಜು ಹಾಸ್ಟೆಲ್‌ನ ವಾರ್ಷಿಕೋತ್ಸವಕ್ಕೆ ಬರಲು ಅವರು ಒಪ್ಪಿದ್ದರು. ಕಟ್ಟುನಿಟ್ಟಾಗಿ ಸಮಯಪರಿಪಾಲನೆ ಮಾಡುತ್ತಿದ್ದುದರಿಂದ ನಾನು ವೇಳಗೆ ಮುಂಚೆಯೇ ಹೋದೆ. ಲಂಕೇಶರು ಬಂದಿದ್ದರು. ಪರಿಚಯಿಸಿಕೊಂಡೆ. ಅದೇ ವಾರ ಪ್ರಜಾವಾಣಿಯಲ್ಲಿ ನನ್ನದೊಂದು ಲೇಖನ ಪ್ರಕಟ ಆಗಿತ್ತು. ಅದನ್ನು ಅವರು ಗಮನಿಸಿದ್ದರು. 'ನಿಮ್ಮ ಲೇಖನ ಓದಿ ಮುದುಕ ಇರಬೇಕು ಅಂದುಕೊಂಡಿದ್ದೇನಲ್ರೀ' ಎಂದು ತಮ್ಮ ಸಹಜ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಪರಿಚಯವಾದಾಗಿನ 'ಬಿಗಿ' ಸ್ವಲ್ಪ ಕಡಿಮೆ ಆಯಿತು.

ನಾನು ಮತ್ತು ಲಂಕೇಶ್ ಸಭಾಂಗಣಕ್ಕೆ ಜೊತೆಯಲ್ಲಿಯೇ ಹೋದೆವು. ಲಂಕೇಶರ ಭಾಷಣ ಪ್ರಾರಂಭ ಆಯಿತು. ಜಾತಿಯನ್ನು ಬಿಟ್ಟು ಬದುಕುವುದರ ಬಗೆಗಿನ ಸಂತೋಷವನ್ನು ವಿವರಿಸುತ್ತಿದ್ದರು. ಆಗ ಕಾಶ್ಮೀರದಲ್ಲಿ ಯಾವುದೋ ಪ್ರವಾದಿಯ ಕೂದಲು ಕಳುವಾಗಿತ್ತು. ಕಾಶ್ಮೀರದಲ್ಲಿ ಮಾತ್ರ ಅಲ್ಲ; ಇಡೀ ದೇಶದಲ್ಲೇ ಪ್ರಕ್ಷುಬ್ಧ ಪರಿಸ್ಥಿತಿ ಇತ್ತು. ಮಸೀದಿಗಳ ಮೇಲೆ ದಾಳಿ ನಡೆಯುತ್ತಿತ್ತು. ಅದನ್ನು ತಡೆಗಟ್ಟಲು ಮುಸಲ್ಮಾನರು ಪ್ರಯತ್ನಿಸುತ್ತಿದ್ದರು. ಲಂಕೇಶರು ಈ ಘಟನೆಯನ್ನು ಪ್ರಸ್ತಾಪಿಸುತ್ತಾ 'ಮಸೀದಿ ಮೇಲೆ ದಾಳಿ ನಡೆದರೆ ಅದನ್ನು ತಡೆಯಬೇಕಾದವರು ಹಿಂದೂಗಳು. ದೇವಸ್ಥಾನಗಳ ಮೇಲೆ ದಾಳಿ ಮಾಡಿದರೆ ಅದನ್ನು ತಡೆಯಬೇಕಾದವರು ಮುಸಲ್ಮಾನರು. ಬಹುಸಂಸ್ಕೃತಿಯ ನಾಡಿನಲ್ಲಿ ಇದು ಕನಿಷ್ಠ ಅಗತ್ಯ. ಇಂತಹ ಮನಸ್ಥಿತಿಯನ್ನು ಹೊಂದಿರಬೇಕು. ಹಾಗೆ ಇಲ್ಲದವರನ್ನು ಸಂಶಯದಿಂದ ಕಾಣಬೇಕಾಗುತ್ತದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾನುಭಾವರು ಲಂಕೇಶರ ಮಾತಿನ ಅರ್ಥವನ್ನೇ ತಿರುಚಿದರು. 'ಈ ಮಹನೀಯರು ನಿಮ್ಮ ಜನಗಳನ್ನೇ ನೀವು ಸಂಶಯದಿಂದ ನೋಡಿ ಎಂದು ಹೇಳಿದ್ದಾರೆ. ಹೆತ್ತತಾಯಿಯನ್ನು ನೀವು ಸಂಶಯಿಸಬೇಕು. ಅವಳು ಬಡಿಸಿದ ಅನ್ನದಲ್ಲಿ ವಿಷ ಇದೆಯಾ ಎಂದು ಪರೀಕ್ಷಿಸಬೇಕು' ಎಂದೆಲ್ಲ ಬಡಬಡಿಸಿದರು. ಸಭಿಕರಿಗೆ ಲಂಕೇಶರ ಮಾತುಗಳಿಗಿಂತ ಈ ಮಾತುಗಳು ಅಪ್ಯಾಯಮಾನವಾಯಿತು. ತಮ್ಮ ಸಂತೋಷವನ್ನು, ಸಮ್ಮತಿಯನ್ನು ಚಪ್ಪಾಳೆಯ ಮೂಲಕ ಪ್ರದರ್ಶಿಸಿದರು. ಇದನ್ನು ಕಂಡು ಲಂಕೇಶರು ಆತಂಕಗೊಂಡರು. ವಿಚಲಿತರಾದಂತೆ ಕಂಡು ಬಂದರು.

ಸಭೆ ಮುಕ್ತಾಯವಾಯಿತು. ಅವರನ್ನು ಬಸ್ಸಿಗೆ ಹತ್ತಿಸಲು ಜೊತೆಯಲ್ಲಿ ಹೋದೆ. ದಾರಿಯಲ್ಲಿ 'ನಾನು ಹೇಳಿದ್ದು ತಪ್ಪೇನ್ರಿ?' ಅಂತ ಕೇಳಿದರು. ನನಗೆ ಹಾಗೆ ಅನ್ನಿಸಿರಲಿಲ್ಲ, ಅವರು ಸರಿಯಾಗಿಯೇ ಹೇಳಿದ್ದರು. ಅದನ್ನೇ ಅವರಿಗೆ ತಿಳಿಸಿದೆ. ಆದರೂ ಅವರಿಗೆ ಸಮಾಧಾನ ಆಗಲಿಲ್ಲ. 'ಅದಕ್ಕೆ ಕಣ್ರಿ ಹಾಳಾದ ಭಾಷಣಗಳಿಗೆ ಒಪ್ಪಿಕೊಳ್ಳಬಾರದು. ಒಪ್ಪಿಕೊಂಡರೆ ಹಿಂದಿನ ದಿವಸವೆಲ್ಲ ನಾಳೆ ಏನು ಮಾತನಾಡುವುದು ಅನ್ನೋ ಯೋಚನೆ. ಮಾರನೆ ದಿನ ನಾನು ಮಾತನಾಡಿದ್ದು ಸರೀನಾ? ಅದನ್ನು ಜನರಿಗೆ ತಲುಪಿಸಿದೆನಾ ಎಂಬ ಯೋಚನೆ ಕಾಡುತ್ತೆ ಕಣ್ರಿ. ಥೂ ದರಿದ್ರ ಕಣ್ರಿ' ಅಂದರು.



ಕೋಮು ಸೌಹಾರ್ದತೆ ಕುರಿತಂತೆ ಲಂಕೇಶರ ನಿಲುವು ಕೊನೆಯವರೆಗೂ ಇದೇ ಆಗಿತ್ತು ಎಂಬುದು ನನ್ನ ಗ್ರಹಿಕೆ. ಮೂಲಭೂತವಾದದ ವಿರುದ್ಧ ಕೆಂಡ ಕಾರುತ್ತಿದ್ದರು. ಹಿಂದೂ ಮೂಲಭೂತವಾದ, ಮುಸ್ಲಿಂ ಮೂಲಭೂತವಾದ ಎಂಬುದಿಲ್ಲ, ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಅವರಿಗೆ ಹಿಂದೂ ಧರ್ಮವೂ ಇಲ್ಲ ಇಸ್ಲಾಂ ಧರ್ಮವೂ ಇಲ್ಲ. ದ್ವೇಷ, ಹಿಂಸೆಯೇ ಅವರ ಧರ್ಮ. ಸಮಾಜದ ನೆಮ್ಮದಿ ಕೆಡಿಸುವುದರಲ್ಲಷ್ಟೇ ಅವರ ಆಸಕ್ತಿ, ಅಭಿವೃದ್ಧಿಯ ಶತ್ರುಗಳು ಅವರು ಎಂಬುದನ್ನು ಖಚಿತವಾಗಿ ನಂಬಿದ್ದರು.

1977ರಲ್ಲಿ ನಡೆದ ಘಟನೆ ಇದು ಎಂದು ಹೇಳಲಾಗುತ್ತದೆ. ಹಾಸನದಲ್ಲಿ 'ಸಿದ್ಧರಾಮ ಜಯಂತಿ'ಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಹೆಸರಾಂತ ಲಿಂಗಾಯತರನ್ನು ಕರೆದು ಸನ್ಮಾನಿಸುವ ಪರಂಪರೆಯೇ ಇದೆಯಂತೆ. ಲಂಕೇಶರು ಆ ವೇಳೆಗೆ ಸಿನಿಮಾರಂಗದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದರು. ಜಾತಿಗಳಿಗೆ ಒಂದು ವಿಚಿತ್ರವಾದ ಶಕ್ತಿ ಇರುತ್ತದೆ. ಅವರ ಅಡ್ನಾಡಿತನವನ್ನು ಉಗಿದು ಉಪ್ಪಿನಕಾಯಿ ಹಾಕಿದರೂ 'ನಮ್ಮೋನಲ್ಲವಾ ಅಂದರೆ ಅನ್ನುತಾನೆ' ಎನ್ನುವ ಉದಾರಿತನವನ್ನು ತೋರಿಸುತ್ತಾರೆ. ಇಲ್ಲ 'ಏನು ಸೊಗಸಾಗಿ ಬೈದಿದ್ದಾನೆ' ಎಂಬ ಮೆಚ್ಚುಗೆ ಸೂಚಿಸುತ್ತಾರೆ. ಲಂಕೇಶರು ಜಾತಿ ಸಂಘಟನೆಗಳನ್ನು ವಿರೋಧಿಸುತ್ತಾರೆ ಎಂಬುದನ್ನು ತಿಳಿದಿದ್ದರೂ 'ತಮ್ಮ ಜಾತಿಯವ' ಎಂಬ ಕಾರಣಕ್ಕೆ ಅವರಿಗೆ ದುಂಬಾಲು ಬಿದ್ದು ಸನ್ಮಾನ ಸ್ವೀಕಾರಕ್ಕೆ ಒಪ್ಪಿಗೆ ಪಡೆದರಂತೆ. ಲಂಕೇಶರು ಬಂದರು. ಸನ್ಮಾನ ಮಾಡಿದ ಮಠಾಧಿಪತಿ ನೋಡಿದರು. ಕೆರಳಿ ಕೆಂಡ ಆದರು. ಎಲ್ಲ ಆದಮೇಲೆ ಅವರ ಭಾಷಣ. 'ಇಂತಹ ಸೋಮಾರಿಗಳ, ದಂಡಪಿಂಡಗಳ ಮಠಾಧೀಶರು ಅಂತ ಕರೆದು ಮರ್ಯಾದೆ ಮಾಡ್ತೀರಲ್ಲ, ನಿಮಗೆ ಬುದ್ದಿಗಿದ್ದಿ ಇದೆಯ. ಅವರು ಯಾವತ್ತಾದರೂ ನಿಮ್ಮ ಕಷ್ಟಸುಖ ವಿಚಾರಿಸಿದ್ದಾರಾ? ಬದುಕುವ ರೀತಿ ಹೇಳಿಕೊಟ್ಟಿದ್ದಾರಾ? ಕಂದಾಚಾರ ಮೂಢನಂಬಿಕೆಗಳಲ್ಲೇ ಕೊಳೆತು ನಾರುವಂತೆ ಮಾಡ್ತಿರೋ, ಇಂತಹವರ ಪಾದ ತೊಳೆದು ಅದರ ನೀರ ಕುಡೀತೀರಲ್ಲ ಅದರಿಂದ ಪಾಪ ಪರಿಹಾರ ಆಗುತ್ತೆ, ಪುಣ್ಯ ಬರುತ್ತೆ ಅಂತ ನಂಬಿದೀರಲ್ಲ. ಅದರಿಂದ ಪುಣ್ಯ ಬರುವುದಿಲ್ಲ, ರೋಗ ಬರುತ್ತೆ. ಒಂದು ಜಾತಿಯವರನ್ನೆಲ್ಲ ಒಂದೇ ಕಡೆ ಸೇರಿಸಿ ಇಂತಹ ಅಪಾಥಭೂತಿಗಳನ್ನು ಪೂಜಿಸುತ್ತಾ ಸಂತೋಷ ಸಂಭ್ರಮದಿಂದ ಇದ್ದೀರಲ್ಲಾ ನಿಮಗೆ ನಾಚಿಕೆ ಆಗಬೇಕು. ಹೀಗೆ ಮುಂದುವರೆದರೆ ನೀವು ನಾಶ ಆಗ್ತೀರಿ. ವೈಚಾರಿಕತೆ, ವೈಜ್ಞಾನಿಕತೆ, ಮಾನವೀಯ ಮೌಲ್ಯಗಳನ್ನು ಅರಿತು ಬದುಕುವುದನ್ನು ಕಲಿಯಿರಿ' ಅಂದರಂತೆ.

ಸನ್ಮಾನ ಮಾಡಿದವರಿಗೆ ಅವರ ಮುಖದ ನೇರಕ್ಕೆ ಹೀಗೆ ಹೇಳಿದರೇ ಇವನ್ನ ಯಾಕಾದರೂ ಕರೆಸಿ ಸನ್ಮಾನಿಸಿದೆವೋ ಅನ್ನಿಸಿರಬಹುದು. ತಮ್ಮ ಎಕ್ಕಡ ತಗೊಂಡು ತಾವೇ ಭಾರಿಸಿಕೊಳ್ಳಬೇಕು ಅನ್ನಿಸಿರಲೂ ಸಾಕು. ಆದರೆ ಸನ್ಮಾನ ಮಾಡಿ ಆಗಿತ್ತು. ಇನ್ನು ಮುಂದೆ ಯಾರೇ ಸನ್ಮಾನಿತರಾಗಿರಲಿ. ಅವರು ಭಾಷಣ ಮಾಡುವುದಕ್ಕಿಂತ ಮೊದಲು ಭಾಷಣದ ಪ್ರತಿಯನ್ನು ಸನ್ಮಾನ ಸಮಿತಿಗೆ ಒಪ್ಪಿಸಿ ಅನುಮತಿ ಪಡೆಯಬೇಕು ಎಂದು ಠರಾವು ಪಾಸು ಮಾಡಿದ್ದರೂ ಆಶ್ಚರ್ಯ ಇಲ್ಲ.

ಅದು ಹಾಗಿರಲಿ, ಈ ಸುದ್ದಿ ಎಲ್ಲ ಕಡೆ ಹರಡಿ ಜನರ ಬಾಯಿಗೆ ಎಲೆಅಡಿಕೆ ಆಯಿತಂತೆ. ಲಂಕೇಶ ಅನ್ನೋನು ಎಂತ ಹವನು ಅಂತಿ, ಸಿನಿಮಾ ಹುಚ್ಚನಂತೆ, ಸಿನಿಮಾ ತಗೀತೀನಿ, ಸಿನಿಮಾ ತಗೀತೀನಿ ಅಂತ ಮೈತುಂಬ ಸಾಲ ಮಾಡಿಕೊಂಡನಂತೆ. ಮನೆ ಮಾರಿದನಂತೆ. ಹೆಂಡತಿ ಮಕ್ಕಳ ಮೈಮೇಲಿನ ಒಡವೇನೂ ಮಾರಿಕೊಂಡನಂತೆ. ಹಂಗಾದ್ರೂ ಸಾಲ ತೀರ್ಲೇ ಇಲ್ಲವಂತೆ. ಅದೇ ಯೋಚನೇಲಿ ಹುಚ್ಚು ಹಿಡಿದದಂತೆ. ಹೋಗಿಹೋಗಿ ಅಂತ ಹುಚ್ಚನ್ನ ಕರ್‍ಸಿ ಸನ್ಮಾನ ಮಾಡವರಲ್ಲ ಇವರಿನ್ನೆಂತಹ ಹುಚ್ಚರಿರಬೇಕು ಅನ್ನುವ ಸುದ್ದಿ ಪ್ರಚಾರ ಆಯಿತಂತೆ!

ಕವಿಶೈಲದಲ್ಲಿ ಕುವೆಂಪು ಕುರಿತ ವಿಚಾರಸಂಕಿರಣ. 1983ರಲ್ಲಿ ಇರಬೇಕು. ಲಂಕೇಶರು ಹೋಗಿನೋಡುತ್ತಾರೆ. ಸಭಿಕರಲ್ಲಿ ಬಹುಪಾಲು ಒಕ್ಕಲಿಗರು! 'ವಿಶ್ವಮಾನವ' ... ಎಂದು ಕನವರಿಸಿದ ಕವಿಗೆ 'ಒಕ್ಕಲಿಗ ಮಾನವ' ನಾ... ಭಕ್ತರು! ಕುವೆಂಪು ಅವರ ಕ್ರಿಯಾಶೀಲತೆಯನ್ನು ರಕ್ಷಿ... ಮತ್ತು ಬೆಳೆಸಲು ಮುಂದಾಗಬೇಕಾದವರು ಕಂದಾ... ಮತ್ತು ಪುರೋಹಿತಶಾಹಿ ದಬ್ಬಾಳಿಕೆಗೆ ಒಳಗಾದ ... ಜನರು, ಹರಿಜನರು, ಮುಸಲ್ಮಾನರು ಮತ್ತು ಶೋ... ಮಂದಿ ಎನ್ನುವುದು ಲಂಕೇಶರ ಅಭಿಪ್ರಾಯ ಆಗಿತ್ತು...

ಜಾತಿ ಈ ದೇಶದ ಶಾಪ. ಬೇಡವೆಂದರೂ ... ಬಿಡದು. ಇದನ್ನು ಕಳಚಿಕೊಂಡಿರುವ ಅಥವಾ ಆ ನಿಟ್ಟಿ... ಪ್ರಯತ್ನಿಸುವ ನಾಯಕರು ಇಂದಿನ ತುರ್ತು ಅಗತ್ಯ... ಯಾವುದೇ ಜಾತಿಯ ಪ್ರತಿನಿಧಿಯಾಗಿರಬಾರದು. ... ಪ್ರತಿನಿಧಿಯಾಗಿರಬೇಕು. ಯಾರಲ್ಲೂ ಅವನ ಆಯ್ಕೆ ಅಸ... ಹುಟ್ಟಿಸಬಾರದು. ಎಲ್ಲಾ ಕ್ಷೇತ್ರಗಳಲ್ಲಿಯೂ ಅ... ನಾಯಕರು ಬರಬೇಕು. ಲಿಂಗಾಯತರ ಹಾಗೂ ಒ... ನಾಯಕರೇ ತುಂಬಿರುವ ಈ ರಾಜ್ಯದಲ್ಲಿ ದಲಿತ, ಮುಸ... ನಾಯಕನಾಗಬೇಕು. ಆದರೆ ಅದು ಸಾಧ್ಯವಾಗುತ್ತಲೇ ...

ರಾಜಕೀಯ ಎನ್ನುವುದು ಸತತ ಧ್ಯಾನ, ಚಿಂ... ಮನುಷ್ಯನ ಮೂಲಭೂತ ಗುಣಗಳಾದ ಮಾನವೀ... ಬ್ರಷ್ಟತೆ ಇವುಗಳ ಅರಿವು. ಎಲ್ಲ ವರ್ಗಗಳ, ಜಾತಿಗಳ, ಧ... ಗಳ ನೋವುಗಳನ್ನು, ತಲ್ಲಣಗಳನ್ನು, ಸುಖದುಃಖಗ... ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ಎಂಬುದು ಲಂಕೇ... ನಂಬಿಕೆ ಆಗಿತ್ತು. ಆದರೆ ದೇಶ ವೃತ್ತಿ ರಾಜಕಾರಣಿಗ... ತುಂಬಿತುಳುಕುತ್ತಿತ್ತು. ರಾಜಕಾರಣ ಬಿಟ್ಟು ಬೇರೆ ಉದ... ಅವರಿಗೆ ಗೊತ್ತಿಲ್ಲ. ಹಗಲೂರಾತ್ರಿ ರಾಜಕಾರಣದ್ದೇ ... ಹೇಳುವುದು ಮಾತ್ರ 'ದೇಶಸೇವೆ!' ನಿಜಕ್ಕೂ ಅ... ಮಾಡುತ್ತಿರುವುದು 'ಹೊಟ್ಟೆ ಸೇವೆ' ಅವರದ್ದು ಹೊಟ್ಟೆ ಪಾ... ರಾಜಕೀಯ. ದೇಹಕ್ಕೆ ಹೊಟ್ಟೆ ಮಾತ್ರ ಇಲ್ಲ, ಹೃದಯ ... ಮನಸ್ಸು ಇದೆ. ಸರಿಯಾದ ನಾಯಕನಾದರೆ ಹೊಟ್ಟೆಪಾ... ಹೃದಯಪಾಡು, ಮನಸ್ಸು ಪಾಡು ಸಮತೋಲನ... ದಲ್ಲಿರುತ್ತವೆ. ವೃತ್ತಿ ರಾಜಕಾರಣಿಗೆ ಅಧಿಕಾ... ದೊರೆತೊಡನೆ ಹೊಟ್ಟೆ ... ಬಕಾಸುರ ಆಗುತ್ತದೆ. ... ತಟ್ಟೆಯಲ್ಲಿರುವುದು ಸಾಲದು ಎನ್ನಿಸತೊಡಗುತ್ತದೆ. ಬೇರೆಯವರ ತಟ್ಟೆಗೂ ... ಕೈಹಾಕುತ್ತಾನೆ. ಎಷ್ಟಾದರೂ ಅವನ ಹಸಿವು ಹಿಂಗುವುದೇ ... ಇಲ್ಲ. ಹೃದಯ ಮತ್ತು ಮ... ಕಮರಿ ಹೋಗುತ್ತವೆ. ರಾಜಕಾರಣವೇ ಉದ್ಯೋಗ ಎಂ... ಅದರ ಲಾಭ ತನ್ನ ವಂಶದವರಿಗೇ ಸಿಗಬೇಕು ಎನ್ನುವ ಆಸೆ. ವ... ಮಗ ವಕೀಲನಾಗುವಾಗ, ವೈದ್ಯನ ಮಗ ವೈದ್ಯನಾಗು... ರಾಜಕಾರಣಿಯ ಮಗ ರಾಜಕಾರಣಿಯಾದರೆ ತಪ್ಪೇ... ಅನ್ನುವವರೂ ಇದ್ದಾರೆ. ವಕೀಲನ ಮಗನಾದರೂ ವೃತ್ತಿ... ಮುಂದುವರೆಯಲು, ಯಶಸ್ಸು ಗಳಿಸಲು ಶ್ರಮ ಬೇಕು. ಅಂತೆ... ವೈದ್ಯನಾಗುವವನಿಗೂ ವೃತ್ತಿಯಲ್ಲಿ ಕೌಶಲ ಇರಬೇಕು. ... ರಾಜಕಾರಣಿಯ ಮಕ್ಕಳಿಗೆ ಅದ್ಯಾವುದೂ ಬೇಕಿಲ್ಲ, ರಾಜಕಾ... ಮಗ ಎಂಬುದೇ ಅವನ ಅರ್ಹತೆ!

ಆತ್ಮವಿಲ್ಲದ ಆಡಳಿತ ನೀಡಬೇಡಿ ಎನ್ನುತ್ತಿ... ಲಂಕೇಶ್. ಅದು ಮಾತ್ರ ಜನರ ನೋವಿನ ಸದ್ದು ಕೇ... ಬಲ್ಲದು. ಈ ಆತ್ಮವಿಲ್ಲದ ರಾಜಕೀಯ ತನ್ನನ್ನು ರಕ್ಷಿಸಿಕೊ... ಪೊಲೀಸ್ ಪಡೆ ಹೊಂದಿರಬೇಕು. ಈ ಆತ್ಮರಕ್ಷ... ದೇಹವನ್ನು ಮಾತ್ರ ರಕ್ಷಿಸುವುದಿಲ್ಲ, ನಿಮ್ಮ ಆತ್ಮವ... ಸೆರೆಯಲ್ಲಿಟ್ಟು ನಾಶ ಮಾಡುತ್ತಾರೆ.

# ವಂಚಕ ಸನ್ಯಾಸಿಗಳ ಮಧ್ಯೆ ನಿಜ ಸನ್ಯಾಸಿಯ ಕಥನ

ಕೇವಲ ದೇಗುಲದ 'ಹುಂಡಿ'ಯನ್ನೇ ಕೇಂದ್ರವನ್ನಾಗಿಸಿಕೊಂಡು ಅದರ ಸುತ್ತ ಗಿರಕಿ ಹೊಡೆಯುತ್ತಿರುವ ಉಡುಪಿಯ ಅ(ನಿ)ಷ್ಟ ಗ್ರಹಗಳು (ಮೂಲತಃ ತನ್ನ ಸಿದ್ಧಾಂತ ಪ್ರಚಾರಕ್ಕೆ ಮಧ್ವಾಚಾರ್ಯ ಆರಿಸಿದ್ದು ಒಂಬತ್ತು ಶಿಷ್ಯರನ್ನು. ಆದರೆ ತುಳುನಾಡನ್ನು ಬಿಟ್ಟು ಪ್ರಚಾರಕ್ಕೆ ಹೋದ ಒಂಬತ್ತನೇ ಗ್ರಹ ಈಗ ಲೆಕ್ಕಕ್ಕಿಲ್ಲ) ಮಾಡುತ್ತಿರುವ ಕಿತಾಪತಿಗಳು ಜನರಲ್ಲಿ ಕಿರಿಕಿರಿ-ರೇಜಿಗೆ ಹುಟ್ಟಿಸುತ್ತಿವೆ.

ಆಡಳಿತದಲ್ಲಿರುವ ಬಿಜೆಪಿ ಪಕ್ಷದಲ್ಲಿನ ಕಚ್ಚಾಟಗಳಿಗಿಂತ ಯಾವ ರೀತಿಯಲ್ಲೂ ಕಡಿಮೆ ಇರದ ಈ ಸೋಕಾಲ್ಡ್ 'ಸರ್ವಸಂಗ ಪರಿತ್ಯಾಗಿ'ಗಳ ಬೀದಿ ಜಗಳವನ್ನು ಕಂಡ ಜನತೆ ಛೀ ಥೂ ಎಂದು ಉಗಿಯುತ್ತಿದ್ದರೂ ಕೂಡ ಇವುಗಳಿಗೆ ಬುದ್ಧಿ ಬಂದಂತಿಲ್ಲ. ಇವುಗಳ ಐಹಿಕ ಭೋಗ ಲಾಲಸೆಗಳ ದ್ಯೋತಕವಾದ ಪರ್ಯಾಯ ಎಂಬ ನಾಟಕವನ್ನು ಮೈಸೂರಿನ ದಸರಾ ಹಬ್ಬದ ಲೆವೆಲ್ಲಿಗೆ ಬಿಂಬಿಸಬೇಕೆನ್ನುವುದು ಇವರ ಬಯಕೆ. ಕೆಲ ಸೋಗಲಾಡಿ ರಾಜಕಾರಣಿಗಳ ದೆಸೆಯಿಂದಾಗಿ ಇದು ಕಾರ್ಯರೂಪಕ್ಕೂ ಬಂದಿದೆ.

ಮುಗ್ಧ ಭಕ್ತರಿಂದ ದಿನಂಪ್ರತಿ ಲಕ್ಷಾಂತರ ಕಮಾಯಿ ಇರುವ ದೇಗುಲದ ದುಡ್ಡನ್ನು ತಮ್ಮ ಸ್ವಂತ ಹಣವನ್ನಾಗಿ ಬಳಸಿಕೊಳ್ಳುವ ಉದ್ದೇಶದಿಂದಲೇ ಕೃಷ್ಣ ದೇವಸ್ಥಾನವನ್ನು ಅಕ್ರಮವಾಗಿ 'ಮಠ' ಎಂದು ಬಿಂಬಿಸಿ, ಅದನ್ನು ಮುಜರಾಯಿ ಇಲಾಖೆಯ ವ್ಯಾಪ್ತಿಯಿಂದ ಹೊರಗೆ ಉಳಿಸಿಕೊಂಡ ಹಿಕ್ಮತ್ತುದಾರರಿವರು. ಒಂದೆಡೆ ಭಕ್ತರು ನೀಡಿದ ಕಾಣಿಕೆ ಜನರಿಗೆ ಹೋಗಬಾರದು, ಇನ್ನೊಂದೆಡೆ ತಮ್ಮ ಬಳಿ ಕೋಟ್ಯಾಂತರ ರೂಪಾಯಿ ಆದಾಯ ಇದ್ದರೂ ಜನರ ತೆರಿಗೆಯಿಂದ ಸಂಗ್ರಹವಾದ ಸರ್ಕಾರಿ ಖಜಾನೆಯಿಂದ ಇವರು ಆರ್ಥಿಕ ನೆರವನ್ನು ಇವರು ತಮ್ಮ ಡೊಂಬರಾಟಕ್ಕೆ ಪಡೆಯುತ್ತಾರೆ.

ಈ ಬಾರಿಯ ಪರ್ಯಾಯಕ್ಕೆಂದು ಸಿಎಂ ಸಾಹೇಬರು ಸರ್ಕಾರಿ ಖಜಾನೆಯಿಂದ ಬರೋಬ್ಬರಿ 8.5 ಕೋಟಿ ರೂಪಾಯಿಗಳನ್ನು ನೀಡಿದಲ್ಲದೆ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಎಂದರೆ ಈ ಅಪ್ಪಗಳ 'ತಾಕತ್ತು' ಎಂತಹದ್ದು ಎಂಬುದು ಅರ್ಥವಾಗುತ್ತದೆ.

'ಸನ್ಯಾಸತ್ವ ಎಂಬುದು ಮನಸ್ಸಿನ ಪ್ರಬುದ್ಧತೆ ಹಾಗು ಒಂದು ಪರಿಪೂರ್ಣತೆಯ ಸ್ಥಿತಿಗೆ ಸಂಬಂಧಪಟ್ಟ ಸಂಗತಿಯೇ ವಿನಃ ರೂಢಿಯ ಆಚರಣೆಗಳಿಗೂ, ಧರಿಸುವ ಬಟ್ಟೆಗಳಿಗೂ ಹಾಗು ನಿಜ ಸನ್ಯಾಸತ್ವಕ್ಕೂ ಏನೂ ಸಂಬಂಧಗಳಿಲ್ಲ' ಎನ್ನುವುದು ಆಚಾರ್ಯ ರಜನೀಶ್ ಅವರ ನುಡಿ. ದೇಶ ಕಂಡ ಮಹಾನ್ ಮಾನವತಾವಾದಿ ಸ್ವಾಮಿ ವಿವೇಕಾನಂದರನ್ನು ಜನ ದೇಶ ಗೌರವಿಸುತ್ತಾರೆ.

ವಿವೇಕಾನಂದರ ಸಿದ್ಧಾಂತಕ್ಕೂ, ತಮ್ಮ ಸಿದ್ಧಾಂತಕ್ಕೂ ಸ್ವಲ್ಪವೂ ತಾಳೆಯಾಗದಿದ್ದರೂ ಈ ಹಿಂದುತ್ವವಾದಿಗಳು ಈಗ ವಿವೇಕಾನಂದರನ್ನು ಕಿಡ್ನಾಪ್ ಮಾಡಿದ್ದಾರೆ. "ನಿನ್ನ ನಾಮದ ಬಲವೊಂದಿದ್ದರೆ ಸಾಕು" ಎನ್ನುತ್ತಾ ವಿವೇಕಾನಂದರನ್ನು ಇವರು ದುರುಪಯೋಗಮಾಡಿಕೊಳ್ಳುತ್ತಿದ್ದಾರೆ.


ತಮಾಷೆಯೆಂದರೆ ಇದೇ ವಿವೇಕಾನಂದರು ಬದುಕಿದ್ದಾಗ ಅವರು ... ಹಿಂದೂತ್ವವಾದಿಗಳಿಗೆ ವರ್ಜ್ಯರಾಗಿದ್ದರು. ಇವರ ಜೀವನಶೈಲಿ ಸಾಂಪ್ರದಾಯಿ... ಸನ್ಯಾಸಿಗಳಂತಿರದ ಕಾರಣ ಹಾಗು ಇವರ ಅಂದಿನ ರೂಢಿಗೆ ವಿರುದ್ಧವೆನಿಸು... ಪ್ರಗತಿಪರ ನಿಲುವುಗಳು ಹೊಂದಿದ್ದರಿಂದ ಅವರು ಈ ಸಂಪ್ರದಾಯವಾದಿಗಳ... ಬಿಸಿತುಪ್ಪವಾಗಿದ್ದಿತು. ಆದರೀಗ ವಿವೇಕಾನಂದರ ಫೋಟೋಗಳನ್ನು ತಮ... ಕಾರ್ಯಕ್ರಮಗಳಲ್ಲಿ ಈ ಕೋಮುವಾದಿಗಳು ಧಾರಾಳವಾಗಿ ಬಳಸಿಕೊಳ್ಳು... ತ್ತಿದ್ದಾರೆ. ನೊಂದವರ ಕುರಿತು ನೈಜ ಕಾಳಜಿ ಹೊಂದಿದ್ದ ವಿವೇಕಾನಂದ... ಹೆಸರನ್ನು ದುರುಪಯೋಗ ಪಡಿಸಿಕೊಳ್ಳುವ ಈ ಜನರು ಮೊದಲಿಗೆ ಅವ... ಸಂದೇಶಗಳನ್ನು ಸ್ವಲ್ಪವಾದರೂ ಪಾಲಿಸುವಂತ... ಮನಸ್ಸುಳ್ಳವರಾಗಿರಬೇಕಲ್ಲವೇ?

- ರವಿ ಪುತ್ತೂರ, ಬೆಂಗಳೂ...

ಒಂದೊಂದೂ ತಾನಾಗಿರುವ, ತಾನೇ ಎಲ್ಲವ... ಆಗಿರುವ, ಅಲ್ಲಾಹು, ಶ್ರೀಹರಿ, ಶಿವಶಂಕರ, ಯಹೋವ... ಮುಂತಾಗಿ ಬೇರೆಬೇರೆ ಹೆಸರುಗಳಲ್ಲಿ ಕರೆಸಿಕೊಂಡರು... ಒಂದೊಂದೇ ತಾನಾಗಿರುವ, ಎಲ್ಲರಯೆದೆಯೊಳಗಿ... ಶಕ್ತಿಯೊಂದಿದೆಯಲ್ಲವೇ? ಆ ಅಂಥ ಶಕ್ತಿಗೆ ಪ್ರಿಯವಾಗುವಂತೆ ಬದುಕಬ... ಬೇಕೆಂದಿರುವವರೆಲ್ಲರೂ ಈಗ ಸಲ್ಮಾನ್ ರಷ್ದೀ ಅವರ ವಿರುದ್ಧ ದೇವಬಂದಿ... ಮುದ್ರಸಾದವರು ಹೊರಡಿಸಿರುವ ಫತ್ವಾವನ್ನು, ಅದರ ಹಿಂದೆ ಇರು... ಮನೋಧರ್ಮವನ್ನು ಮತ್ತು ಅದನ್ನು ಒಪ್ಪಿ ಎತ್ತಿಹಿಡಿಯುವ ಶಕ್ತಿಗಳನ... ವಿರೋಧಿಸಬೇಕು.

ಇಂಥ ಫತ್ವಾ ಇಲ್ಲವೆ ಠರಾವುಗಳನ್ನು ಹೊರಡಿಸುತ್ತ ಅಸಹನೆಯನ್ನು ಹರ... ಹಿಂಸೆ-ಬೆದರಿಕೆಗಳಲ್ಲಿ ತೊಡಗುವ ಗುಂಪುಗಳು ಯಾವುವೇ ಆಗಿರಲಿ, ಅ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಅತ್ಮವೇ ಇಲ್ಲದ, ಹೃದಯದ, ಮನುಷ್ಯನ ಭಾವನೆಗಳನ್ನು ...ರಿಸಿದ, ಹೊಟ್ಟೆಬಾಕತನದಿಂದ ದೇಶವನ್ನೇ ನುಂಗುವ ...ಜಕಾರಣದಿಂದ ಜನ ರೋಸತ್ತಿದ್ದರು. ಇಂತಹ ಕಾಲ ...ಟ್ಟದಲ್ಲಿ ಸಾಹಿತ್ಯ, ಸಾಂಸ್ಕೃತಿಕ, ರಾಜಕೀಯ ಆಯಾಮವಾಗಿ ...ಗತಿರಂಗ' ಹುಟ್ಟಿತು. ಇತರೆ ಪಕ್ಷಗಳಿಗಿಂತ ಇದರ ...ೂಪವೇ ಭಿನ್ನ ಆಗಿತ್ತು, ಪದಾಧಿಕಾರಿಗಳು ಎಂದು ಯಾರೂ ...ಲಿಲ್ಲ. ಒಮ್ಮೆ ಅಧ್ಯಕ್ಷ ಎಂದು ಆದರೆ ಜೀವನ ಪರ್ಯಂತ ...ನನೇ ಅಧ್ಯಕ್ಷ. ಅದಕ್ಕಾಗಿ ಎಲ್ಲ ರೀತಿಯ ತಂತ್ರ, ...ತಂತ್ರಗಳನ್ನು ಮಾಡಲು ಆವನು ಸಿದ್ಧ ಎಂಬುದರ ಅರಿವು ...ತ್ತು. ಇವತ್ತು ರೈತ ಸಂಘದ ಕಿತ್ತಾಟಕ್ಕೆ, ದಲಿತ ಸಂಘರ್ಷ ...ುತಿಯ ಹೋಳಾಗುವಿಕೆಗೆ 'ಅಧ್ಯಕ್ಷ'ಗಿರಿಯೇ ಕಾರಣ. ...ಗತಿರಂಗಕ್ಕೆ ಇಂತಹ ಅಪಾಯ ಬರುವ ಹಾಗೇ ಇರಲಿಲ್ಲ.

ಆ ಹೊತ್ತಿನ ರಾಜಕೀಯದ ಬಗ್ಗೆ ಇದ್ದ ಸಿಟ್ಟು, ಆತಂಕ, ...ೋವು ಮತ್ತು ತಲ್ಲಣಗಳು ಎಲ್ಲದಕ್ಕೂ ಆಗಿಸಲು ನೂರಾರು ...ಭೆಗಳನ್ನು ನಡೆಸಿದೆವು. ವೃತ್ತಿ ರಾಜಕಾರಣಿಗಳ ಮೋಸ, ...ಚನೆ, ಕುತಂತ್ರಗಳನ್ನು ಬಯಲು ಮಾಡಲಾಯಿತು. ...ನವಂತರು, ನಾಚಿಕೆ ಉಳ್ಳವರು, ಸಜ್ಜನರು, ಪ್ರಾಮಾಣಿಕರು, ...ನಪರ ಕಾಳಜಿ ಉಳ್ಳವರು ರಾಜಕಾರಣ ಮಾಡಬಹುದು ...ಬ ಸ್ಥಿತಿ ನಿರ್ಮಾಣ ಆಗುತ್ತಿತ್ತು.

ಸಿದ್ಧಾಂತ ಏನೇ ಇದ್ದರೂ ಪ್ರಗತಿರಂಗವೊಂದೇ ಯಶಸ್ಸು ...ಸಲಾರದು ಎಂಬ ಅರಿವಿತ್ತು. ಸಮಾನಮನಸ್ಕರಾದ ರೈತ ...ಘ ಮತ್ತು ದಲಿತ ಸಂಘರ್ಷ ಸಮಿತಿಯ ಜೊತೆಗೂಡಿ ...ೂರನೆ ರಾಜಕೀಯ ಶಕ್ತಿಯಾಗಿ ಹೊರಹೊಮ್ಮ...ಕೆಂಬುದು ಬಹುಜನರ ಆಶಯವಾಗಿತ್ತು. ಆದರೆ ...ುಂಚೂಣಿ ನಾಯಕರ ವೈಯಕ್ತಿಕ ಪ್ರತಿಷ್ಠೆ ಇದನ್ನು ...ಧ್ಯವಾಗಿಸಲು ಬಿಡಲಿಲ್ಲ.

ಇಷ್ಟೆಲ್ಲ ಹೇಳಿದ ಮೇಲೆ ಕೊನೆಯದಾಗಿ ಒಂದು ...ಷಯವನ್ನು ಪ್ರಸ್ತಾಪಿಸಲೇಬೇಕು. ಎಸ್.ಆರ್. ಬೊಮ್ಮಾಯಿ ...ವರು ಮುಖ್ಯಮಂತ್ರಿಗಳಾಗಿದ್ದ ಅವಧಿ. ಕಾಲೇಜು ಉಪ ...ಸಕರು ಕೆಲವು ಬೇಡಿಕೆ ಮುಂದಿಟ್ಟು ಉಪವಾಸ ಮುಷ್ಕರ ...ೂಡಿದ್ದರು. ನಾಲ್ಕು, ಐದು ದಿನಗಳಾದರೂ ಸರ್ಕಾರ ...ದಿಸಿರಲಿಲ್ಲ. ಮುಷ್ಕರನಿರತರಲ್ಲಿ ಕೆಲವರು ನಿತ್ರಾಣಗೊಂಡು ...ಸ್ಪತ್ರೆಗೆ ದಾಖಲಾದರು. ವಿಷಯದ ಗಂಭೀರತೆಯನ್ನು ಅರಿತ ...ವರು ಲಂಕೇಶ್ ಬಳಿಗೆ ಬಂದರು. ಮುಖ್ಯಮಂತ್ರಿಯವ ...ೂಡನೆ ನೀವು ಮಾತನಾಡಿದರೆ ಸಮಸ್ಯೆ ಬಗೆಹರಿಯುತ್ತದೆ ...ಂದರಂತೆ. ಲಂಕೇಶ್ ಹೋಗಿಬಂದರು. ಮುಷ್ಕರ ನಿಂತಿತು.

ಪಾನಗೋಷ್ಠಿ ಉತ್ತುಂಗಕ್ಕೆ ಏರಿದ್ದಾಗ ಈ ವಿಷಯ ...ಸ್ತಾವಕ್ಕೆ ಬಂದಿತು. ರಾಜಕಾರಣಿಗಳೊಂದಿಗೆ ಸಂಧಾನಕ್ಕೆ ...ಂದೂ ಲಂಕೇಶ್ ಹೋದವರೇ ಅಲ್ಲ. ನಾನು ಲಂಕೇಶ್‌ರನ್ನು ...ಂದು ಪ್ರಶ್ನೆ ಕೇಳಿದೆ- 'ಸಾರ್, ಬೊಮ್ಮಾಯಿ ಅವರು ...ುಖ್ಯಮಂತ್ರಿ ಆಗದೆ ದೇವೇಗೌಡರು ಆಗಿದ್ದರೆ ನೀವು ...ೋಗುತ್ತಿದ್ದಿರಾ?' 'ಸಂಗೀತ ಕಛೇರಿ'ಯ ಸದಸ್ಯರಲ್ಲಿ ಅಂದರೆ ...ಟ್ಟಂಗಿಗಳಲ್ಲಿ ಕೆಲವರು 'ಹೋಗೇ ಹೋಗ್ತಿದ್ರು. ವಿಷಯ ...ಷ್ಟು ಗಂಭೀರ ಆಗ್ತಿತ್ತು' ಎಂದು ಹೇಳುತ್ತಿರುವಾಗಲೇ ...ಂಕೇಶರು ಎಂದಿನ ಶೈಲಿಯಲ್ಲಿ ಸಿಗರೇಟಿನ ಒಂದು ದಂ ...ಳೆದು 'ಹೌದು ಕಣ್ರಿ, ಜಾತಿ ಎನ್ನುವುದು ಎಲ್ಲೋ ಒಂದು ...ಡೆ ಕೆಲಸ ಮಾಡಿರಬಹುದು' ಎಂದರು. ಇದು ನನಗೆ ...ಷ್ಟವಾದ ಲಂಕೇಶ್!

ನಾವು ಎದೆಮುಟ್ಟಿ ಕೇಳಿಕೊಳ್ಳೋಣ 'ನಮ್ಮ ಜಾತಿಗಾಗಿ ...ಾವತ್ತೂ ಯಾವ ಗಳಿಗೆಯೂ ನಮ್ಮ ಹೃದಯ ಮಿಡಿದೇ ...ಲ್ಲವೆ?'

ಅದರ ಸ್ಥಾನವನ್ನು ಮಾನವೀಯತೆ ತುಂಬಲಿ ಎಂಬುದೇ ಪ್ರಗತಿರಂಗದ ಆಶಯ ಆಗಿತ್ತು. ಅದನ್ನು ಮಾಡಲು ...ುತ್ತಿಸೋಣ.

-ಎಚ್.ಎಲ್. ಕೇಶವಮೂರ್ತಿ

ಹಿಂದೂತ್ವದ ಹೆಸರಿನಲ್ಲಿ ಕೆಲಸ ಮಾಡುವ ಸೇನೆಗಳಾಗಿರಲಿ, ಕನ್ನಡತನದ ಹೆಸರಿನಲ್ಲಿ ಕೆಲಸ ಮಾಡುವ ರಕ್ಷಣಾ ವೇದಿಕೆಗಳಾಗಿರಲಿ, ಇಸ್ಲಾಮೀಯತೆಯ ಹೆಸರಿನಲ್ಲಿ ಕೆಲಸ ಮಾಡುವ ಸಂಸ್ಥೆಗಳಾಗಿರಲಿ, ಯಾವುವೇ ಆಗಿರಲಿ, ಇಂಥ ಧೋರಣೆಗಳುಳ್ಳ, ಇಂಥ ಬಗೆಯಲ್ಲಿ ಕೆಲಸ ಮಾಡುವ ಎಲ್ಲವನ್ನೂ ಮತ್ತು ಎಲ್ಲರನ್ನೂ ನಾವು ವಿರೋಧಿಸಬೇಕು.

ಇಂಥಲ್ಲಿ, ವಿಶೇಷವಾಗಿ, ಲೇಖಕರು ಮತ್ತು ಕಲಾವಿದರು ಗಟ್ಟಿಯಾದ ಮತ್ತು ಖಂಡಿತವಾದ ನಿಲುವನ್ನು ತಾಳಬೇಕು. ಪ್ರಬುದ್ಧರಾದ ಲೇಖಕ-ಕಲಾವಿದರು ಎಲ್ಲ ಬಗೆಯ ಮತೀಯತೆಯನ್ನು ಮೀರಿರುತ್ತಾರೆ, ನಿಜವೇ. ಆದರೂ, ನನಗನ್ನಿಸುವಂತೆ, ದುಂಡಾವರ್ತಿ ಮಾಡುತ್ತಿರುವವರು ಹಿಂದೂಗಳಾದರೆ, ಹಿಂದೂ ಎನ್ನಿಸಿಕೊಳ್ಳುವ ಮನೆತನಗಳಲ್ಲಿ ಹುಟ್ಟಿದ ಲೇಖಕ ಕಲಾವಿದರು ಆ ಹಿಂದೂಗಳನ್ನೂ, ಮುಸಲ್ಮಾನರಾದರೆ ಮುಸಲ್ಮಾನ ಎನ್ನಿಸಿಕೊಳ್ಳುವ ಮನೆತನಗಳಲ್ಲಿ ಹುಟ್ಟಿದ ಲೇಖಕ ಕಲಾವಿದರು ಆ ಮುಸಲ್ಮಾನರನ್ನೂ, ಹೆಚ್ಚು ಗಟ್ಟಿಯಾಗಿ ಖಂಡಿಸಬೇಕು. ಅವರ ಜೊತೆಗೆ ಆಗ ಉಳಿದೆಲ್ಲ ಲೇಖಕರು, ಕಲಾವಿದರು ಸೇರಿಕೊಳ್ಳಬೇಕು. ವಿವೇಕ ಮತ್ತು ಸದ್ವರ್ತನೆಗಳಿಗೆ ಹೆಚ್ಚಿನ ಬಲ ಬರುತ್ತದೆ ...ದು ನಾವು ಆಸೆ ಇಟ್ಟುಕೊಳ್ಳಬಹುದಾದ್ದು ಆಗ ಮಾತ್ರ.

- ರಘುನಂದನ, ಬೆಂಗಳೂರು

# ದಶಾವರನಿಗೆ ಪ್ರೇಮ್ ತಪರಾಕಿ?

ಒಂದು ಕಾಲದಲ್ಲಿ ಒಬ್ಬರನ್ನೊಬ್ಬರು ಬಿಡದಂತೆ ಅಂಟಿಕೊಂಡಿದ್ದ ನಿರ್ದೇಶಕ ಪ್ರೇಮ್ ಮತ್ತು ಆತನ ಶಿಷ್ಯ ದಶಾವರ ಚಂದ್ರು ನಡುವಿನ ವೈರತ್ವ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದೆಯಾ?

ಒಂದಂತೂ ನಿಜ. ಇತ್ತೀಚೆಗೆ ದಶಾವರ ಚಂದ್ರನ ಮುಖ ಮೂತಿ ಖರಾಬಾಗುವಂತೆ ಆತನನ್ನು ಬಡಿಯಲಾಗಿದೆ. ಪರಿಣಾಮವಾಗಿ ಬೇಯಿಸಿಟ್ಟ ಗೆಣಸಿನಂತಾಗಿರುವ ಆತನ ಮೂತಿಯ ಬಗ್ಗೆ ಯಾರೇ ಕೇಳಿದರೂ "ಪ್ರೇಮ್ ಕಡೆಯವರು ಹೊಡೆದುಬಿಟ್ಟಿದ್ದಾರೆ. ಪ್ರೇಮ್ ಟೀಂನಿಂದ ನನಗೆ ಪ್ರಾಣಾಪಾಯ ಇದೆ" ಎಂದೆಲ್ಲಾ ಚಂದ್ರ ಬಡಬಡಿಸುತ್ತಿದ್ದಾನೆ.




ಹೇಳಿಕೇಳಿ ಹುಟ್ಟಾ ಫ್ರಾಡು ಈ ದಶಾವರಿ. ಆತನ ಮಾತನ್ನಂತೂ ಒಂದೇ ಏಟಿಗೆ ನಂಬುವ ಹಾಗಿಲ್ಲ. ಆದರೂ ಪ್ರೇಮ್ ಮತ್ತು ಚಂದ್ರನ ನಡುವೆ ಕಿತ್ತಾಟವಾಗಿರುವುದಂತೂ ನಿಜ. ಸದ್ಯಕ್ಕೆ ಪ್ರೇಮ್ ಮತ್ತು ಆತನ ಹೆಂಡತಿ ರಕ್ಷಿತಾ ಈತನನ್ನು ಉಗಿದು ಹೊರಕ್ಕೆ ಅಟ್ಟಿರುವುದೂ ಸತ್ಯ. ಅದಕ್ಕೆ ಕಾರಣವೂ ಇದೆ. 'ಜೋಗಯ್ಯ' ಸಿನಿಮಾ ನಿರ್ಮಾಣದ ಸಂದರ್ಭದಲ್ಲಿ ನಿರ್ಮಾಪಕಿ ರಕ್ಷಿತಾಳನ್ನು ಈ ದಶಾವರ ಸರಿಯಾಗೇ ಮುಂಡಾಯಿಸಿದ್ದ. ಅಡುಗೆ ಗುತ್ತಿಗೆದಾರರಿಂದ ಹಿಡಿದು ಜೂನಿಯರ್ ಆರ್ಟಿಸ್ಟುಗಳ ತನಕ ಪ್ರತಿಯೊಬ್ಬರಿಂದಲೂ ಕಮಿಷನ್ ಪಡೆದಿದ್ದ.

'ಉದಯರಂಗ' ಚಿತ್ರಮಂದಿರದ ಮಾಲೀಕ ನಾಗೇಂದ್ರ ಸೇರಿದಂತೆ ಮಳವಳ್ಳಿಯ ಫೈನಾನ್ಷಿಯರ್‌ಗಳಿಂದಲೂ ಈ ದಶಾವರ ಪ್ರೇಮ್ ಹೆಸರಲ್ಲಿ ದುಡ್ಡೆತ್ತಿದ್ದ. ಸಿನಿಮಾ ಮುಗಿದು ಎಲ್ಲಾ ಲೆಕ್ಕ ಹಾಕುವ ಹೊತ್ತಿಗೆ ಚಂದ್ರು ನೀಡಿದ ಖೊಟ್ಟಿ ಲೆಕ್ಕದ ಮೊತ್ತ ನಲವತ್ತು ಲಕ್ಷಕ್ಕೂ ಹೆಚ್ಚಾಗಿತ್ತು. ಒಂದಷ್ಟು ಜನ ತಂತ್ರಜ್ಞರು 'ಚಂದ್ರು ನಮ್ಮಿಂದ ಕಮಿಷನ್ ಪಡೆದಿದ್ದಾನೆ' ಎಂದು ಖುದ್ದು ರಕ್ಷಿತಾ ಬಳಿಯೇ ಆರೋಪಿಸಿದ್ದರು. ದುಡ್ಡು ಹೊಡೆದು ರೆಡ್ ಹ್ಯಾಂಡ್ ಆಗಿ ಸಿಕ್ಕಿಕೊಂಡ ಮೇಲೂ ದಶಾವರನನ್ನು ಉಳಿಸಿಕೊಳ್ಳುವ ಜರೂರು ಪ್ರೇಮ್ ಮತ್ತು ರಕ್ಷಿತಾಗಿರಲಿಲ್ಲ. ರಕ್ಷಿತಾ ಅಂತೂ ಕಾಲಲ್ಲಿದ್ದ ಮೆಟ್ಟನ್ನು ಚಂದ್ರನ ಮುಖಕ್ಕೆ ಹಿಡಿದಿದ್ದರು.

ಹೀಗೆ ಪ್ರೇಮ್ 'ಅಡ್ಡ'ದಿಂದ ಕಾಲುಕಿತ್ತ ಚಂದ್ರ ಹೊರಹೋದವನೇ ತನ್ನ ಮಾಜಿ ಗುರುವಿಗೆ ಖೆಡ್ಡಾ ತೋಡಲು ಮುಂದಾದ. ಹಿಂದೆ 'ಅಡ್ಡ' ಶೀರ್ಷಿಕೆಯನ್ನು ಪ್ರೇಮ್ ದಶಾವರ ಚಂದ್ರು ಹೆಸರಿನಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ರಿಜಿಸ್ಟರ್ ಮಾಡಿಸಿದ್ದರು. ಈ ಶೀರ್ಷಿಕೆಯನ್ನು ಚಂದ್ರು ಸಾ.ರಾ. ಗೋವಿಂದು ಹೆಸರಿಗೆ ಬದಲಿಸಿಕೊಟ್ಟುಬಿಟ್ಟಿದ್ದ. ಈ ಶೀರ್ಷಿಕೆ ತಮಗೆ ಬೇಕೆಂದು ಬಿ.ಕೆ. ಶ್ರೀನಿವಾಸ್ ಎಂಬುವವರು ಗೋವಿಂದು ಅವರಿಂದ ಪಡೆದಿದ್ದರು. ಈ ನಡುವೆ ಪ್ರೇಮ್ ತಾನು 'ಅಡ್ಡ' ಎಂಬ ಹೆಸರಿನ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿರುವುದಾಗಿ ಜಾಹೀರಾತು ಪ್ರಕಟಿಸಿದರು. ಇದನ್ನು ಕೇಳುತ್ತಿದ್ದಂತೆ ಶ್ರೀನಿವಾಸ್ ಕೆಂಡಾಮಂಡಲರಾದರು. "ನನ್ನ ಶೀರ್ಷಿಕೆಯಲ್ಲಿ ಪ್ರೇಮ್ ಹೇಗೆ ಚಿತ್ರ ಮಾಡುತ್ತಾರೆ?" ಅನ್ನೋದು ಅವರ ತಕರಾರು. ಅದಕ್ಕೆ ಪ್ರತಿಕ್ರಿಯೆಯಾಗಿ ಕೆಲವೇ ದಿನಗಳಲ್ಲಿ ಪ್ರೇಮ್‌ನ ಮತ್ತೊಬ್ಬ ಶಿಷ್ಯ ಸಂತು ನಿರ್ದೇಶನದಲ್ಲಿ 'ಅಡ್ಡ' ಚಿತ್ರ ಬರಲಿದೆ ಅಂತ ಶ್ರೀನಿವಾಸ್ ಜಾಹೀರಾತು ನೀಡಿದರು. ಕಡೆಗೆ ವಿಧಿಯಿಲ್ಲದೆ ಪ್ರೇಮ್ ತನ್ನ ಚಿತ್ರಕ್ಕೆ 'ಪ್ರೇಮ್ ಅಡ್ಡಾ' ಎಂದು ಮರುನಾಮಕರಣ ಮಾಡುವಂತಾಯಿತು.

ಇಷ್ಟೆಲ್ಲಾ ಯಡವಟ್ಟುಗಳಿಗೆ ಕಾರಣನಾದವನು ದಶಾವರನೇ.

"ಈ ಟೈಟಲ್ ವಿವಾದಕ್ಕೆ ಸಂಬಂಧಿಸಿದಂತೆ ಪ್ರೇಮ್ ತಮ್ಮ ಹುಡುಗರನ್ನು ಬಿಟ್ಟು ನನಗೆ ಹೊಡೆಸಿದ್ದಾರೆ. ಪ್ರೇಮ್ ನನ್ನನ್ನು ಬದುಕಲು ಬಿಡುತ್ತಿಲ್ಲ. ಜೀವ ಭಯದಿಂದ ನಾನು ಮನೆಗೇ ಹೋಗುತ್ತಿಲ್ಲ..." ಎಂದು ಚಂದ್ರು ಸಿಕ್ಕಲ್ಲೆಲ್ಲಾ ಸುದ್ದಿ ಪುಕಾರು ಮಾಡುತ್ತಿದ್ದಾನೆ.



ಆದರೆ ಚಂದ್ರನ ಮಾತಿನಲ್ಲಿ ಒಂದಿಷ್ಟೂ ಹುರುಳಿಲ್ಲ. ಚಂದ್ರು ಮತ್ತು ಪ್ರೇಮ್ ನಡುವೆ ವೈಮನಸ್ಯ ಇರುವುದೇನೋ ನಿಜ. ಆದರೆ ಅದಕ್ಕಾಗಿ ಚಂದ್ರನ ಮೇಲೆ ಹಲ್ಲೆ ಮಾಡಿಸುವಷ್ಟು ಗುಂಡಿಗೆ ಪ್ರೇಮ್‌ಗಂತೂ ಇಲ್ಲ.

ಹಾಗಾದರೆ ಚಂದ್ರನಿಗೆ ತಪರಾಕಿ ಕೊಟ್ಟಿದ್ಯಾರು?

ಅಸಲಿಯತ್ತೆಂದರೆ ದಶಾವರ ಚಂದ್ರನಿಗೆ ಏಟು ಕೊಟ್ಟಿರುವುದು ಖುದ್ದು ಆತನ ಭಾವಮೈದುನ ಹೇಮಂತ. ಹೇಮಂತ ಕೂಡಾ ಸಿನಿಮಾಗಳಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಆಗಿದ್ದಾನೆ. 'ರಾಜ್' ಚಿತ್ರದಲ್ಲಿ ಬರಬೇಕಿದ್ದ ಸಂಭಾವನೆಯ ಒಂದೂವರೆ ಲಕ್ಷ ರುಪಾಯಿಗಳನ್ನು ಕೊಡದೇ ಭಾವಮೈದುನನಿಗೇ ಮುಂಡಾಮೋಚಿದ್ದ ಚಂದ್ರು. ತನ್ನಕ್ಕ ಸುಕನ್ಯಾಳನ್ನು ಮದುವೆಯಾಗಿರುವ ಚಂದ್ರ ಆಕೆಯನ್ನಾದರೂ ನೆಟ್ಟಗೆ ಬಾಳಿಸಲಿ ಅನ್ನೋದು ಹೇಮಂತನ ಅಭಿಲಾಷೆ.




ಆದರೆ ಚಂಗಲು ಚಂದ್ರ ಅದನ್ನಾದರೂ ಮಾಡಲು ಹೇಗೆ ಸಾಧ್ಯ? 'ಜೋಗಯ್ಯ' ಚಿತ್ರದಲ್ಲಿ ಜೂನಿಯರ್ ಆರ್ಟಿಸ್ಟ್ ಆಗಿ ನಟಿಸಿದ್ದ ವಾಣಿ ಆಂಟಿ ಎಂಬಾಕೆಯೊಂದಿಗೆ ಇತ್ತೀಚೆಗೆ ಚಿನ್ನವೀಡು ಕಟ್ಟಿಕೊಂಡಿರುವ ಚಂದ್ರ ಕಳೆದ ನಾಲ್ಕು ತಿಂಗಳಿಂದ ತನ್ನ ಮನೆಕಡೆ ತಲೆ ಹಾಕಿಲ್ಲ. ಪತ್ನಿ ಸುಕನ್ಯಾ ತುಂಬು ಗರ್ಭಿಣಿಯಾಗಿದ್ದಾಗಲೂ ಸಹ ಒಂದು ದಿನಕ್ಕೂ ಆಕೆಯ ಮುಖ ನೋಡಿಬಂದಿಲ್ಲ ಈ ದುಷ್ಟ. ಈಗ್ಗೆ ಹದಿನೈದು ದಿನಕ್ಕೆ ಮುನ್ನವಷ್ಟೇ ಆಕೆ ಗಂಡುಮಗುವಿಗೆ ಜನ್ಮ ನೀಡಿದ್ದಾಳೆ. ಮಗುವನ್ನು ನೋಡಲೂ ಸಹ ದಶಾವರ ಹೋಗಿಲ್ಲ. ಸದ್ಯ ವಿಜಯನಗರದಲ್ಲಿ 'ರಾಗ ಡ್ಯಾನ್ಸ್ ಅಕಾಡೆಮಿ ಅಂಡ್ ಎಡಿಟಿಂಗ್' ಸ್ಟುಡಿಯೋ ಹೆಸರಿನಲ್ಲಿ ಚಂದ್ರ ಹತ್ತಾರು ವೆರೈಟಿಯ ದಂಧೆ ನಡೆಸುತ್ತಿದ್ದಾನೆ. ಗುರು ಪ್ರೇಮನೇ ಇದನ್ನು ಆರಂಭಿಸಿಕೊಟ್ಟಿದ್ದು. ಇದೇ ಸ್ಟುಡಿಯೋದಲ್ಲೇ ಹೊಸಾ ಪ್ರಿಯತಮೆ ವಾಣಿ ಆಂಟಿ ಜೊತೆ ಸೆಟಲ್ ಆಗಿಬಿಟ್ಟಿದ್ದಾನೆ.

ಇದೆಲ್ಲದರಿಂದ ರೋಸತ್ತಿದ್ದ ಹೇಮಂತ ಮತ್ತು ಆತನ ಸಹೋದರರು ಜನವರಿ ಹತ್ತೊಂಭತ್ತನೇ ತಾರೀಖು ಚಂದ್ರನನ್ನು ಹಿಡಿದು ಸಮಾ ರುಬ್ಬಿದ್ದಾರೆ.

ಸದ್ಯ ಚಂದ್ರು ವಿಜಯನಗರ ಪೊಲೀಸ್ ಸ್ಟೇಷನ್‌ನಲ್ಲಿ ಯಾರೋ ದುಷ್ಕರ್ಮಿಗಳು ತನ್ನ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ ಎಂದು ದೂರು ನೀಡಿ ತೆಪ್ಪಗಾಗಿದ್ದಾನೆ.

ಭಾವಮೈದುನ ಕೊಟ್ಟ ಏಟಿಗೆ ತನ್ನ ಗುರು ಪ್ರೇಮ್‌ನನ್ನೇ ಹೊಣೆಯಾಗಿಸುವುದು ಚಂದ್ರನ ಹುನ್ನಾರ! ಹಿಂದೊಮ್ಮೆ ಸೆಕ್ಸ್ ಚಿತ್ರವೊಂದರಲ್ಲಿ ನಟಿಸಿದ್ದ ದಶಾವರ ಚಂದ್ರು ಆನಂತರ ಯಾವ ಅವಕಾಶವೂ ಇಲ್ಲದೆ ದೇಶಾವರಿಯಂತೆ ಗಾಂಧಿನಗರದ ಸಣ್ಣಪುಟ್ಟ ನಿರ್ಮಾಪಕರ ಆಫೀಸುಗಳಲ್ಲಿ ಆಫೀಸ್ ಬಾಯ್ ಆಗಿದ್ದ. 'ಕರಿಯ' ಚಿತ್ರ ನಿರ್ಮಾಣದ ಸಂದರ್ಭದಲ್ಲಿ ಆನೇಕಲ್ ಬಾಲರಾಜ್ ಈತನನ್ನು ಕರೆದು ಪ್ರೊಡಕ್ಷನ್ ಮ್ಯಾನೇಜರ್ ಆಗಿ ನೇಮಿಸಿಕೊಂಡರು. ತಾನೇ ಬೆಳೆಸಿದ ದಶಾವರಿ ಈಗ ಪ್ರೇಮ್‌ಗೆ ಕಂಟಕವಾಗಿದ್ದಾನೆ.


• ಅರುಣ್






ಸುದ್ದಿ ಕಾಡಿಗೆ...

# ಏಡುಕುಂಡಲ ವಾಡಾ!



ಚಿತ್ರರಂಗದಲ್ಲಿ ಗಾಸಿಪ್‌ಗಳು ಮಾಮೂಲಿ. ಹೆಸರು ಪ್ಲಸ್ ಕೀರ್ತಿ ಜೊತೆಗೆ ಗುಸುಗುಸು ಸುದ್ದಿಗಳೂ ಬರುತ್ತವೆ, ಹೋಗುತ್ತವೆ!

ಈಗ ಕಿರುತೆರೆಯಲ್ಲೂ ಇಂತಹದ್ದೇ ಗಾಳಿಸುದ್ದಿಗಳು ಹಲವೊಮ್ಮೆ ಹರಿದಾಡುತ್ತವೆ. ಈಗ ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಕುಣಿಯೋಣು ಬಾರಾ' ಶೋನಲ್ಲಿ ಭಾಗವಹಿಸುತ್ತಿರುವ ಕೃತಿಕಾ ಗೌಡ ಮತ್ತು ಅದೇ ಕಾರ್ಯಕ್ರಮದಲ್ಲಿ ಜಡ್ಜ್ ಆಗಿರುವ ಮಾಲೂರು ಶ್ರೀನಿವಾಸ್ ನಡುವೆ ಕುಚ್ಚುಕ್ಕು ಕುಚ್ಚುಕ್ಕು ನಡೆಯುತ್ತಿದೆ ಎಂಬ ಗಾಸಿಪ್ ಹೊರಟಿದೆ.

ಕೃತಿಕಾ ಸುವರ್ಣವಾಹಿನಿಯ 'ಪ್ಯಾಟೆ ಮಂದಿ ಕಾಡಿಗ್ ಬಂದ್ರು' ರಿಯಾಲಿಟಿ ಶೋನಲ್ಲಿ ದೊಡ್ಡ ಸುದ್ದಿಯಾಗಿದ್ದಾಕೆ. ಅಲ್ಲಿ ಪ್ರವೀಣ್ ಎಂಬ ಟಿವಿ ಆ್ಯಂಕರ್ ಜೊತೆ ಹಗ್ಗಜಗ್ಗಾಟ ಮಾಡಿಬಂದ ಸುಂದರಾಂಗಿ. ಇವತ್ತಿಗೂ ಅಖಿಲ್ ಬಾಲಾಜಿ ಈಕೆಯ ಹೆಸರು ಕೇಳಿದರೆ ನಾಚಿಕೆಯಿಂದ ನಗುತ್ತಾನೆ!

ಮಾಲೂರು ಶ್ರೀನಿವಾಸ್ ಈ ಹಿಂದೆ ಎಸ್.ನಾರಾಯಣ್ ಅವರ ಪುತ್ರ ಪಂಕಜ್‌ನನ್ನು ಟ್ರೇನ್ ಮಾಡಿದ್ದ ಡ್ಯಾನ್ಸ್ ಮಾಸ್ಟರ್. ಸಿನಿಮಾಗಳಲ್ಲಿ ಕೆಲಸವಿಲ್ಲದೆ ಕಿರುತೆರೆಗೆ ಜಂಪ್ ಮಾಡಿರುವ ಶ್ರೀನಿಗೆ ಈಗ ಕೃತಿಕಾ ಮೇಲೆ ಎಳ್ಳಷ್ಟು ಪ್ರೀತಿ-ಪ್ರೇಮ ಎಂಬ ಹಸಿಬಿಸಿ ಸುದ್ದಿ ಸದ್ಯ ಕಿರುತೆರೆ ಲೋಕದಲ್ಲಿ ಬ್ರೇಕ್ ನ್ಯೂಸು!

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 08-02-2012



# ಚಿಂಗಾರಿ ಕಥೆ ಏನು ಗೊತ್ತಾ?

ದರ್ಶನ್ ಜೈಲಿಂದ ರಿಲೀಜಾಗಿ ಮರುಹುಟ್ಟು ಪಡೆದ ನಂತರ ರಿಲೀಜಾಗುತ್ತಿರುವ ಮೊದಲ ಚಿತ್ರ 'ಚಿಂಗಾರಿ' ಇನ್ನೊಂದು ವಾರದಲ್ಲಿ ತೆರೆಗೆ ಬರುತ್ತಿದೆ.

ನಾಯಕಿಯ ಮುಂದೆ ಪೋರ್ಕಿಯಂತೆ ತಿರುಗಾಡುವ ನಾಯಕ. ನಾಯಕಿಯ ಕಿಡ್ನಾಪ್ ಆಗುತ್ತದೆ. ಆಕೆಯನ್ನು ರಕ್ಷಿಸಲು ನಾಯಕ ಕೂಡಾ ಸ್ವಿಡ್ಜರ್‌ಲ್ಯಾಂಡ್‌ಗೆ ತೆರಳುತ್ತಾನೆ. ಆಮೇಲಷ್ಟೇ ಗೊತ್ತಾಗುವುದು ಹೀರೋ ಪೋರ್ಕಿ ಅಲ್ಲ ಪೊಲೀಸ್ ಅನ್ನೋದು... ಇದು ಕತೆಯ ಥ್ರೆಡ್ಡು. ಸಣ್ಣದೊಂದು ಎಳೆಯನ್ನು ಹಿಡಿದು ಸಿನಿಮಾ ಮಾಡಿರುವುದರಿಂದ 'ಚಿಂಗಾರಿ' ಚಿತ್ರಪ್ರೇಕ್ಷಕರಿಗೆ ಹಿಡಿಸುತ್ತೋ ಇಲ್ಲವೋ ಅನ್ನೋದು ಗಾಂಧಿನಗರದವರ ಅಭಿಪ್ರಾಯ. ದರ್ಶನ್ ಬಂಧನದ ಪ್ರಕರಣ ಕಾವು ಪಡೆದಿದ್ದರಿಂದ ಮತ್ತು 'ಸಾರಥಿ'ಯ ತಿರುಳು ಕೂಡಾ ಪ್ರೇಕ್ಷಕರಿಗೆ ರುಚಿಸಿದ್ದರಿಂದ ಆ ಚಿತ್ರ ಸೂಪರ್ ಹಿಟ್ ಎನಿಸಿಕೊಂಡಿತ್ತು. ಆದರೆ 'ಚಿಂಗಾರಿ' ಕಥೆ ಏನಾಗುತ್ತೋ ಗೊತ್ತಿಲ್ಲ.

'ಗೆಳೆಯ' ಮತ್ತು 'ಬಿರುಗಾಳಿ' ಎಂಬೆರಡು ಫ್ಲಾಪ್ ಚಿತ್ರಗಳನ್ನು ನೀಡಿದ್ದ ಹರ್ಷ ಈ ಚಿತ್ರದ ನಿರ್ದೇಶಕ. ಆದರೂ 'ಚಿಂಗಾರಿ' ರಿಲೀಜಾಗುವ ಮುನ್ನವೇ ಹರ್ಷ "ನನ್ನ ಮುಂದಿನ ಪ್ರಾಜೆಕ್ಟ್‌ಗೆ ಒಂದು ಕೋಟಿ ಸಂಭಾವನೆ ತಗೋತೀನಿ" ಅಂತಾ ತಲೆಮೇಲೆ ಭಾರ ಇಟ್ಟುಕೊಂಡಂತೆ ಮಾತಾಡುತ್ತಿದ್ದಾರೆ ಅನ್ನೋದು ಸದ್ಯದ ಆರೋಪ.

ಒಂದೇ ಒಂದು ವಾರದಲ್ಲಿ 'ಹರ್ಷ ಒಂದು ಕೋಟಿ ಪಡೀತಾರಾ?' 'ದರ್ಶನ್ ಗೆಲುವಿನ ಓಟ ಮುಂದುವರೆಯಲಿದೆಯಾ?' ಎಂಬುದು ಖಚಿತವಾಗಿ ಗೊತ್ತಾಗಲಿದೆ.



# ಲಕ್ಷ್ಮೀ ಗೋಪಾಲಸ್ವಾಮಿಯ 'ಹುಡುಗ'

'ನನಗೆ ಇಷ್ಟ ಆಗೋ ಹುಡುಗನ್ನ ನೋಡೋಕೆ ನಾನೂ ಕಾಯ್ತಾ ಇದೀನಿ......!'

-ಹೀಗೆಂದು ಮೊನ್ನೆ ಹೇಳಿಕೊಂಡಿದ್ದಾಳೆ ಚೆಲುವೆ ನಟಿ ಲಕ್ಷ್ಮೀ ಗೋಪಾಲಸ್ವಾಮಿ. ಮಲಯಾಳಿ ಟಿವಿಯೊಂದರಲ್ಲಿ ಲಕ್ಷ್ಮೀ ಮಾತನಾಡುತ್ತಿದ್ದಾಗ 'ನಿನ್ನ ಮದುವೆ ಯಾವಾಗ?' ಅಂತ ಪ್ರಶ್ನೆ ಬಂದಿದೆ. ಇದನ್ನು ಕೇಳಿದ ತಕ್ಷಣ ಕಣ್ಣರಳಿಸಿ ನಗುತ್ತಾ "ನಾನು ಎಲ್ಲಾದರೂ ಹೋಗ್ತಾ ಬರ್ತಾ ಇರೋವಾಗ 'ಚಂದ ಕಾಣೋ ಹುಡುಗರನ್ನು ಗಮನಿಸುತ್ತೇನೆ. ಕೆಲವು ಸಾರಿ ಅವರಿಗೆ ಮದುವೆ ಆಗಿರೋ ವಿಚಾರ ಆಮೇಲೆ ಗೊತ್ತಾಗುತ್ತೆ. ಕೆಲವು ಸಾರಿ ಬೇರೆ ಹುಡುಗರು ಏನೇನೊ ಕಾರಣಕ್ಕೆ ಮ್ಯಾಚ್ ಅನಿಸಲ್ಲ. ಆಗ ನಾನು ನಕ್ಕು ಸುಮ್ಮನಾಗುತ್ತೇನೆ. ಇರಲಿ, ನನಗೆ ಇಷ್ಟ ಆಗೋ ಹುಡುಗನ್ನ ಮೀಟ್ ಮಾಡಲು ನಾನೂ ಕಾತುರದಿಂದ ಕಾಯ್ತಾ ಇದೀನಿ" ಅಂದಿದ್ದಾಳೆ.

ಬೆಂಗಳೂರಿನ ಈ ನಾಟ್ಯ ಕಲಾವಿದೆಗೆ ಇಷ್ಟದ ಹುಡುಗ ಬೇಗ ಸಿಗಲಿ ಅಂತ ನೀವೂ ಹಾರೈಸಿ.



# ಇಪ್ಪತ್ತೆಂಟು ಕೋಟಿಯ ಗತಿಯೇನು?

ಇದು ಕನ್ನಡ ಚಿತ್ರರಂಗದ ಹೆಮ್ಮೆಯೋ, ದುರಂತವೋ ಗೊತ್ತಿಲ್ಲ. ಆದೇನೆಂದರೆ ಈ ಶುಭ ಶುಕ್ರವಾರದಂದು ಆರಂಭವಾಗುವ ಅದ್ದೂರಿ ಚಿತ್ರಗಳ ಬಿಡುಗಡೆಯ ಮೆರವಣಿಗೆ ಮೂರ್‍ನಾಲ್ಕು ವಾರ ಮುಂದುವರೆಯುತ್ತದೆ. ಅದರರ್ಥ ಪ್ರತಿ ಶುಕ್ರವಾರವೂ ಒಂದು ದೊಡ್ಡ ಬಜೆಟ್‌ನ ಚಿತ್ರ ತೆರೆ ಕಾಣಲಿದೆ. ಉದಾಹರಣೆಗೆ ಬರುವ ಶುಕ್ರವಾರದಂದು ಸುಮಾರು ಏಳು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ 'ಆರಕ್ಷಕ' ತೆರೆ ಕಂಡರೆ, ಮುಂದಿನ ವಾರ ದರ್ಶನ್ ನಟಿಸಿರುವ ಬಿಗ್ ಬಜೆಟ್‌ನ ಚಿತ್ರ 'ಚಿಂಗಾರಿ' ಬಿಡುಗಡೆಯಾಗುತ್ತಿದೆ. ಈ ಎರಡು ಚಿತ್ರಗಳ ನಂತರ ತೆರೆ ಕಾಣಲಿರುವುದು ಓಂ ಪ್ರಕಾಶ್ ರಾವ್ ನಿರ್ದೇಶನದ ಹನ್ನೆರಡು ಕೋಟಿ ರೂ. ವೆಚ್ಚದ 'ಎ-ಕೆ 56'. ಅದಾದನಂತರ ಎಸ್.ನಾರಾಯಣ್, ಗಣೇಶ್ ಜೋಡಿಯ 'ಮುಂಜಾನೆ' ಚಿತ್ರ ಕೂಡ ಬಿಡುಗಡೆಯಾಗಲು ಕ್ಯೂನಲ್ಲಿ ನಿಂತಿದೆ.

ಅಂದರೆ ಮುಂದಿನ ನಾಲ್ಕು ಶುಕ್ರವಾರ ಕನ್ನಡ ಚಿತ್ರರಂಗದ 28 ಕೋಟಿ ರೂಪಾಯಿಯ ಹಣೆಬರಹ ನಿರ್ಧಾರವಾಗಲಿದೆ. ಇದು ಒಂದು ರೀತಿಯಲ್ಲಿ ನಾವು ಹೆಮ್ಮೆಪಡುವಂಥದ್ದು ನಿಜ. ಆದರೆ ಕನ್ನಡ ಚಿತ್ರಗಳೇ ಹೀಗೆ ವಾರಕ್ಕೊಂದು ಬಿಡುಗಡೆಯಾಗಿ ಪರಸ್ಪರ ಪೈಪೋಟಿಗಿಳಿದರೆ ಚಿತ್ರರಂಗ ಉದ್ಧಾರವಾಗುವುದಾದರೂ ಹೇಗೆ? ಇಂತಹ ಪೈಪೋಟಿ ಕನ್ನಡ ಚಿತ್ರರಂಗವನ್ನು ಹಿಸುಕಿಹಾಕುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಒಬ್ಬ ಪ್ರೇಕ್ಷಕ ವಾರಕ್ಕೊಂದು ಬಿಗ್ ಬಜೆಟ್‌ನ ಚಿತ್ರ ನೋಡುವಷ್ಟು ಆರ್ಥಿಕ ಗಟ್ಟಿತನ ಹೊಂದಿಲ್ಲ. ಸಾಧಾರಣವಾಗಿ ಭಾರೀ ಬಂಡವಾಳದ ಚಿತ್ರ ತೆರೆ ಕಂಡ ನಂತರ ಎರಡು ಮೂರು ವಾರ ಹೊಸ ಚಿತ್ರ ಅಥವಾ ಮತ್ತೊಂದು ಅದ್ದೂರಿ ಚಿತ್ರ ಬಿಡುಗಡೆಯಾಗದಂತೆ ಈ ಹಿಂದೆ ಎಚ್ಚರ ವಹಿಸಿಕೊಳ್ಳಲಾಗುತ್ತಿತ್ತು. ಅಂತಹ ಒಂದು ಒಪ್ಪಂದ ಅಥವಾ ರಾಜೀಸೂತ್ರ ನಿರ್ಮಾಪಕರನ್ನು ಬಚಾವು ಮಾಡುತ್ತಿತ್ತು. ಆದರೆ ಈಗ ಕನ್ನಡ ಚಿತ್ರರಂಗದಲ್ಲಿ ಹಿಂದಿನಂತೆ ಸೌಹಾರ್ದಯುತ ವಾತಾವರಣವಿಲ್ಲ ಎಂಬುದಕ್ಕೆ ಈ ನಾಲ್ಕು ಚಿತ್ರಗಳು ಸಾಲುಸಾಲಾಗಿ ಬಿಡುಗಡೆಯಾಗುತ್ತಿರುವುದೇ ಸಾಕ್ಷಿ. ಈ ನಾಲ್ವರಲ್ಲಿ ಯಾರು ಉತ್ತಮರು? ಯಾರು ಗೆಲ್ಲುತ್ತಾರೆ? ಯಾರು ಮನೆ-ಮಠ ಕಳೆದುಕೊಳ್ಳುತ್ತಾರೆ? ಎಂಬುದರ ಬಗ್ಗೆ ಈಗ ಗಾಂಧಿನಗರದಲ್ಲಿ ಬಾಜಿದಾರರು ಮಾತನಾಡಲು ಆರಂಭಿಸಿದ್ದಾರೆ.

# ಎಡವಿಬಿದ್ದ ಬುಲ್ಡೋಜರ್ಸ್

ಮೊನ್ನೆ ಹೈದರಾಬಾದ್‌ನಲ್ಲಿ ನಡೆದ ಸೆಲಬ್ರಿಟಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕರ್ನಾಟಕ ಬುಲ್ಡೋಜರ್ ತಂಡ ತೆಲುಗು ವಾರಿಯರ್ಸ್ ತಂಡದ ವಿರುದ್ಧ ಸೋಲು ಕಂಡಿತು. ದರ್ಶನ್ ಅಭಿಮಾನಿಗಳ ಪ್ರಕಾರ ಇದಕ್ಕೆ ಕಾರಣ "ನಮ್ಮ ಗುರು ಚಾಲೆಂಜಿಂಗ್ ಸ್ಟಾರ್ ದರ್ಶನ್ ತಂಡದಲ್ಲಿ ಇಲ್ಲದ ಕಾರಣ ಯಾರಿಗೂ ಹೈದರಾಬಾದ್ ನೀಡಿದ ಚಾಲೆಂಜ್‌ನ್ನು ಸ್ವೀಕರಿಸಲಾಗಲಿಲ್ಲ!"

ಆದರೆ ನಾಯಕ ಸುದೀಪ್ ಅವರ ಬಲಗೈ ಬಂಟ ಎಂದೇ ಖ್ಯಾತಿ ಮತ್ತು ಕುಖ್ಯಾತಿಯನ್ನು ಗಳಿಸಿದ್ದ ನಿರ್ಮಾಪಕ ಶಂಕರ್ ಗೌಡರ ಅಭಿಮಾನಿಗಳ ಪ್ರಕಾರ "ಶಂಕರೇಗೌಡರು ಈ ತಂಡದಲ್ಲಿ ಇದ್ದಿದ್ದರೆ ಕಿಚ್ಚ ಸುದೀಪನ ತಂಡ ಖಂಡಿತವಾಗಿಯೂ ಗೆಲ್ಲುತ್ತಿತ್ತು." ವಾಸ್ತವವಾಗಿ ಸದ್ಯಕ್ಕೆ ಸುದೀಪ್ ಕ್ರಿಕೆಟ್‌ನಲ್ಲಿ ಮಾತ್ರವಲ್ಲ, ಸಿನಿಮಾ ರಂಗದಲ್ಲೂ ಈ ಶಂಕರೇಗೌಡರನ್ನು ದೂರವಿಟ್ಟಿದ್ದಾರೆ. ಈಗ ಶಂಕರೇಗೌಡರ ಸ್ಥಾನವನ್ನು ದ್ವಾರಕೀಶ್ ಅವರ ಪುತ್ರ ಯೋಗೀಶ್ ಸಮರ್ಪಕವಾಗಿ ನಿಭಾಯಿಸುತ್ತಿದ್ದಾರೆ. ಸಹಜವಾಗಿಯೇ ಇದರಿಂದ ಗೌಡರ ಅಭಿಮಾನಿಗಳಿಗೆ ನಿರಾಶೆಯಾಗಿದ್ದು ಅವರು ಇಂತಹ ತರ್ಕಗಳನ್ನು ಮುಂದಿಡುತ್ತಿದ್ದಾರೆ. ಅದೆಲ್ಲ ಏನೇ ಇರಲಿ, ಕನ್ನಡ ಚಿತ್ರರಂಗದ ನಾಯಕಿಯರು ಯಾಕೆ ಕ್ರೀಡಾಂಗಣಕ್ಕೆ ಹೋಗಿ ನಮ್ಮ ಹೀರೋಗಳನ್ನು ಹುರಿದುಂಬಿಸುತ್ತಿಲ್ಲ ಎಂಬ ಪ್ರಶ್ನೆ ಹಲವರನ್ನು ಕಾಡುತ್ತಿದೆ. ಸಾಧಾರಣವಾಗಿ ಈ ಕ್ರಿಕೆಟ್ ಪಂದ್ಯಗಳಲ್ಲಿ ಕಂಡುಬರುತ್ತಿರುವ ನಾಯಕಿಯರೆಂದರೆ ಮಾಧುರಿ ಬಟ್ಟಾಚಾರ್ಯ ಮತ್ತು ತೇಜಸ್ವಿನಿ ಮಾತ್ರ. ಇವರಿಬ್ಬರನ್ನು ಹೊರತುಪಡಿಸಿದರೆ ಬೇರೆ ಯಾವ ನಾಯಕಿಯರೂ ಕ್ರೀಡಾಂಗಣಕ್ಕೆ ಕಾಲಿಡುತ್ತಿಲ್ಲ.

ಹೇಳಿಕೇಳಿ ಮಾಧುರಿ ಬಟ್ಟಾಚಾರ್ಯ ಒಂದೆರಡು ತೋಪು ಚಿತ್ರಗಳಲ್ಲಿ ನಟಿಸಿರುವಾಕೆ. ಆದರೆ ಆಕೆ ಕರ್ನಾಟಕ ಬುಲ್ಡೋಜರ್ ತಂಡದ ಮಾಲೀಕ ನೈಸ್ ಖದೀಮ ಅಶೋಕ್ ಖೇಣಿಗೆ ಆಪ್ತಳಾಗಿರುವುದರಿಂದ ಆಕೆಗೆ ಸಿಸಿಎಲ್‌ನ ಮುಖ್ಯ ಅಂಬಾಸಿಡರ್ ಆಗಿ ಸ್ಥಾನ ಗಿಟ್ಟಿದೆ. ಹೀಗಾಗಿ ಆಕೆಗೆ ಸಿಸಿಎಲ್‌ನಲ್ಲಿ ವಿಶೇಷವಾದ ಮರ್ಯಾದೆಯೂ ಸಿಗುತ್ತಿದೆ. ಇದನ್ನು ಕಂಡು ಕನ್ನಡದ ಇತರೆ ನಾಯಕಿಯರೆಲ್ಲ ಸಿಸಿಎಲ್‌ಅನ್ನು ಬಾಯ್ಕಾಟ್ ಮಾಡಿರುವಂತಿದೆ.

# 'ಉದಯವಾಣಿ'ಗೆ ಜಾಹೀರಾತು ಭಯ!

ಕನ್ನಡ ಚಿತ್ರರಂಗದ ವಕ್ತಾರರಂತೆ 'ಕನ್ನಡಪ್ರಭ' ಮತ್ತು 'ಉದಯವಾಣಿ' ಪತ್ರಿಕೆಗಳು ಕೆಲಸ ಮಾಡುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಸಾಧಾರಣವಾಗಿ ಇವೆರಡು ಪತ್ರಿಕೆಗಳು ಎಂತಹ ಕೆಟ್ಟದರ ಬಗ್ಗೆಯೂ ಕಟುವಾಗಿ ವಿಮರ್ಶೆ ಮಾಡುವುದಿಲ್ಲ. ಬದಲಿಗೆ ಆ ಚಿತ್ರದ ಒಳ್ಳೆಯ ಅಂಶವನ್ನು ಹೈಲೈಟ್ ಮಾಡಿ ಆ ಚಿತ್ರತಂಡವನ್ನು ಸಂತೋಷಪಡಿಸುತ್ತಾರೆ. ಇದಕ್ಕೆಲ್ಲ ಕಾರಣ ಆ ಪತ್ರಿಕೆಗೆ ಚಿತ್ರರಂಗದಿಂದ ಹರಿದುಬರುವ ಜಾಹೀರಾತು ಹಣ. ಒಂದುವೇಳೆ ಚಿತ್ರವನ್ನು ತೆಗಳಿದರೆ ಆ ಚಿತ್ರದ ನಿರ್ಮಾಪಕರು ಪತ್ರಿಕೆಯ ಆಡಳಿತಮಂಡಳಿ ಬಳಿ ಹೋಗಿ "ನಾವು ನಿಮಗೆ ಜಾಹೀರಾತು ನೀಡಿಲ್ಲವೇ?" ಎಂದು ರೋಪು ಹೊಡೆಯುವುದೂ ಸರ್ವೆಸಾಮಾನ್ಯ. ಈ ವಿಷಯ ಯಾಕೆ ಈಗ ಅಂದರೆ ಇತ್ತೀಚೆಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ವಿರುದ್ಧ ನಿರ್ಮಾಪಕರ ಸಂಘ ಒಂದು ಜಾಹೀರಾತನ್ನು ನೀಡಿ ಅದರಲ್ಲಿ ಮಂಡಳಿಯ ಪದಾಧಿಕಾರಿಗಳು ಲಂಚ ಸ್ವೀಕರಿಸಿ, ಪರಭಾಷಾ ಚಿತ್ರಗಳನ್ನು ಹೆಚ್ಚಿನ ಸಂಖ್ಯೆಯ ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡುತ್ತಿದ್ದಾರೆಂದು ಆರೋಪ ಮಾಡಿತ್ತು. ಆದರೆ ಈ ಜಾಹೀರಾತನ್ನು ಪ್ರಕಟಿಸಲು 'ಉದಯವಾಣಿ' ಪತ್ರಿಕೆ ನಿರಾಕರಿಸಿತಂತೆ. ಅಷ್ಟೇ ಅಲ್ಲ, ಅದಕ್ಕೆ ಸಂಬಂಧಪಟ್ಟ ಸುದ್ದಿಗಳನ್ನೂ ಆ ಪತ್ರಿಕೆ ಪ್ರಕಟಿಸಲಿಲ್ಲ. ಇದಕ್ಕೆ ಕಾರಣ ಇಷ್ಟೆ, ಒಂದು ವೇಳೆ ಈ ಜಾಹೀರಾತು ಅಥವಾ ಸುದ್ದಿಯನ್ನು ಪ್ರಕಟಿಸಿದರೆ ನಾಳೆ ಚಲನಚಿತ್ರ ವಾಣಿಜ್ಯ ಮಂಡಳಿಯು 'ಉದಯವಾಣಿ' ಪತ್ರಿಕೆಗೆ ಜಾಹೀರಾತುಗಳನ್ನು ತಡೆಹಿಡಿಯುತ್ತದೆಂಬ ಭಯ!

'ಉದಯವಾಣಿ' ತರಹದ ಪತ್ರಿಕೆ ಹೇಗೆ ಚಿತ್ರರಂಗದ ಮರ್ಜಿಯಲ್ಲಿ ಬದುಕುತ್ತಿದೆ ಎಂಬುದಕ್ಕೆ ಇದೊಂದು ಪುಟ್ಟ ಉದಾಹರಣೆ. ಆದರೆ ಮಜಾ ಏನೆಂದರೆ ತಮ್ಮ ಜಾಹೀರಾತನ್ನು ಪ್ರಕಟಿಸಲು ಒಪ್ಪದ 'ಉದಯವಾಣಿ' ವಿರುದ್ಧ ಈಗ ನಿರ್ಮಾಪಕರೆಲ್ಲ ಸಿಟ್ಟಾಗಿದ್ದರೆ! ಅವರೆಲ್ಲ ತಮ್ಮ ಸಿನಿಮಾಗಳ ಜಾಹೀರಾತನ್ನು ಈ ಪತ್ರಿಕೆಗೆ ಕೊಡಲು ನಿರಾಕರಿಸಬಹುದು ಎಂಬ ಮಾತು ಈಗ ಕೇಳಿ ಬರುತ್ತಿದೆ!!





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Fax : 26604536